ವಾರಪತ್ರಿಕೆ

ರಾಗಸಂಗಮ

4-10-92 ರೂ. 4-50



ಈ ವಾರದ ಸಂಪೂರ್ಣ ಕಾದಂಬರಿ

ಹೊಂಬೆಳಕು

ಭಾರತಿ ಕೇಶವ್

ರಾಗಸಂಗಮ

ಕನ್ನಡಿಗರ ಮನೆ ಮನೆಯ ವಾರಪತ್ರಿಕೆ

ಸಂಗಮ : 15 4–10–92 ರಾಗ : 32

ಕಾದಂಬರಿ ವಿಭಾಗ

ಮ್ಯಾಗಜಿನ್ ವಿಭಾಗ

ಪ್ರಧಾನ ಸಂಪಾದಕ
ಎನ್. ಸುಂದರ್ ರಾಜನ್

ಕಲೆ
ಜೆ...

ಸಂಪಾದಕಿ
ಕಮಲಾ ಸುಂದರ್ ರಾಜನ್

ಮುಖಪುಟ
ಸಾಧನ

ಸಹಾಯಕ ಸಂಪಾದಕಿ
ಎಸ್. ರೇಖಾ

ವರ್ಣ ಪಾರದರ್ಶಿಕೆ
ಕೆ. ಎನ್. ನಾಗೇಶ್‌ಕುಮಾರ್

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646,
41, ಕೋಟೆ 'ಬಿ' ಬೀದಿ
ಬೆಂಗಳೂರು–560 002
ದೂರವಾಣಿ : 625004

ಅಂಚೆ ವೆಚ್ಚ ಸೇರಿದ ಚಂದಾ ವಿವರ

52 ಸಂಚಿಕೆಗಳು (1 ವರ್ಷ)	ರೂ. 225
26 ಸಂಚಿಕೆಗಳು (6 ತಿಂಗಳು)	ರೂ. 117
ಬಿಡಿ ಪ್ರತಿಯ ಬೆಲೆ	ರೂ.4.50

ಶೀಘ್ರದಲ್ಲಿ...

ಸಂಗಮ ಪ್ರಕಾಶನ

ಸಂಸ್ಥೆಯಿಂದ

ಮತ್ತೊಂದು

ಹೊಸ

ವಿನೂತನ

ವಾರಪತ್ರಿಕೆ

ಕಾದಂಬರಿ

ವಿಭಾಗ



ಭಾರತಿ ಕೇಶವ್

ಸಂಪೂರ್ಣ ಕಾದಂಬರಿ

ಹೊಂಬೆಳಕು

ಭಾರತಿ ಕೇಶವ್




ರಾಜಣ್ಣ

“ಸುಮತಿ, ಹೀಗಾಗುತ್ತೆ ಅಂತ ನಿನಗೆ ಗೊತ್ತಿತ್ತೇನಮ್ಮ, ನಾನು ಸ್ವಲ್ಪ ಪ್ರಯತ್ನಪಟ್ಟಿದ್ದರೆ ಈ ಮದುವೆ ತಪ್ಪಿಸಬಹುದಿತ್ತು. ಅವಳು ಕುಣಿತಾಳೆಂದು ನೀನು ಕುಣಿಯಬೇಡ ಎಂದ ಅಪ್ಪ ಅಮ್ಮರ ಮಾತಿಗೆ ನಾನು ಸುಮ್ಮನಾದೆ.”

“ಹಳೆಯದನ್ನೆಲ್ಲ ಮರೆತುಬಿಡು ಸುಮತಿ. ನೀನೂ ಎಲ್ಲ ಕಾಲೇಜು ಹುಡುಗಿಯರಂತೆ ಇರುವುದನ್ನು ಕಲಿ. ಅಪ್ಪಿತಪ್ಪಿ ಕೂಡ ನಿನ್ನ ಹಳೆಯ ಕತೆಯನ್ನು ಕಾಲೇಜಿನಲ್ಲಿ, ಹಾಸ್ಟೆಲಿನಲ್ಲಿ ಹೇಳಲು ಹೋಗಬೇಡ. ನಗೆಪಾಟಲಿಗೀಡಾದೀಯ.”



ನಂದಿತಾ



ಶಂಕರಪ್ಪ

“ನಮ್ಮ ವಂಶದಲ್ಲೇ ಯಾರೂ ಡಾಕ್ಟರ್ ಆಗಿರಲಿಲ್ಲ ಸುಮತಿ. ಕಡೆಗೂ ನೀನು ಅದನ್ನು ಸಾಧಿಸಿಬಿಟ್ಟೆ. ಈ ಊರಿನಲ್ಲೇ ನೀನು ಸೇವೆ ಸಲ್ಲಿಸುವುದಾದರೆ ನಾನು ಎಲ್ಲ ಅನುಕೂಲವನ್ನೂ ಮಾಡಿಕೊಡುತ್ತೇನೆ.”

ಈ ಪ್ರಮುಖ ಪಾತ್ರಗಳ ಕಥೆಯೇ ಈ ಕಾದಂಬರಿ.

ಚೈತ್ರಮಾಸದ ಸುಂದರ ಸಂಜೆ. ಸಂಜೆ ಎಂದ ಮಾತ್ರಕ್ಕೆ ಕತ್ತಲು ಇನ್ನೂ ಬಹಳ ಸಮೀಪವೇನೂ ಇಲ್ಲ. ಸೂರ್ಯ ನಡುನೆತ್ತಿಯಿಂದ ದೂರ ಹೋಗಿ ಎರಡು ಮೂರು ತಾಸಾಗಿರಬಹುದು ಅಷ್ಟೆ. ಬೆಂಗಳೂರಿನಿಂದ ಹೊರಟ ಬಸ್ಸು ತುಮಕೂರು, ತಿಪಟೂರು ಮಾರ್ಗವಾಗಿ ರಸ್ತೆಯನ್ನು ಹಿಂದೆ ಹಾಕುತ್ತ ಮುಂದೆ ಮುಂದೆ ಸಾಗುತ್ತಿದೆ. ಬಸ್ಸಿನಲ್ಲಿ ಸಹ ಪ್ರಯಾಣಿಕರೊಂದಿಗೆ ಪ್ರಯಾಣ ಬೆಳೆಸುತ್ತಿರುವ ಸುಮತಿ ಬಿಸಿಲಿನ ತಾಪವನ್ನು ತಾಳಲಾರದೆ ಕೈಯಲ್ಲಿನ ಕರವಸ್ತ್ರದಿಂದ ಮುಖ, ಕೈ, ಕತ್ತು ಒರೆಸಿಕೊಳ್ಳುತ್ತಿದ್ದಾಳೆ. ಅವಳ ದೃಷ್ಟಿ ಕಿಟಕಿಯಿಂದ ಹೊರಗಡೆ ನೆಟ್ಟಿದೆ. ಚೈತ್ರಮಾಸವೆಂದಮೇಲೆ ಕೇಳಬೇಕೆ? ಎಲ್ಲ ಗಿಡಮರಗಳೂ ಚಿಗುರು, ತಳಿರಿನಿಂದ ನಳನಳಿಸುತ್ತಿದೆ. ಪ್ರಕೃತಿಯ ಚೆಲುವನ್ನು ವೀಕ್ಷಿಸಿ ಆನಂದ ಹೊಂದುವವರಲ್ಲಿ ಅಗ್ರಗಣ್ಯಳು ಸುಮತಿ. ಅವಳು ಹುಟ್ಟಿ ಬೆಳೆದದ್ದೂ ಅಂತಾದ್ದೇ ವಾತಾವರಣದಲ್ಲಿ. ಅಂದಮೇಲೆ ಕೇಳಬೇಕೇ? ಆದರೂ ಇದೇ ಹಾದಿಯಲ್ಲಿ ಕಳೆದ ನಾಲ್ಕಾರು ವರುಷಗಳಿಂದ ಪ್ರಯಾಣಿಸುತ್ತಿರುವ ಅವಳಿಗೆ ಹೊರಗಿನ ನೋಟದಲ್ಲಿನ ವ್ಯತ್ಯಾಸ ಸ್ಪಷ್ಟವಾಗಿ ಗೋಚರಿಸುತ್ತಿದೆ. ವರುಷ ವರುಷಕ್ಕೆ ಹೊರಗಡೆ ಕಾಣುವ ಗಿಡಮರಗಳ ಸಂಖ್ಯೆ ಕ್ಷೀಣಿಸುತ್ತಿದೆ. ಇದಕ್ಕೆ ಹೊಣೆ ಯಾರು? ಹೊರಗಡೆ ನಳನಳಿಸುವ ಪ್ರಕೃತಿಯಲ್ಲಿನ ಮರಗಿಡಗಳು ಮನುಷ್ಯನ ಬದುಕಿನೊಂದಿಗೆ ಅವಿನಾ ಸಂಬಂಧವನ್ನು ಹೊಂದಿದೆ. ಪ್ರಕೃತಿಯಿಲ್ಲದೆ ಜೀವಸಂಕುಲವಿಲ್ಲ. ಹಾಗಿದ್ದೂ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಮರಗಿಡಗಳನ್ನು ಕಡಿದು ಪ್ರಕೃತಿಯ ಒಡಲನ್ನು ಬರಿದಾಗಿಸುತ್ತಾನಲ್ಲ.

ಸುಮತಿ ಬೆಂಗಳೂರಿನಿಂದ ತನ್ನ ಸ್ಥಳವಾದ ಚೆಲುವಿನಹಳ್ಳಿಗೆ ಪ್ರಯಾಣ ಬೆಳೆಸುತ್ತಿದ್ದಾಳೆ. ಇವಳೇನೂ ಇಂದು ಬರುವ ಸಮಾಚಾರ ತಿಳಿಸಿ ಕಾಗದ ಪತ್ರ ಏನೊಂದೂ ಬರೆದಿಲ್ಲ. ಇದ್ದಕ್ಕಿದ್ದಂತೆ ಹೊರಟು ಬಂದಿದ್ದಾಳೆ. ಹಾಗೆ ಹೊರಟು ಬರಲು ಸ್ಪಷ್ಟವಾದ ಕಾರಣವೂ ಇದೆ. ಆದರೆ ಅದನ್ನು ಅಪ್ಪ, ಅಣ್ಣಂದಿರ ಮುಂದೆ ಹೇಗೆ ಹೇಳುವುದು ಎಂಬುದು ಈಗ ಅವಳ ಸಮಸ್ಯೆ. ಹೇಳಲೆಂದೇ ಬಂದಿರುವುದೇನೋ ನಿಜ. ಆದರೆ ತನ್ನಿಂದ ಈ ವಿಚಾರ ಪ್ರಸ್ತಾಪಿಸಲು ಸಾಧ್ಯವಾದೀತೇ ಎಂಬುದು ಅವಳ ಸಂಶಯ. ಹೇಳದೆ ತನ್ನಲ್ಲಿಯೇ ಇಟ್ಟುಕೊಂಡೆನಾದರೆ ತನ್ನ ಭವಿಷ್ಯದ ಮುಖ್ಯವಾದ ತಿರುವು, ಘಟನೆ ಘಟಿಸಲು ಸಾಧ್ಯವೇ? ಆದ್ದರಿಂದ ಹೇಳಬೇಕಾದ ವಿಚಾರವನ್ನು ಹೇಳಲೇಬೇಕು. ಆದರೆ ಹೇಗೆ?

ಹೌದು ಎಲ್ಲಕ್ಕಿಂತ ಮುಖ್ಯವಾಗಿ ಈ ವಿಚಾರವನ್ನು ಅಪ್ಪನೊಂದಿಗೆ ಪ್ರಸ್ತಾಪಿಸಬೇಕು. ತನ್ನ ತಪ್ಪು ಒಪ್ಪುಗಳನ್ನೆಲ್ಲ ಒಡಲಲ್ಲಿ ಹಾಕಿಕೊಂಡು ಇದುವರೆಗೆ ಕಾಪಾಡಿರುವವರು ಅವರೇ ತಾನೇ? ಅವರು ಈ ವಿಚಾರವನ್ನು ಹೇಗಾದರೂ ತೆಗೆದುಕೊಳ್ಳಲಿ, ತನ್ನ ಮೇಲೆ ಕೋಪಗೊಳ್ಳಲಿ, ಬಯ್ಯಲಿ, ರೇಗಲಿ, ಪರವಾಗಿಲ್ಲ. ಅವರಿಗೆ ಮೊದಲು ಈ ಸಮಾಚಾರವನ್ನು ತಿಳಿಸಬೇಕು. ಅವರಾದರೂ ನನ್ನ ಮೇಲೆ ಏಕೆ ಮುನಿಸಿಕೊಳ್ಳುತ್ತಾರೆ? ಮುನಿಸಿಕೊಳ್ಳುವಂತಹುದು ಏನಿದೆ ಇದರಲ್ಲಿ? ಅವರು ಯಾವಾಗಲೂ ನನ್ನ ಕಷ್ಟಸುಖಗಳನ್ನೆಲ್ಲ ಆತ್ಮೀಯತೆಯಿಂದ ಕೇಳಿ ತಿಳಿದುಕೊಳ್ಳುತ್ತಾರೆ. ನಾನಾದರೋ ನನ್ನೆಲ್ಲ ಅಹವಾಲುಗಳನ್ನು ಸಂತೋಷವನ್ನೂ, ಸಂಕಟವನ್ನೂ, ಸಂಭ್ರಮವನ್ನೂ ಚಾಚೂ ತಪ್ಪದೆ ಅವರಿಗೆ ವಿವರಿಸಿ ಹೇಳುತ್ತೇನೆ, ಭಕ್ತ ಭಗವಂತನ ಮುಂದೆ ತನ್ನೆಲ್ಲ ಅಳಲನ್ನೂ ತೋಡಿಕೊಳ್ಳುವ ಹಾಗೆ. ಹೌದು ಅಪ್ಪ ನನ್ನ ಭಾಗಕ್ಕೆ ಕೇವಲ ತಂದೆ

ಮಾತ್ರವಲ್ಲ, ಗುರು, ದೈವ, ಪರಮದೈವ ಎಲ್ಲವೂ ಅವರೇ ಆಗಿದ್ದಾರೆ. ಹಾಗೆಂದು ಅವರು ಅತಿ ಮೃದು ಸ್ವಭಾವದವರೇನೂ ಅಲ್ಲ. ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ ಅಷ್ಟೆ.

ಅಪ್ಪ ನನ್ನ ಅಹವಾಲುಗಳನ್ನು ಮನ್ನಿಸದಿದ್ದರೆ ಆಶೋತ್ತರಗಳನ್ನು ಬೆಂಬಲಿಸದಿದ್ದರೆ ಇಂದು ಈ ಮಟ್ಟಕ್ಕೇರಲು ನನ್ನಿಂದ ಸಾಧ್ಯವಿತ್ತೇ? ಖಂಡಿತ ಇಲ್ಲ. ಮನೆಯಲ್ಲಿ ಇಬ್ಬರು ಗಂಡು ಮಕ್ಕಳನಂತರ ಮನೆಯ ಕಿರಿಯ ಮಗಳಾಗಿ ಹುಟ್ಟಿದ ನನ್ನಲ್ಲಿ ಅವರಿಗೆ ಎಲ್ಲಿಲ್ಲದ ಅಕ್ಕರೆ. ತನಗಾದರೋ ಅವ್ವನಿಗಿಂತ ಅಪ್ಪನ ಬಳಿಯೇ ಸಲಿಗೆ ಹೆಚ್ಚು. ಅವ್ವನ ಬಳಿ ಇದ್ದಾಗ ಇರುತ್ತಿದ್ದ ಕಟ್ಟುಪಾಡುಗಳು ಅಪ್ಪನ ಬಳಿ ಇರುತ್ತಿರಲಿಲ್ಲ. ಹಾಗಾಗಿ ಬಾಲ್ಯದಲ್ಲಿ ಅವ್ವನ ಬಳಿ ಕಾಲ ಕಳೆಯುತ್ತಿದ್ದುದಕ್ಕಿಂತ ಹೆಚ್ಚಾಗಿ ಅಪ್ಪನ ಜೊತೆಯಲ್ಲಿ ಹೊಲ, ಗದ್ದೆ, ತೋಟ ಎಂದು ಕಾಲ ಕಳೆಯುತ್ತಿದ್ದುದೇ ಹೆಚ್ಚು. ಅಲ್ಲದೆ ಅವ್ವನ ಬಳಿ ಇದ್ದರೆ ಏನಾದರೂ ಸಿಡಿಮಿಡಿ ಮಾಡುತ್ತಲೇ ಕೆಲಸ ಹಚ್ಚುತ್ತಿದ್ದಳು. ಮಾಡಿದ ಕೆಲಸ ಸರಿಯಾಗಿಲ್ಲವೆಂದು ಗೊಣಗುತ್ತಿದ್ದಳು. ಅದೇ ಅಪ್ಪನ ಬಳಿ ಇದ್ದಾಗ ಮನಸ್ಸು ಉಲ್ಲಾಸಭರಿತವಾಗಿರುತ್ತಿತ್ತು. ಸುತ್ತಲಿನ ಪ್ರಕೃತಿಯಲ್ಲಿನ ಹಸಿರೇ ಉಸಿರಾಗಿರುತ್ತಿತ್ತು. ಸುತ್ತಲಿನ ಹಸಿರನ್ನು ಕಂಡು ಮನಸ್ಸು ಮುದಗೊಳ್ಳುತ್ತಿತ್ತು. ಅಲ್ಲದೆ ಅಪ್ಪನದು ಶಾಂತ ಸ್ವಭಾವ. ಅವ್ವನ ಹಾಗೆ ಕೂಗಾಟ, ರೇಗಾಟ ಕಡಿಮೆ. ಸುಮತೀ, ಸುಮಕ್ಕ, ಸುಮವ್ವ ಎಂದು ಪ್ರೀತಿಯಿಂದ ತನ್ನನ್ನು ಕೂಗಿ ಕರೆಯುತ್ತ ಇರುತ್ತಿದ್ದರು. ಆಳುಗಳ ಕೈಯಿಂದ ತೆಂಗಿನಕಾಯನ್ನೋ, ಸಪೋಟ ಹಣ್ಣನ್ನೋ, ಬಾಳೇಹಣ್ಣಿನ ಚಿಪ್ಪನ್ನೋ ಕೀಳಿಸಿ ಕೊಡುತ್ತಿದ್ದರು. ಜೊತೆಯಲ್ಲಿ ಅವ್ವ ಮನೆಯಿಂದ ಕಳಿಸಿರುತ್ತಿದ್ದ ಬುತ್ತಿಯೂಟ ಬೇರೆ ಇರುತ್ತಿತ್ತು. ಅಪ್ಪನೊಂದಿಗೆ ಹೊಲ ಗದ್ದೆ ತೋಟದಲ್ಲಿದ್ದಾಗ ಸಮಯ ಜಾರಿದುದೇ ತನ್ನ ಅನುಭವಕ್ಕೆ ಬರುತ್ತಿರಲಿಲ್ಲ. ಹಾಗಾಗಿ ಮನೆಯಲ್ಲಿರುವುದಕ್ಕಿಂತ ಅಪ್ಪನೊಂದಿಗೆ ಹೊರಗೆ ಕಾಲ ಕಳೆಯುತ್ತಿದ್ದುದೇ ಹೆಚ್ಚು.

ಮನೆಗೆ ಬರುವ ವೇಳೆಗೆ ಅವ್ವ ಸಿಡಿಮಿಡಿ ಮಾಡುತ್ತಿದ್ದಳು.

"ಏನೇ ಸುಮತಿ, ಗಂಡುಬೀರಿಯ ಹಾಗೆ ಸದಾ ಹೊರಗೇ ಇರುತ್ತೀಯಲ್ಲ. ಮನೆಯಲ್ಲಿ ಕುಳಿತು ಕೆಲಸಕಾರ್ಯ ಏನಾದರೂ ಮಾಡಿಕೊಂಡಿರಬಾರದೇ?''

"ನಾನು ಅಪ್ಪನ ಜೊತೆಯಲ್ಲಿ ತೋಟಕ್ಕೆ ಹೋಗಿದ್ದೆ ಅವ್ವ.''

"ಅಲ್ಲೇನು ಕೆಲಸ ನಿನಗೆ, ಗಂಡಾಳುಗಳು ಕೆಲಸ ಮಾಡುವ ಕಡೆ.''

"ತೋಟದಲ್ಲಿ ಬರೀ ಗಂಡಾಳುಗಳು ಕೆಲಸ ಮಾಡುವುದಿಲ್ಲವ್ವ, ಹೆಣ್ಣಾಳುಗಳೂ ಇದ್ದಾರೆ.''

"ಬಾಯಿ ಹರಿಯ ಬಿಡಬೇಡವೇ ಬಜಾರಿ. ನಾಳೆ ನಿನ್ನಿಂದಾಗಿ ನಾವು ಮಾತು ಕೇಳಬೇಕಾದೀತು.''

"ಯಾಕೆ ಮಗುವನ್ನು ಗದರಿಕೊಳ್ಳುತ್ತೀ ಶಿವಮ್ಮ, ಅವಳು ಎಲ್ಲಿ ಹೋಗುತ್ತಾಳೆ. ಬೆಳಗಿನಿಂದ ಸಂಜೆಯುವರೆಗೆ ನನ್ನ ಬಳಿಯೇ ಇದ್ದಳು.''

"ಸರಿ ಸರಿ, ಗಂಡು ಹುಡುಗರನ್ನು ನಿಮ್ಮ ಜೊತೆ ತೋಟ, ಗದ್ದೆಗೆ ಕರೆದುಕೊಂಡು ಹೋಗಿ ಕೆಲಸಕಾರ್ಯ ಕಲಿಸಬೇಡವೇ?''

"ಮಕ್ಕಳು ಇನ್ನೂ ಚಿಕ್ಕವರು ಶಿವಮ್ಮ. ಆಡಿಕೊಂಡಿರಲಿ ಬಿಡಿ.''

"ಅವರು ಆಡಿಕೊಂಡಿರಲಿ, ನೀವು ನೋಡಿಕೊಂಡಿರಿ. ನಾನೊಬ್ಬಳು ಮೂಗೆತ್ತಿನ ಹಾಗೆ ಹಗಲು ರಾತ್ರಿ ದುಡಿಯುತ್ತೀನಿ.''

"ಹಾಗೇಕೆ ಹೇಳುತ್ತೀ ಶಿವಮ್ಮ ಮನೆಯ ಕೆಲಸ ಕಾರ್ಯಗಳಿಗೆ ನೀನೂ ಒಂದಿಬ್ಬರು ಆಳುಗಳನ್ನಿರಿಸಿಕೋ. ನೀನೂ ಸಂತೋಷವಾಗಿರು, ಮಕ್ಕಳೂ ಸಂತೋಷವಾಗಿರಲಿ. ಸುಮ್ಮನೆ ಆ ಹೆಣ್ಣು ಮಗುವಿನ ಮೇಲೆ ಯಾಕೆ ರೇಗುತ್ತೀ?''

"ನಾನೇಕೆ ರೇಗಲಿ ಹೇಳಿ. ಅದೂ ನಿಮ್ಮ ಮುದ್ದು ಮಗಳ ಮೇಲೆ. ತಲೆಯ ಮೇಲಿರಿಸಿಕೊಂಡು ಮೆರೆಸಲು ನೀವಿರುವಾಗ, ನನ್ನ ಮಾತಿಗೆ ಬೆಲೆ ಕೊಡುತ್ತಾಳೆಯೇ ಅವಳೀಗ?'' ಮಡದಿಯೊಡನೆ ವ್ಯರ್ಥ ವಾದ ಹೂಡಿ ಪ್ರಯೋಜನವೇನಿಲ್ಲ ಎಂದುಕೊಂಡು ಸುಮ್ಮನಾಗುತ್ತಿದ್ದರು ಅಪ್ಪ.

ಅವ್ವ ಹಾಗೆ ಗದರಿಕೊಳ್ಳುತ್ತಾಳೆ ಎಂದು ಅವಳ ಮೇಲೆ ಅಸಮಾಧಾನವೇನೂ ಇರಲಿಲ್ಲ ನನಗೆ. ಅವಳ ಸ್ವಭಾವವೇ ಹಾಗೆ. ನನಗೆ ತಿಳುವಳಿಕೆ ಬಂದಂದಿನಿಂದ ಅಪ್ಪನನ್ನು ಅಭ್ಯಸಿಸಿದ ಹಾಗೆ ಅವ್ವನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಅಪ್ಪನದು ಎಷ್ಟು ವಿಶಾಲದೃಷ್ಟಿಯೋ, ಅವ್ವನದು ಅಷ್ಟೇ ಸಂಕುಚಿತ ದೃಷ್ಟಿ. ಆ ಹಳ್ಳಿ, ಹಳ್ಳಿಯ ಪರಿಸರವನ್ನೇ ಪ್ರಪಂಚ ಎಂದು ಬಗೆದವಳು ಅವಳು. ಮೂಢನಂಬಿಕೆಗಳ ತವರೂರು ಅವಳ ಮನಸ್ಸು. ದುಡಿಮೆಯಲ್ಲಿ ಮಾತ್ರ ಗಟ್ಟಿಗಳು ಅವಳು. ಅಷ್ಟು ದೊಡ್ಡ ಹಳ್ಳಿ ಮನೆ, ಜನ, ಜಾನುವಾರು ಎಲ್ಲವನ್ನೂ ಲೀಲಾಜಾಲವಾಗಿ ಸಂಬಾಳಿಸುತ್ತಿದ್ದಳು. ಅವಳನ್ನೊಂದು ದುಡಿಯುವ ಯಂತ್ರ ಎಂದರೂ ತಪ್ಪಿಲ್ಲ.

"ಅವ್ವ, ಇಡೀ ದಿನ ಏನಾದರೊಂದು ಕೆಲಸ ಅಂಟಿಸಿಕೊಂಡು ದುಡಿಯುತ್ತಲೇ ಇರುತ್ತೀಯಲ್ಲ, ನಿನಗೆ ಬೇಸರವಿಲ್ಲವೇ?''

"ಬೇಸರ ಯಾಕೆ, ಹುಟ್ಟಿದ ಮೇಲೆ ಉಣ್ಣಬೇಕು, ಉಣ್ಣಬೇಕಾದರೆ ದುಡಿಯಬೇಕು, ಹುಟ್ಟುವುದು, ಉಣ್ಣುವುದು, ದುಡಿಯುವುದು ಈ ಮೂರಕ್ಕೂ ಪರಸ್ಪರ ಸಂಬಂಧವಿದೆ ಸುಮತಿ.''

"ನೀನು ಹೇಳುವುದು ದಿಟ, ಆದರೆ ನಿನಗೆ ಸ್ವಲ್ಪ ಹೊತ್ತೂ ಸುಮ್ಮನೆ ಕುಳಿತುಕೊಳ್ಳಬೇಕನ್ನಿಸುವುದಿಲ್ಲವೇ? ಮನೋರಂಜನೆ ಬೇಕೆನಿಸುವುದಿಲ್ಲವೇ?''

"ಸುಮ್ಮನೆ ಕುಳಿತು ಮಾಡುವುದೇನು ಸುಮತಿ, ಕೆಲಸದ ಬದಲಾವಣೆಯೇ ವಿಶ್ರಾಂತಿ. ಇನ್ನು ಮನೋರಂಜನೆಗೆ ಎಡೆಯೆಲ್ಲಿದೆ ಈ ಹಳ್ಳಿಯಲ್ಲಿ. ರೈತರೇ ಜಾಸ್ತಿ ಈ ಹಳ್ಳಿಯಲ್ಲಿ. ಹೊತ್ತು ಮೂಡುವ ಹೊತ್ತಿಗೆ ಮನೆ ಬಿಟ್ಟವರು, ಹೊತ್ತು ಕಂತುವ ಹೊತ್ತಿಗೆ ಹಕ್ಕಿಗಳು ಗೂಡುಸೇರಿಕೊಳ್ಳುವ ಹಾಗೆ ಮನೆ ಸೇರಿಕೊಳ್ಳುತ್ತಾರೆ. ದೇಹಕ್ಕೆ ದಣಿವಾಗಿರುತ್ತದೆ ಇಡೀ ದಿನದ ದುಡಿಮೆಯಿಂದ. ಮುದ್ದೆ, ಸಾರು ಉಂಡೊಡನೆ ನಿದ್ರಾಲೋಕಕ್ಕೆ ಜಾರುತ್ತಾರೆ. ನನ್ನ ಪಾಡಾದರೂ ಅಷ್ಟೆ. ಮನರಂಜನೆಗೆಂದೇ ವೇಳೆಯೆಲ್ಲಿದೆ? ಬೀಸುವಾಗಲೋ, ರುಬ್ಬುವಾಗಲೋ, ಕುಟ್ಟುವಾಗಲೋ ಇಲ್ಲ ದೇವರಿಗೆ ದೀಪ ಇಡುವಾಗಲೋ ಒಂದೆರಡು ದಾಸರ ಪದ ಹಾಡಿಕೊಂಡರೆ ಅಷ್ಟೇ ಸಾಕು. ದಣಿದ ದೇಹಕ್ಕೆ ಮಲಗಿದೊಡನೆ ಸೊಂಪಾಗಿ ನಿದ್ದೆ ಬರುತ್ತದೆ.''

ರಾಜಣ್ಣ, ರಂಗಣ್ಣ ಇಬ್ಬರು ಅಣ್ಣಂದಿರಲ್ಲೂ ತನಗೆ ಒಂದೇ ಸಮನಾದ ಅಕ್ಕರೆ ಇದ್ದರೂ



ಅವರಿಬ್ಬರ ಸ್ವಭಾವ ಮಾತ್ರ ತೀರಾ ಭಿನ್ನ ಎಂಬುದರಲ್ಲಿ ಎರಡು ಮಾತಿಲ್ಲ. ರಾಜಣ್ಣ ಸ್ವಭಾವತಾ ಬಲು ಮಿದು. ಹಿತಿಮಿತ ಮೃದು ಭಾಷಿ ಅವನು. ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟುವವನು ಅವನು. ಅವನಿಗೆ ಮಾತು ಬೆಳ್ಳಿ, ಮೌನ ಬಂಗಾರ ಎಂಬ ಮಾತಿನಲ್ಲಿ ಹೆಚ್ಚು ವಿಶ್ವಾಸ.

ರಂಗಣ್ಣನ ಪ್ರಕೃತಿ ಇದಕ್ಕೆ ವಿರುದ್ಧವಾದುದು. ಅವನು ಮನೆಯಲ್ಲಿದ್ದಾನೆ ಎಂದರೆ ಹತ್ತುಮಂದಿ ಮಾಡುವ ಗಲಾಟೆಯನ್ನು ಅವನೊಬ್ಬನೇ ಮಾಡುತ್ತಾನೆ ಬೇಕಾದರೆ. ಮಾತು ಜೋರು. ಯಾರಿಗೆ ತನ್ನ ಮಾತು ಪ್ರಿಯ, ಪ್ರಿಯವಲ್ಲ ಎಂಬುದನ್ನೂ ಅರಿಯದೆ ಸುಮ್ಮನೆ ಏನಾದರೂ ಬಡಬಡಿಸುತ್ತಲೇ ಇರುತ್ತಾನೆ. ಪಕ್ಕದ ತೋಟದ ಕಾಯನ್ನೋ, ಹಣ್ಣನ್ನೋ ಕೀಳಲು ಹಿಂಜರಿಯದ ಪ್ರವೃತ್ತಿ ಅವನದು. ಅವನು ಏನು ಹೇಳುತ್ತಾನೋ ಅದು ತಪ್ಪೋ ಒಪ್ಪೋ ಅಸ್ತು ಎಂದುಬಿಟ್ಟರೆ ಸರಿ, ಅವನಷ್ಟು ಒಳ್ಳೆಯವರು ಇಲ್ಲ. ಇದು ಹೀಗಲ್ಲ ಹಾಗೆ ಎಂದರೆ ಅವನಿಗದು ಹಿಡಿಸುವುದಿಲ್ಲ. ಒಬ್ಬಳೇ ತಾಯಿಯ ಇಬ್ಬರು ಗಂಡುಮಕ್ಕಳ ಗುಣದಲ್ಲಿ ಎಷ್ಟೊಂದು ವ್ಯತ್ಯಾಸ ಎಂದು ಚಕಿತಳಾಗಿದ್ದಾಳೆ ಸುಮತಿ ಹಲವು ಬಾರಿ. ನನ್ನ ಗುಣ ಸ್ವಭಾವವನ್ನು ರಾಜಣ್ಣನ ಗುಣ ಸ್ವಭಾವದೊಂದಿಗೆ ಹೋಲಿಸಬೇಡ. ಒಂದೇ ಕೈಯಿನ ಐದು ಬೆರಳುಗಳು ಸರಿಸಮವಾಗಿರುತ್ತದೆಯೇ ಎಂದು ಮರುಸವಾಲು ಎಸೆದಿದ್ದಾನೆ ರಂಗಣ್ಣ ಸುಮತಿಗೆ.

"ಯಾರ್ರೀ ಚೆಲುವಿನಹಳ್ಳಿ ಇಳಿಯಿರಿ, ನಿದ್ದೆ ಮಾಡ್ತಿದ್ದೀರೇನ್ರಿ.'' ಕಂಡಕ್ಟರ್ ಬಸ್ಸು ನಿಲ್ಲಿಸಿ ಕೂಗಿದಾಗ, ನೆನಪಿನಾಳದಿಂದ ಎಚ್ಚೆತ್ತ ಸುಮತಿ ತನ್ನ ಬಳಿ ಇದ್ದ ಎರಡು ಚೀಲಗಳನ್ನು ಹೆಗಲಿಗೆ ನೇತುಹಾಕಿಕೊಂಡು ಬಸ್ಸಿನಿಂದಿಳಿದಳು. ಚೆಲುವಿನಹಳ್ಳಿಗೆ ಎಂದು ನಾಮಫಲಕವಿದ್ದ ಕಲ್ಲಿನಿಂದ ಒಳ ಹಾದಿಯಲ್ಲಿ ನಾಲ್ಕು ಕಿಲೋಮೀಟರ್ ನಡೆಯಬೇಕು ಹಳ್ಳಿಮನೆ ತಲುಪಲು. ಹಿಂದೆ ಮುಂದೆ ಯಾವುದಾದರೂ ಗಾಡಿ ಬರುತ್ತಿದೆಯೇನೋ ಎಂದು ಒಮ್ಮೆ ಅವಲೋಕಿಸಿದಳು ಸುಮತಿ. ಯಾವುದೂ ಕಾಣದಾದಾಗ 'ತಪ್ಪು ನನ್ನದೇ. ಬರುತ್ತಿದ್ದೇನೆ ಎಂಬ ಒಂದು ತೃಣ ಸುದ್ದಿ, ಸುಳಿವು ಕೊಡದೆ ಬಂದರೆ ಅಪ್ಪ ಹೇಗೆ ಗಾಡಿ ಕಳಿಸುತ್ತಾರೆ' ಎಂದುಕೊಂಡು ಕಾಲು ಹಾದಿಯಲ್ಲಿ ಬಿರಬಿರನೆ ನಡೆಯಲುಪಕ್ರಮಿಸಿದಳು. ಸೂರ್ಯ ಆಗಲೇ ಪಶ್ಚಿಮದಲ್ಲಿ ಇಳಿದಿದ್ದ. ಹೆಚ್ಚೆಂದರೆ ಇನ್ನು ಅರ್ಧ ಮುಕ್ಕಾಲು ಗಂಟೆಯಲ್ಲಿ ಕತ್ತಲಾಗುತ್ತದೆ. ಅಷ್ಟರಲ್ಲಿ ಮನೆ ತಲುಪಿಕೊಳ್ಳಬೇಕು. ಕತ್ತಲಾದರೇನಾಯ್ತು ಚಿರಪರಿಚಿತ ಹಾದಿ, ಕಳ್ಳಕಾಕರ ಭಯವಿಲ್ಲ. ಆದರೆ ಹುಳ ಹುಪ್ಪಟೆಯ ಉಪದ್ರವ ಇದೆಯಲ್ಲ ಅದಕ್ಕೆ ಹೆದರುತ್ತಾಳೆ ಸುಮತಿ. ನಡಿಗೆಯ ವೇಗವನ್ನು ಚುರುಕುಗೊಳಿಸಿದಳು. ಸುತ್ತಲ ವನಶ್ರೀಯ ನೋಟ ನಯನ ಮನೋಹರವಾಗಿತ್ತು. ಸುತ್ತಲ ಕಾಡು ತರಿದು ಭೂಮಿ ಬಂಜರಾಗಿದ್ದರೂ ಚೆಲುವಿನಹಳ್ಳಿಯ ಚೆಲುವು ಮಾಸದಿರಲು ಅಲ್ಲಿಯ ವನಶ್ರೀಯೆ ಕಾರಣ. ರಾತ್ರಿರಾಣಿಯ ಮೊಗ್ಗುಗಳು ಆಗಲೇ ಅರಳತೊಡಗಿ ಗಮ್ಮನೆಯ ಪರಿಮಳ ನಾಸಿಕಾಗ್ರಕ್ಕೆ ತಟ್ಟುತ್ತಿತ್ತು. ಜೊತೆಗೆ ಇನ್ನೊಬ್ಬರಿದ್ದಿದ್ದರೆ, ಪ್ರತಿಯೊಂದು ಮರಗಿಡವನ್ನೂ ನಿಧಾನವಾಗಿ ಅವಲೋಕಿಸುತ್ತ ಮುನ್ನಡೆಯಬಹುದಾಗಿತ್ತು. ಈಗ ಕತ್ತಲಾಗುತ್ತ ಬಂದುದರಿಂದ ಅದಕ್ಕೆ ಅವಕಾಶವೂ ಇಲ್ಲ. ಒಂಟಿಯಾಗಿರುವುದರಿಂದ ಅದಕ್ಕೆ ಆಸ್ಪದವೂ ಇಲ್ಲ.

ರಾಜಣ್ಣ, ರಂಗಣ್ಣ ಇಬ್ಬರ ಮದುವೆಯಾಗಿ ಐದು ವರ್ಷಗಳೇ ಕಳೆಯಿತಲ್ಲವೇ? ಹೌದು ಒಂದು ವಾರದ ಅಂತರದಲ್ಲಿ ನಡೆದ ಅವರಿಬ್ಬರ ಮದುವೆಯ ಕಲಾಪವನ್ನು ಮುಗಿಸಿಕೊಂಡೇ ಅಲ್ಲವೇ ತಾನು ಬೆಂಗಳೂರಿಗೆ ಹೋಗಿ ಹಾಸ್ಟಲಿನಲ್ಲಿ ವಾಸ್ತವ್ಯ ಹೂಡಿದ್ದು. ಹೆಚ್ಚಿನ ಓದನ್ನು ಓದದ ರಾಜಣ್ಣ ಹಳ್ಳಿಯಲ್ಲಿಯೇ ಉಳಿದು ಅಪ್ಪನ ಹೊಲಗದ್ದೆ, ತೋಟದ ಉಸ್ತುವಾರಿಯನ್ನು ವಹಿಸಿಕೊಂಡರೆ, ರಂಗಣ್ಣ ಪಿ.ಯು.ಸಿ.ವರೆಗೆ ಓದಿ ಪಕ್ಕದ ಹಳ್ಳಿಯ ಗ್ರಾಮೀಣ ಬ್ಯಾಂಕೊಂದರಲ್ಲಿ ಕೆಲಸಕ್ಕಿದ್ದಾನೆ. ಹಾಗಾಗಿ ಹಳ್ಳಿ ಮನೆಯಲ್ಲಿ ಈಗ ಇರುವುದು ಅಪ್ಪ ಅವ್ವ, ರಾಜಣ್ಣ ಅವನ ಹೆಂಡತಿ ಮಾತ್ರವೇ. ರಂಗಣ್ಣ ಪಕ್ಕದ ಹಳ್ಳಿಯಲ್ಲಿಯೇ ಬಿಡಾರ ಮಾಡಿದ್ದಾನೆ. ಆಗಾಗ ರಜಾ ದಿನಗಳಲ್ಲಿ ಗಂಡಹೆಂಡಿರು ಬಂದು ಹೋಗುತ್ತಾರೆ. ಅದೂ ಚೆನ್ನವೇ. ಎಲ್ಲರೂ ಒಂದೆಡೆ ಸೇರಿ ಗುದ್ದಾಡುವುದಕ್ಕಿಂತ ಪ್ರತ್ಯೇಕವಾಗಿರುವುದು ಲೇಸಲ್ಲವೇ? ಅಲ್ಲದೆ ಸಂಕುಚಿತ ಮನೋಭಾವದ ಅವ್ವನೊಂದಿಗೆ ಹೊಂದಿಕೊಂಡು ಬಾಳುವುದು ಸಾಹಸದ ಕೆಲಸವೇ ಸರಿ.



ಕಷ್ಟಗಳು

ಜೀವನದಲ್ಲಿ
ಎಲ್ಲರೆದೆಗೆ
ಬಂದು
ಅಪ್ಪಳಿಸುವ
ಚಿಕ್ಕ ದೊಡ್ಡ
ಕಲ್ಲುಗಳು.

— ಸೀ. ಶ್ರೀಶೈಲ

ರಾಜಣ್ಣನ ಮಡದಿ ರಮ್ಯ ಅವನಿಗೆ ಹೇಳಿ ಮಾಡಿಸಿದಂತಾ ವಧು. ಅವನಷ್ಟೇ ಮೃದು ಮಧುರ ಸ್ವಭಾವ ಅವಳದು. ನಯ ವಿನಯ ಅವಳಲ್ಲಿ ಎದ್ದು ಕಾಣುವ ಮುಖ್ಯಗುಣ. ಅಮ್ಮನ ಸಿಡಿಮಿಡಿಯ ಸ್ವಭಾವದೊಂದಿಗೆ ಅವಳಾಗುವ ಹೊತ್ತಿಗೆ ಹೆಣಗಿಕೊಂಡಿದ್ದಾಳೆ. ಮಾಸದ ನಗುಮುಖ ಅವಳದು. ಅಮ್ಮ ಏನೇ ಹೇಳಲಿ, ಏನೇ ಆಡಲಿ ಅದಕ್ಕೆ ಬೇಸರಗೊಳ್ಳುವುದಿಲ್ಲ ಅವಳು. ರಾಜಣ್ಣನ ಹಾಗೆ ಅವಳದೂ ಅನುಸರಿಸಿಕೊಂಡು ಹೋಗುವ ಸ್ವಭಾವ. ಈ ಅಣ್ಣ, ಅತ್ತಿಗೆಯದು ಹಾಲು ಜೇನಿನಂತೆ ಸುಂದರ ದಾಂಪತ್ಯ ಜೀವನ. ಹಾಗಾಗಿ ಮನೆ ಶಾಂತಿಯ ಬೀಡಾಗಿದೆ. ಎಲ್ಲ ಇದ್ದರೂ ಏನಾದರೂ ಒಂದು ಕೊರಗು ಇರಲೇಬೇಕಲ್ಲವೇ? ಬಡವನಿರಲಿ, ಬಲ್ಲಿದನಿರಲಿ, ಹುಡುಗನಿರಲಿ, ಮುದುಕನಿರಲಿ ಎಲ್ಲೋ ಒಂದೆಡೆ ಏನೋ ಒಂದು ಲೋಪ ಇದ್ದೇ ಇರುತ್ತದೆ. ಚೆಲುವಿನಹಳ್ಳಿಯ ನಮ್ಮ ಮನೆಯ ಸುಖಕ್ಕೆ ಒಂದೇ ಒಂದು ಕೊರತೆ ಎಂದರೆ ಇಬ್ಬರು ಅಣ್ಣಂದಿರಿಗೂ ಇನ್ನು ಮಕ್ಕಳಾಗದಿರುವುದು. ನಾನು ಪ್ರತಿಬಾರಿ ರಜಕ್ಕೆ ಬಂದಾಗಲೂ ಅವ್ವ ಈ ವಿಷಯವನ್ನೇ ದೊಡ್ಡದು ಮಾಡಿ ವಿಲಾಪಿಸುತ್ತಾಳೆ.

"ಆಗುತ್ತದವ್ವ, ಅವರಿಗೇ ಇಲ್ಲದ ಅವಸರ ನಿನಗೇಕೆ. ನಿಧಾನವಾಗಿ ಮಕ್ಕಳಾಗಲಿ,

ಹೊಸ ದಂಪತಿಗಳು ಕೆಲವು ವರ್ಷ ಚೆನ್ನಾಗಿ ಬಾಳಲಿ.''

"ಏನೇ ನೀನು ಮಾತನಾಡುವುದು ಸುಮತಿ, ಮಕ್ಕಳಾದರೆ ಬದುಕು ಚೆನ್ನಾಗಿರುವುದಿಲ್ಲವೇ?''

"ಹಾಗಲ್ಲಪ್ಪ ನಾನು ಹೇಳಿದ್ದು. ಕೆಲವು ವರ್ಷ ಚೆನ್ನಾಗಿರಲಿ ಬಿಡು, ಹಾಯಾಗಿ ಯಾವ ಜಂಜಾಟವಿಲ್ಲದೆ. ನಾಳೆ ಮಕ್ಕಳಾದಮೇಲೆ ಅವರನ್ನು ಸುಧಾರಿಸುವುದು ಇದ್ದೇ ಇದೆ.''

"ಆಗಲೇ ಎಷ್ಟು ವರ್ಷಗಳಾಯಿತು ಸುಮತಿ. ನಿನ್ನ ಇಬ್ಬರು ಅಣ್ಣಂದಿರ ಮದುವೆಯಾಗಿ ನಾಲ್ಕು ವರುಷಗಳೇ ಆಯಿತು. ಇವನಿಗಾಗಲೀ, ಅವನಿಗಾಗಲೀ ಮಗುವನ್ನೆತ್ತುವ ಹಂಬಲವೇ ಇಲ್ಲವಲ್ಲ.''

"ಇರದೇ ಇರುತ್ತದೆಯೇನಮ್ಮ. ಅದಕ್ಕೂ ಕಾಲ ಬರಬೇಕಲ್ಲ.''

"ಏನೋಪ್ಪ, ನಿನ್ನ ಮಾತೇ ನನಗರ್ಥವಾಗುವುದಿಲ್ಲ. ಈಗಿನ ಕಾಲದವರು ಏನೇನು ಮಾಡಿಕೊಂಡಿರುತ್ತಾರೋ ಏನೋ?''

"ಅದೆಲ್ಲ ನನಗೇನಪ್ಪ ಗೊತ್ತು?''

"ಗೊತ್ತು ಮಾಡಿಕೋ ಎಂದೇ ಇಷ್ಟು ಹೊತ್ತು ನಿನ್ನ ಮುಂದೆ ಹೇಳಿದ್ದು.''

"ಅದೆಲ್ಲ ನನಗೆ ಹೇಳಬೇಡಪ್ಪ. ನೀನೇ ನಿನ್ನ ಸೊಸೆಯರನ್ನು ವಿಚಾರಿಸು.''

"ನಾನು ವಿಚಾರಿಸುವಂತಿದ್ದರೆ ನಿನಗೇಕೆ ಹೇಳುತ್ತಿದ್ದೆ. ಬೇಗ ಒಂದೆರಡು ಮಕ್ಕಳಾಗಲಿ, ಆಮೇಲೆ ಅವರು ಏನು ಉಪಾಯಬೇಕಾದರೂ ಮಾಡಿಕೊಳ್ಳಲಿ.''

"ಅಪ್ಪಾ, ಅದೆಲ್ಲ ನಾನು ಹೇಳುವುದಿಲ್ಲ, ಅವರವರ ಇಷ್ಟ'' ಎಂದು ಬಿರುನುಡಿ ನುಡಿದಿದ್ದಳು ಸುಮತಿ.

"ಎಲ್ಲ ಬಿಟ್ಟು ನಿನ್ನ ಬಳಿ ನನ್ನ ಕಷ್ಟ ಸುಖ ಹೇಳಿಕೊಳ್ಳುತ್ತೇನಲ್ಲ, ಸುಂಕದವನ ಮುಂದೆ ಸುಖ ದುಃಖ ಹೇಳಿಕೊಂಡ ಹಾಗೆ ಅದು ನನ್ನ ತಪ್ಪು'' ಎಂದು ಅಪ್ಪ ಕೂಡ ಒಳಗೆದ್ದು ಹೋಗಿದ್ದಳು.

ಈಗ ಪರಿಸ್ಥಿತಿ ಹೇಗಿದೆಯೋ?

ಕಂತೆಗೆ ತಕ್ಕ ಬೊಂತೆಯನ್ನು ದೇವರು ಸೃಷ್ಟಿಸಿರುತ್ತಾನೆ ಎಂಬುದು ಸುಳ್ಳಲ್ಲ. ರಂಗಣ್ಣ ಅವನ ಮಡದಿ ರಾಧಳನ್ನು ನೋಡಿದ ಯಾರಿಗಾದರೂ ಈ ವಿಷಯ ಹೊಳೆಯುತ್ತದೆ. ರಂಗಣ್ಣನದು ಎಷ್ಟು ಜೋರಿನ ಸ್ವಭಾವವೋ ಅವನ ಮಡದಿಯದೂ ಅಷ್ಟೇ ಜೋರಿನ ಸ್ವಭಾವ. ನಿಜ ಹೇಳಬೇಕೆಂದರೆ ಮದುವೆಯಾದ ಮೇಲೆ ರಂಗಣ್ಣನೇ ಕೊಂಚ ತಗ್ಗಿದ್ದಾನೆ. ಆದರೆ ಹಳ್ಳಿಗೆ ಬಂದಿರುವ ಕೆಲವು ಸಮಯದಲ್ಲಿ ಕೂಡ ಆ ದಂಪತಿಗಳು ಅಪ್ಪನೊಂದಿಗೆ ಹೊಂದಿಕೊಂಡಿರುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅಪ್ಪ ಒಂದು ಮಾತನಾಡಿದರೆ ರಾಧ ನಾಲ್ಕು ಮಾತನಾಡುತ್ತಾಳೆ. ಇಬ್ಬರಿಗೂ ಮಾತಿನ ಚಕಮುಕಿ ಪ್ರಾರಂಭವಾಗಿಯೇ ಬಿಡುತ್ತದೆ. ಅದನ್ನು ಬಿಡಿಸಲು ಅಪ್ಪನೋ, ರಾಜಣ್ಣನೋ ನಡುವೆ ಬಾಯಿ ಹಾಕಲೇಬೇಕಾಗುತ್ತದೆ.

ಕಳೆದ ಬಾರಿ ರಜೆಯಲ್ಲಿ ತಾನು ಬಂದಾಗ ನಡೆದ ಘಟನೆ ತನ್ನ ನೆನಪಿನಲ್ಲಿನ್ನೂ ಹಸಿಹಸಿಯಾಗಿಯೇ ಇದೆ. ತಾನು ರಜಕ್ಕೆ ಬಂದಿರುವ ಸುದ್ದಿ ತಿಳಿದ ಮರುದಿನವೇ ರಂಗಣ್ಣ ಮಡದಿಯೊಂದಿಗೆ ಬಂದ. ಅಮ್ಮ ಹಿಂದಿನ ದಿನವೇ ಕೋಡುಬಳೆ ಕರೆದಿಟ್ಟಿದ್ದಳು. ರಂಗಣ್ಣನ ಪಾಲು ಎಂದು ಹೇಳಿ ಒಂದು ಹತ್ತು ಕೋಡುಬಳೆ ಕರೆದಿಟ್ಟಿದ್ದಳು. ತಾನೇ ಆ ದಿನ ಅದನ್ನು

ತಟ್ಟೆಯಲ್ಲಿ ಹಾಕಿ ತಂದುಕೊಟ್ಟೆ. ಎಲ್ಲರೊಂದಿಗೆ ಮಾತನಾಡುತ್ತ ಕೋಡುಬಳೆ ತಿಂದ ರಂಗಣ್ಣ. ತಟ್ಟೆ ಕಾಲಿಯಾಯಿತು. ಕರಿದ ತಿಂಡಿ ಎಂದರೆ ಅವನಿಗೆ ಪಂಚಪ್ರಾಣ. ಹಾಗಾಗಿ ಮತ್ತೂ ಬೇಕು ಎಂದ. ಒಳಗಡೆ ಇನ್ನು ಕೋಡುಬಳೆ ಇರಲಿಲ್ಲ. "ಮಧ್ಯಾಹ್ನವೇ ಎಲ್ಲರಿಗೂ ಹಂಚಿ ಮುಗಿಸಿಬಿಟ್ಟೆ" ಎಂದಳು ಶಿವಮ್ಮ.

"ನೀವು ಹಾಗೇ ಇಲ್ಲಿರುವವರು ಮಾತ್ರ ಮಕ್ಕಳು ಎಂದು ತಿಳಿದಿದ್ದೀರಿ. ಇವರೊಬ್ಬರು ಮಗ ಇದ್ದಾರೆ ಎಂಬುದೇ ನಿಮಗೆ ನೆನಪಿರುವುದಿಲ್ಲ."

"ಹಾಗೇಕೆ ಹೇಳುತ್ತೀ ರಾಧ, ಇನ್ನೊಮ್ಮೆ ಮಾಡಿದರಾಯಿತು."

"ಇನ್ನೊಮ್ಮೆ ಮಾಡಿದರೂ ಇದೇ ಪರಿಸ್ಥಿತಿಯೇ. ನನಗೆ ಗೊತ್ತಿಲ್ಲವೇ?"

"ಏನು ಗೊತ್ತಿರುವುದು ನಿನಗೆ. ಸುಮ್ಮನೆ ಕುಳಿತುಕೋ. ಹೆಚ್ಚಿಗೆ ಮಾತನಾಡಬೇಡ. ಮದುವೆಯಾದ ವರ್ಷದಲ್ಲಿಯೇ ಬೇರೆ ಬಿಡಾರ ಹೂಡಿದವಳು ನೀನು ಗಂಡನೊಂದಿಗೆ."

"ಅದಕ್ಕೇನು ಮಾಡಲು ಬರುತ್ತದೆ, ಅವರಿಗೆ ಉದ್ಯೋಗ ಎಲ್ಲಿರುತ್ತದೆಯೋ ಅಲ್ಲಿ ಬಿಡಾರ ಹೂಡಬೇಕಲ್ಲವೇ?"



ನಾವು ಕಾರ್ಯ ಪ್ರವೃತ್ತರಾಗಿ ಮುಂದುವರಿದರೆ ಮಾತ್ರ ಯಶಸ್ಸು ದೊರೆಯುವುದೇ ಹೊರತು, ಬರಿ ಆಶ- ಆಕಾಂಕ್ಷೆಗಳನ್ನಿಟ್ಟುಕೊಂಡರೆ ಫಲವು ದೊರಕದು.

ಪರೀಕ್ಷಿಸದೆ ಯಾವ ಕಾರ್ಯಕ್ಕೂ ತೊಡಗಬಾರದು. ಚೆನ್ನಾಗಿ ಪರೀಕ್ಷಿಸಿಯೇ ಕಾರ್ಯವನ್ನು ಆರಂಭ ಮಾಡಬೇಕು.

ತಾನು ಮಾಡಿದ ಒಳ್ಳೆಯ ಅಥವಾ ಕೆಟ್ಟ ಕೆಲಸಗಳಿಗೆ ತನ್ನ ಆತ್ಮವೇ ಸಾಕ್ಷಿಯಾಗಿರುತ್ತದೆ.

—ಸಂಸ್ಕೃತ ಹಿತೋಕ್ತಿ

ಸಂಗ್ರಹ : ಶಂಕರಗೌಡ ವ್ಹಿ. ಪಾಟೀಲ

"ಹೌದೌದು, ಬಲುದೂರ ನೋಡು ನಿನ್ನ ಗಂಡ ಕೆಲಸ ಮಾಡುವ ಬ್ಯಾಂಕು ಇಲ್ಲಿಂದ. ಬೆಳಗ್ಗೆ ಕೆಲಸಕ್ಕೆ ಹೋಗಿ ರಾತ್ರಿ ಹಿಂದಿರುಗಿ ಬಂದರೆ ಆಗುತ್ತಿರಲಿಲ್ಲವೇ?"

"ಸ್ವತಂತ್ರವೋ ಸ್ವರ್ಗವೋ ಎಂಬಂತೆ ನಮ್ಮ ಪಾಡಿಗೆ ನಾವಿದ್ದೇವೆ. ನಿಮಗೇಕೆ ಕಣ್ಣುನೋವು?"

"ಇರವ್ವ, ಇರು ಸ್ವರ್ಗದಲ್ಲಿ ಇದ್ದಹಾಗೆ ಇರು. ರಮ್ಯ ನೀನೂ ನಿನ್ನ ಗಂಡನೊಂದಿಗೆ ಹೋಗಿ ಹಾಗೆಯೇ ಇರಬಾರದೇಕೆ?"

ರಮ್ಯ ಉತ್ತರಿಸದಾಗ ರಾಜಣ್ಣನೇ ಮಾತನಾಡಿದ.

"ನಮಗೆ ಸ್ವತಂತ್ರವೂ ಬೇಡ, ಸ್ವರ್ಗವೂ ಬೇಡ. ನಿಮ್ಮೊಟ್ಟಿಗೆ ಇರುವವರು ನಾವು."

"ಹೋಗಲಿ ಬಿಡಪ್ಪ, ನೀನೊಬ್ಬನಾದರೂ ಹೆತ್ತ ಹೊಟ್ಟೆ ತಣ್ಣಗಾಗಿಸುತ್ತಿದ್ದೀಯಲ್ಲ, ಅಷ್ಟೇ ಸಾಕು."

"ನಾನೇನಮ್ಮ ಮಾಡಿದೆ ಈಗ?'' ಕೇಳಿದ ರಂಗಣ್ಣ.

"ನೀನೇನೂ ಮಾಡಿಲ್ಲಪ್ಪ, ಆದರೆ ಮಾಡಬೇಕಾದುದು ಬಹಳ ಇದೆ. ಮೊದಲು ನಿನ್ನ ಹೆಂಡತಿಯ ನಾಲಿಗೆ ಹದ್ದುಬಸ್ತಿನಲ್ಲಿರಿಸು.''

"ಅವಳು ಮಾತನಾಡುವುದೇ ಹಾಗಮ್ಮ, ನೀನು ತಪ್ಪು ತಿಳಿಯಬೇಡ.''

"ತಪ್ಪೋ, ಒಪ್ಪೋ ನಾನು ತಿಳಿದು ಏನಾಗಬೇಕಾಗಿದೆ. ನೀವಿಬ್ಬರೂ ಚೆನ್ನಾಗಿದ್ದರೆ ಸರಿ'' ಎಂದು ಹೇಳಿ ಒಳಗಡೆ ಹೊರಟು ಹೋದಳು ಅವ್ವ.

ದೂರದಿಂದ ಮನೆ ಕಾಣಿಸಿದಾಗ ನನ್ನ ಹೃದಯ ಸಂತಸದ ಬೀಡಾಯಿತು. ಮತ್ತೂ ಸ್ವಲ್ಪ ಮುಂದೆ ಬಂದಾಗ ಅಪ್ಪ ಜಗುಲಿಯ ಮೇಲೆ ಕುಳಿತು ರೈತರೊಡನೆ ಹರಟುತ್ತಿದ್ದುದು ಕಾಣಿಸಿತು. ನನ್ನ ಮುಖ ಕಂಡೊಡನೆ ಅಪ್ಪ ಚಕಿತರಾದರು. "ಇದೇನಿದು ಮಗು ಇದ್ದಕ್ಕಿದ್ದಂತೆ ಒಂದು ಸುದ್ದಿ ಸಮಾಚಾರ ತಿಳಿಸದೆ! ಗಾಡಿ ಕಳುಹಿಸುತ್ತಿದ್ದೆನಲ್ಲ, ನಡೆದೇ ಬಂದೆಯಾ?''

"ಹೌದು ಅಪ್ಪ.''

"ಆರೋಗ್ಯವಾಗಿದ್ದೀ ತಾನೆ?''

"ಆರೋಗ್ಯವಾಗಿದ್ದೇನೆ ಅಪ್ಪ, ನೀವು?''

"ನಾನೂ ಚೆನ್ನಾಗಿದ್ದೇನೆ ಮಗು, ಒಳಗೆ ನಡಿ, ಇವರೊಂದಿಗಿನ ಮಾತು ಮುಗಿಸಿ ಬರುತ್ತೇನೆ.''

ಒಳಗೆ ಬಂದೊಡನೆ ಎದುರಿಗೆ ಕಾಣಿಸಿದಳು ರಮ್ಯ. ಅವಳ ಉಬ್ಬಿದ ಹೊಟ್ಟೆಯನ್ನು ಕಂಡು ಚಕಿತಳಾದೆ.

"ಏನತ್ತಿಗೆ ಹೊಸ ಸಮಾಚಾರ?''

"ಹೌದು.''

"ಎಷ್ಟು ತಿಂಗಳು?''

"ಐದು ತುಂಬಿತು.''

"ನನಗೆ ತಿಳಿಸಲೇ ಇಲ್ಲ.''

"ಹೊಸದಾಗಿ ತಿಳಿಸುವುದೇನಿದೆ, ನೋಡಿದರೆ ತಿಳಿಯುವುದಿಲ್ಲವೇ?''

"ಸಂತೋಷ. ಅಮ್ಮನಿಗೆ ಹೆಚ್ಚಿನ ಸಂತೋಷವಾಗಿರಬೇಕು.''

"ಹೌದು.''

"ರಾಜಣ್ಣ ಇನ್ನೂ ಬಂದಿಲ್ಲವೇ ತೋಟದಿಂದ?''

"ಇಲ್ಲ. ಇನ್ನೇನು ಬರಬಹುದು.''

"ರಂಗಣ್ಣ ಬಂದಿದ್ದನೇ ಈಚೆಗೆ?''

"ಪ್ರತೀ ಭಾನುವಾರ ರಾಧಳೊಂದಿಗೆ ಬಂದು ಹೋಗುತ್ತಾರೆ. ಬರೀ ನಿನ್ನ ಮಾತೇ ಆಯಿತಲ್ಲ. ನೀನು ಕೈಕಾಲು ತೊಳೆದುಕೋ. ದಣಿದು ಬಂದಿದ್ದೀ. ಏನಾದರೂ ತಿಂಡಿ ಮಾಡಿ ತರುತ್ತೇನೆ.''

"ತಿಂಡಿ ಏನೂ ಬೇಡ ಅತ್ತಿಗೆ. ಬರಿಯ ಕಾಫಿ ಸಾಕು. ರಾತ್ರಿ ನಿಮ್ಮೆಲ್ಲರೊಂದಿಗೆ ಊಟ ಮಾಡುತ್ತೇನೆ.''

"ಹಾಗಿದ್ದರೆ ಸರಿ'' ಎಂದು ನುಡಿದ ರಮ್ಯ ಕಾಫಿ ತರಲು ಒಳಗಡೆ ಹೋದಳು.

ತಂಬಿಗೆಯ ತುಂಬ ನೊರೆಹಾಲು ತುಂಬಿಕೊಂಡು ಕೊಟ್ಟಿಗೆಯ ಕಡೆಯಿಂದ ಅವ್ವ ಬಂದಳು. "ಬಂದೆಯೇನೇ ಸುಮತಿ, ನೀನು ಇವತ್ತು ಬರಬಹುದು ಎಂದು ನನಗನ್ನಿಸುತ್ತಿತ್ತು.''

"ಅದು ಹೇಗೆ ಅವ್ವ, ಕನಸೇನಾದರೂ ಬಿದ್ದಿತ್ತೇ?''

"ಕನಸಲ್ಲವೇ ಹುಡುಗಿ. ಬೆಳಗಿನಿಂದ ಅಂಗಳದಲ್ಲಿ ಕಾಗೆ ಕಾ ಕಾ ಎಂದು ಕೂಗುತ್ತಲೇ ಇತ್ತು. ಆಗಲೇ ಇಂದು ಯಾರಾದರೂ ನೆಂಟರು ಬರುವುದು ಖಾತ್ರಿ ಎಂದುಕೊಂಡಿದ್ದೆ.''

"ನಾನು ನಿನಗೆ ಮನೆಯವಳೋ ನೆಂಟಳೋ ಅವ್ವ?''

"ಮನೆಯ ಮಗಳಾದರೇನಾಯ್ತು, ಆರೇಳು ವರ್ಷದಿಂದ ಬೆಂಗಳೂರಿನಲ್ಲಿ ಬಿಡಾರ ಹೂಡಿಕೊಂಡು ವಾಸವಾಗಿದ್ದಿ. ಆಗಾಗ ಬಂದುಹೋಗುತ್ತೀ. ಅಂದಮೇಲೆ ನೀನು ನೆಂಟಳಿಗೆ ಸಮ.''



"ನಾನು ಇವತ್ತು ಕೊಡೆ ಕಳಕೊಂಡು ಬಿಟ್ಟೆ.''

"ಹ್ಯಾಗೆ ಗೊತ್ತಾಯ್ತು ಕಳಕೊಂಬಿಟ್ಟೆ ಅಂತ?''

"ಮಳೆ ನಿಂತ್ಮೇಲೆ ಮಡಚಬೇಕು ಅಂತ ನೋಡ್ತೀನಿ, ಕೊಡೇನೇ ಇರಲಿಲ್ಲ.''

— ಮುರಳೀಧರ ಕೆ. ಎಸ್.

"ಸರಿ ಬಿಡು ಅವ್ವ.''

"ಅಲ್ಲವೇ ಸುಮತಿ ಕಾಗದ ಪತ್ರ ಒಂದೂ ಬರೆಯದೆ, ಹೀಗೆ ಕಾಡಿನ ಹಾದಿಯಲ್ಲಿ ಒಬ್ಬಳೇ ನಡೆದು ಬರುವುದೇ?''

"ಏನಾಗುತ್ತದವ್ವ, ಚಿರಪರಿಚಿತ ಹಾದಿ. ಒಮ್ಮೊಮ್ಮೆ ಹೀಗೆಯೇ ಬರುವ ಸಂದರ್ಭ ಬರುತ್ತದಲ್ಲ.''

"ನಿನ್ನ ಧೈರ್ಯವೇ ಧೈರ್ಯ ಬಿಡು.''

ಒಳಗಿನಿಂದ ರಮ್ಯ ಕಾಫಿ ತೆಗೆದುಕೊಂಡು ಬಂದಳು. ಕಾಫಿ ಕುಡಿಯುತ್ತಿದ್ದಾಗ ಅಪ್ಪ ಕೂಡ ಒಳಗಡೆ ಬಂದರು.

"ಯಾಕೋ ಎರಡು ದಿನದಿಂದ ವಿಪರೀತ ಮೈಕೈ ನೋಯುತ್ತಿದೆ ಮಗು. ಏನಾದರೂ ಮಾತ್ರೆ ಇದ್ದರೆ ಕೊಡು.''

"ಏನೂ ಪರೀಕ್ಷೆ ಮಾಡದೆ ಏನು ಔಷಧಿ ಮಾತ್ರೆ ಕೊಡುವುದು ಹೇಳು? ಬಂದಿಲ್ಲಿ ಕುಳಿತುಕೋ'' ಎಂದೆ.

ಸ್ಟೆತಾಸ್ಕೋಪ್ ತೆಗೆದು ಅಪ್ಪನ ರಕ್ತದೊತ್ತಡ ಪರೀಕ್ಷಿಸಿದೆ. ರಕ್ತದೊತ್ತಡ ಸರಿಯಾಗಿತ್ತು. ನಾಡಿಬಡಿತದಲ್ಲೇನೂ ಏರುಪೇರಿರಲಿಲ್ಲ.

"ಭಾರ ಏನಾದರೂ ಎತ್ತಿದಿರಾ ಅಪ್ಪ?''

"ಮೊನ್ನೆ ಕಾಯಿ ಕೀಳಿಸಿದೆವಲ್ಲ ಅದೆಲ್ಲ ತೆಗೆದು ಒಳಗೆ ಅಟ್ಟಕ್ಕೆ ತುಂಬಿದೆ ಅಷ್ಟೆ.''

"ಇನ್ನೂರು ತೆಂಗಿನಕಾಯಿ ಒಳಗೆ ಅಟ್ಟಕ್ಕೆ ಒಟ್ಟಿದ್ದಾರೆ ಒಬ್ಬರೇ.'' ನಡುವೆ ಬಾಯಿ ಹಾಕಿದಳು ರಮ್ಯ.

"ಇನ್ನೂರು ತೆಂಗಿನಕಾಯಿ!''

"ಏನು ಮಾಡುವುದು ಮಗು, ರಾಜಣ್ಣ ಒಬ್ಬನೇ ಎಷ್ಟು ಎಂದು ದುಡಿಯುತ್ತಾನೆ? ನಿನ್ನ ಅವ್ವನಿಗೆ ಅವಳ ಕೆಲಸ ಅವಳಿಗಿದ್ದೇ ಇರುತ್ತದೆ. ಸೊಸೆ ಬಸುರಿ, ಮತ್ಯಾರು ಮಾಡಬೇಕು ಹೇಳು?''

"ಆದರೆ ಅಪ್ಪ ದಿನೇದಿನೇ ನಿಮಗೆ ಪ್ರಾಯ ಉಕ್ಕುತ್ತದೆಯೇ. ನಿಮಗೂ ವಯಸ್ಸಾಯಿತು. ಮೊದಲಿನ ಹಾಗೆ ಒರಟೊರಟಾದ ಕೆಲಸ ಮಾಡಲು ಹೋಗಬೇಡಿ. ನೀವು ಏನಾದರೂ ಹೆಚ್ಚುಕಡಿಮೆ ಮಾಡಿಕೊಂಡು ಕುಳಿತರೆ ನಿಮ್ಮನ್ನು ನೋಡುವವರು ಯಾರು? ಈಗ ಈ ಮಾತ್ರೆ ತೆಗೆದುಕೊಳ್ಳಿ.''

ಮಗಳು ಕೊಟ್ಟ ಮಾತ್ರೆ ನುಂಗಿ ರೇಡಿಯೋ ಸ್ಟೇಶನ್ ತಿರುಗಿಸಿದರು ಶಂಕರಪ್ಪ. ತೋಟದಿಂದ ರಾಜಣ್ಣ ಬಂದ.

"ಅರೆ ಸುಮತಿ, ಯಾವಾಗ ಬಂದೆ?''

"ಸ್ವಲ್ಪ ಸಮಯವಾಯಿತು ರಾಜಣ್ಣ, ಹೊಸ ಸಮಾಚಾರ ತಿಳಿಯಿತು. ಇನ್ನು ಕೆಲವೇ ತಿಂಗಳಲ್ಲಿ ನೀನು ಅಪ್ಪ ಎನ್ನಿಸಿಕೊಳ್ಳುತ್ತಿದ್ದೀಯ. ಬಹಳ ಸಂತೋಷ.''

"ಇಂದು ತೋಟದಲ್ಲಿ ನಿನ್ನನ್ನು ಬಹಳ ನೆನೆಸಿಕೊಂಡೆ ಸುಮತಿ.''

"ಅದೇನಪ್ಪ ಅಂತಾದ್ದು?''

"ನಿನಗಿಷ್ಟವಾದ ಸಪೋಟ ಹಣ್ಣುಗಳು ಬಿಟ್ಟಿದೆ ಹೇರಳವಾಗಿ. ಆದರೆ ನಾನೇ ಬೆಂಗಳೂರಿಗೆ ಬಂದು ತಂದುಕೊಡಬೇಕೆಂದಿದ್ದೆ. ನೀನೇ ಬಂದುದು ಒಳ್ಳೆಯದೇ ಆಯಿತು.''

"ನನ್ನದು ಹಾಗಿರಲಿ, ನಿನ್ನ ಹೆಂಡತಿಯ ಯೋಗಕ್ಷೇಮ ಚೆನ್ನಾಗಿ ನೋಡಿಕೋ ಈಗ.''

"ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ಅಳೆಯಲಾಗುವುದೇ, ಹೆಂಡತಿಯ ಪ್ರೀತಿ ಅವಳಿಗೆ, ತಂಗಿಯ ವಾತ್ಸಲ್ಯ ನಿನಗೆ.''

"ಸರಿ ರಾಜಣ್ಣ, ಅತ್ತಿಗೆಯನ್ನು ಆಗಾಗ ಡಾಕ್ಟರ್ ಬಳಿ ಕರೆದುಕೊಂಡು ಹೋಗಿ ತಪಾಸಿಸುತ್ತೀಯೋ ಇಲ್ಲವೋ?''

"ಎಷ್ಟಾದರೂ ಡಾಕ್ಟರಲ್ಲವೇ ನೀನು, ನಿನ್ನ ಯೋಚನೆ ನಿನಗೆ. ಪ್ರತೀ ತಿಂಗಳು ಪಟ್ಟಣಕ್ಕೆ ಕರೆದುಕೊಂಡು ಹೋಗಿ ಲೇಡಿ ಡಾಕ್ಟರ್‌ರ ಬಳಿ ತಪಾಸಿಸಿಕೊಂಡು ಬರುತ್ತಿದ್ದೇನೆ. ಹೇಗೂ ನೀನು ಈಗ ಬಂದಿದ್ದೀಯಲ್ಲ. ಒಂದು ಬಾರಿ ಪರೀಕ್ಷೆ ಮಾಡಿಬಿಡು.''

"ಅಗತ್ಯವಾಗಿ'' ಎಂದಳು ಸುಮತಿ.

ರಾತ್ರಿ ಊಟಕ್ಕೆ ಕುಳಿತಾಗ ರಾಜಣ್ಣ ಕೇಳಿದ. "ಏನು ಸುಮತಿ, ಏನು ಇದ್ದಕ್ಕಿದ್ದಂತೆ ಬಂದೆ?''

"ಏನಿಲ್ಲ ಸುಮ್ಮನೆ ಬಂದೆ. ನಿಮ್ಮೆಲ್ಲರನ್ನೂ ನೋಡೋಣ ಅನ್ನಿಸಿತು.''

“ನೀನು ಹಾಗೆಂದರೆ ನಾನು ನಂಬುತ್ತೇನೆಯೇ, ಏನೂ ವಿಶೇಷವಿಲ್ಲದೆ ಹಾಗೆಲ್ಲ ಹೇಳುವವಳಲ್ಲ ನೀನು.”

“ಏನಿಲ್ಲ ರಾಜಣ್ಣ.”

“ಇರಲಿ, ಹೇಳು.”

“....”

“ಯಾಕೆ ಆ ಮಗುವನ್ನು ಅವಸರಿಸುತ್ತೀ ರಾಜಣ್ಣ. ಇಂದಷ್ಟೆ ಬಂದಿದ್ದಾಳೆ. ನಿಧಾನವಾಗಿ ಹೇಳುತ್ತಾಳೆ” ಎಂದರು ಶಂಕರಪ್ಪ.

'ರಾಗಸಂಗಮ'

ಲಾಟರಿ ಡ್ರಾ – ೧೩೮ರ ವಿಜೇತರು



ಶೇಷಮ್ಮ

ಕುಬುಸದ ಕಟ್ಟಡ

ಧಾರವಾಡ.

ಊಟ ಮುಗಿಸಿ ಕೈ ತೊಳೆಯಲು ಅಂಗಳಕ್ಕೆ ಬಂದ ಸುಮತಿ, ತಲೆಯೆತ್ತಿ ನೋಡಿದಳು. ಆಕಾಶ ನಿರಭ್ರವಾಗಿತ್ತು. ಅಸಂಖ್ಯ ತಾರೆಗಳು ಅಲ್ಲಿ ಮಿನುಗುತ್ತಿದ್ದವು. ಬಿದಿಗೆ ಚಂದ್ರ ನಗುತ್ತಿದ್ದ. ಸುಮತಿಗೆ ಸುಧೀರನ ನೆನಪಾಯಿತು. ಈಗ ಅವನು ಏನು ಮಾಡುತ್ತಿರಬಹುದು? ನಾನೇನೋ ಅವನ ನೆನಪಿನ ಸವಿಯಿಂದ ಸ[illegible]ಳಿಸುತ್ತಿದ್ದೇನೆ. ಅವನು? ಈ ವೇಳೆಗೆ ಆಸ್ಪತ್ರೆಯ ಡ್ಯೂಟಿಯಲ್ಲಿರಬಹುದೇ, ಮನೆಯಲ್ಲಿರಬಹುದೇ? ಯಾವುದೂ ಹೀಗೇ ಎಂದು ಹೇಳುವಂತಿದೆಯೇ? ಏನಾದರೂ ಅವನು ನನ್ನ ಮನಸ್ಸನ್ನೆಲ್ಲ ಆವರಿಸಿರುವಂತೆ ನಾನು ಅವನ ಮನಸ್ಸನ್ನಾವರಿಸಿರುವುದಂತೂ ದಿಟ. ನಿನ್ನ ಒಲವು ಅವನ ಕಡೆಗೆ ಇದ್ದರೂ ಆ ದಿನ ಅವನು ಏಕಾಏಕಿ ಈ ರೀತಿಯಲ್ಲಿ ತನ್ನ ಆಶೋತ್ತರವನ್ನು ಪ್ರಕಟಪಡಿಸುತ್ತಾನೆ ಎಂದು ನಾನು ಎಣಿಸಿರಲಿಲ್ಲ. ಆ ದಿನ ಸಂಜೆ ಆಸ್ಪತ್ರೆಯ ಡ್ಯೂಟಿ ಮುಗಿಸಿ ರೆಸ್ಟೋರೆಂಟ್‌ವೊಂದಕ್ಕೆ ಕರೆದೊಯ್ದು ಸುಧೀರ್ ತಿಂಡಿ ತಿನ್ನುತ್ತ ನುಡಿದ.

“ಸುಮತಿ ನಾನು ಶುದ್ಧ ಪ್ರಾಕ್ಟಿಕಲ್ ಮನುಷ್ಯ. ಸುತ್ತಿ ಬಳಸಿ ಮಾತನಾಡುವುದು ನನಗೆ ಬೇಕಿಲ್ಲ. ನನಗೆ ಬರುವುದೂ ಇಲ್ಲ. ಹೇಳಬೇಕೆಂದಿರುವ ವಿಚಾರವನ್ನು ನೇರವಾಗಿ ಹೇಳುತ್ತೇನೆ.”

“ಹೇಳಿ.”

“ಸುಮತಿ, ನಾನು ನಿಮ್ಮನ್ನು ಮದುವೆಯಾಗಬೇಕೆಂದು ಇಚ್ಛೆ ಪಟ್ಟಿದ್ದೇನೆ. ನಿಮ್ಮ ಮನಸ್ಸಿನಲ್ಲಿಯೂ ಇದೇ ವಿಚಾರವಿದೆಯೇ?”

“ಮನಸ್ಸಿನಲ್ಲಿ ನೂರಾರು ಆಸೆಗಳಿರಬಹುದು. ಆದರೆ ಮನಸ್ಸು ಬೇರೆ. ನಿಜ ಬದುಕು ಬೇರೆ.”

“ಅದು ಹೇಗಾದೀತು, ಮನಸ್ಸಿನ ಆಶೋತ್ತರಗಳನ್ನು ಪೂರೈಸಿಕೊಳ್ಳಲು ನಾವು ಪ್ರಯತ್ನ ಪಡಬೇಡವೇ?”

“ಬರಿಯ ಪ್ರಯತ್ನದಿಂದೇನು ಪ್ರಯೋಜನ ಸುಧೀರ್, ಅದೃಷ್ಟವೂ ಚೆನ್ನಾಗಿರಬೇಕಲ್ಲ.”

"ಏನಾಗಿದೆ ನಿಮ್ಮ ಅದೃಷ್ಟಕ್ಕೆ."

"ಅದು ನಿಮಗೆ ತಿಳಿಯದಿರುವ ವಿಚಾರ."

"ನೀವೀಗ ತಿಳಿಸಿ ಹೇಳಿರಲ್ಲ?"

"ಅಷ್ಟು ಸುಲಭವಾಗಿ ನಾನು ಹೇಳಲಾಗುತ್ತದೆಯೇ."

"ಯಾಕೆ ಹೇಳಬಾರದೇ?"

"ಹೇಳಬಾರದು ಎಂದೇನಿಲ್ಲ, ಆದರೆ ಹೇಳುವುದು ಮಾತ್ರ ನನಗೆ ತುಂಬ ಕಷ್ಟ."

"ಹಾಗಿದ್ದರೆ ಹೇಳಲೇಬೇಡಿ."

"ಹೇಳದೆಯೂ ಇರುವಂತಿಲ್ಲ."

"ಯಾಕೆ?"

"ಹೇಳದೆ, ನನ್ನ ಮನಸ್ಸಿನ ಭಾರ ಕಡಿಮೆಯಾಗುವಂತಿಲ್ಲ."

"ನೀವು ನಿಮ್ಮ ಮನಸ್ಸಿನ ಭಾರ ಕಡಿಮೆ ಮಾಡಿಕೊಳ್ಳಿ."

"ಅಂದರೆ?"

"ನೀವು ಹೇಳದೆ ನಿಮ್ಮ ವಿಚಾರ ಎಲ್ಲ ಸಂಗ್ರಹಿಸಿದ್ದೇನೆ ನಾನು."

"ಹೌದೇ, ಹೇಗೆ?"

"ಕಳೆದ ತಿಂಗಳು ನಿಮ್ಮ ಎರಡನೆಯ ಅಣ್ಣ ರಂಗಣ್ಣ ಬಂದಿದ್ದರಲ್ಲ, ಅವರಿಂದ ಎಲ್ಲ ವಿಚಾರ ತಿಳಿಯಿತು."

"ನನ್ನ ಬಗೆಗಿನ ಎಲ್ಲ ವಿಚಾರ ತಿಳಿದೂ, ನನ್ನನ್ನು ಮದುವೆಯಾಗಲು ಬಯಸುತ್ತೀರಾ?"

"ನಿಮ್ಮ ಬಗೆಗಿನ ವಿಚಾರ ತಿಳಿದ ಮೇಲೆ, ಮದುವೆಯಾದರೆ ನಿಮ್ಮನ್ನೇ ಮದುವೆಯಾಗಬೇಕೆಂದು ನಿರ್ಧರಿಸಿದ್ದೇನೆ."

"....."

"ಆದರೆ?"

"ಆದರೆ ಏನು?"

"ನಿಮ್ಮ ಒಪ್ಪಿಗೆ ಇದ್ದರೆ ಮಾತ್ರ."

"ನನ್ನ ಒಪ್ಪಿಗೆಯೇನೋ ಇದೆ."

"ಮತ್ತೇನು?"

"ಮನೆಯವರೇನೆನ್ನುವುರೋ, ಒಮ್ಮೆ ಕೇಳಿ ಬರುತ್ತೇನೆ."

"ಹಾಗೆ ಮಾಡಿ" ಎಂದಿದ್ದ ಸುಧೀರ.

ನಿಂತ ಕಾಲಲ್ಲೇ ಹೊರಟು ಬಂದಿದ್ದಳು ಸುಮತಿ. ಹಳ್ಳಿ ಮನೆಯ ವಾತಾವರಣ, ತಾಯಿಯ ಮೂಢನಂಬಿಕೆ ಅವಳಿಗೆ ಹೊಸದೇನೂ ಅಲ್ಲ. ಯಾರು ಒಪ್ಪುವರೋ ಇಲ್ಲವೋ, ಹಂಗಿಸುವರೋ, ಏನನ್ನುವರೋ ಹೇಳುವುದಾದರೂ ಹೇಗೆ ಇದು ಅವಳ ಸಮಸ್ಯೆ. ಕೈ ತೊಳೆದು ಕೋಣೆಗೆ ಬಂದು ಮಲಗಿದವಳಿಗೆ ಬಹಳ ಹೊತ್ತು ನಿದ್ರೆ ಬರಲಿಲ್ಲ. ಮನಸ್ಸು ಡೋಲಾಯಮಾನವಾಗಿತ್ತು, ಆತಂಕಗೊಂಡಿತ್ತು. ಮನೆಯಲ್ಲಿ ಯಾರಿಗೂ ಅಸಮಾಧಾನವನ್ನುಂಟು ಮಾಡುವುದು ಅವಳಿಗೆ ಬೇಕಿರಲಿಲ್ಲ. ನೋಯಿಸುವುದೂ ಬೇಕಿರಲಿಲ್ಲ. ಮೆಡಿಕಲ್



ಕಾಲೇಜಿಗೆ ಸೇರುವಾಗ, ನಾನು ಮೆಡಿಕಲ್ ಓದಲೇಬೇಕು, ಡಾಕ್ಟರ್ ಆಗಲೇಬೇಕು ಎಂದು ಹಟ ಹಿಡಿದದ್ದುಂಟು ನಿರ್ಬಿಡೆಯಿಂದ. ಆದರೆ ಮನೆ ಮಂದಿಯೊಂದಿಗೆ ಈ ವಿಚಾರ ಎತ್ತಲು ಮಾತ್ರ ಏನೋ ಅಳುಕು, ಏನೋ ಸಂಕೋಚ ಹಿಂಜರಿಕೆ. ತಾನು ಬೆಳೆದ ವಾತಾವರಣವೇ ಅಂತಾದ್ದಲ್ಲವೇ? ಈಗ ತಾನಾಡುವ ಮಾತುಗಳಿಂದ ಮನೆಯಲ್ಲಿ ಯಾವುದೇ ಹಗರಣ ನಡೆಯುವುದು ಬೇಕಿರಲಿಲ್ಲ ಸುಮತಿಗೆ. ಎಷ್ಟು ಪ್ರಯತ್ನಪಟ್ಟರೂ ಕಣ್ಣು ಮುಚ್ಚಿದರೂ ತೆಗೆದರೂ ಬಾಲ್ಯದ ದಿನಗಳಲ್ಲಿ ನಡೆದ ಅಹಿತಕರ ಘಟನೆಗಳು ಕಣ್ಮುಂದೆ ಸುಳಿಯತೊಡಗಿದವು.

ತಾನಾಗ ಐದು ವರುಷದ ಹುಡುಗಿ ಇರಬಹುದು. ಅಣ್ಣಂದಿರಿಬ್ಬರೂ ಹೆಗಲಿಗೆ ಚೀಲ ನೇತುಹಾಕಿಕೊಂಡು ಶಾಲೆಗೆ ಹೋಗುತ್ತಿದ್ದರು. ಅವರು ಬೆಳಗ್ಗೆ ಮನೆ ಬಿಟ್ಟರೆಂದರೆ ಹಿಂದಿರುಗಿ ಬರುತ್ತಿದ್ದುದು ಸಂಜೆಗೆ. ರಾತ್ರಿ ಲಾಟೀನ್ ದೀಪದ ಮುಂದೆ ಅವರು ಓದು. ಪ್ರತಿದಿನ ಬೆಳಗ್ಗೆ ಅವರು ಶಾಲೆಗೆ ಹೋಗುವುದನ್ನೂ ಸಂಜೆ ಹಿಂದಿರುಗಿ ಬರುವುದನ್ನೂ, ರಾತ್ರಿ ಲಾಟೀನ್ ದೀಪದ ಬೆಳಕಿನಲ್ಲಿ ಓದುವುದನ್ನೂ ಕಾತರದ ಕಂಗಳಿಂದ ವೀಕ್ಷಿಸಿದೆ. ಅಪ್ಪ ನನ್ನನ್ನು ಇಂದು ಶಾಲೆಗೆ ಸೇರಿಸಿಯಾರು, ನಾಳೆ ಶಾಲೆಗೆ ಸೇರಿಸಿಯಾರು ಎಂದು ಕಾತರದ ಕಂಗಳಿಂದ ವೀಕ್ಷಿಸಿದೆ ನಾನು. ಆದರೆ ಆದಿನ ಬರಲೇ ಇಲ್ಲ. ಆಗ ನನ್ನಿಂದ ತಡೆಯುವುದಾಗಲಿಲ್ಲ. ಕೇಳಿಯೇ ಬಿಟ್ಟೆ.

"ಅಪ್ಪ ನಾನು ಎಂದು ಶಾಲೆಗೆ ಹೋಗುವುದು?"

"ನೀನು ಶಾಲೆಗೆ ಹೋಗಿ ವಿದ್ಯೆ ಕಲಿಯಬೇಕೇನಮ್ಮ?"

"ಹೌದು ಅಪ್ಪ."

"ಮನೆಯಲ್ಲಿ ರಾಜಣ್ಣ, ರಂಗಣ್ಣನಿಂದಲೇ ಸ್ವಲ್ಪ ಅಕ್ಷರ ಮಗ್ಗಿ ಕಲಿತುಕೋ."

"ಹಾಗಾಗುವುದಿಲ್ಲ ಅಪ್ಪ ನಾನೂ ರಾಜಣ್ಣರ ಹಾಗೆ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಬೇಕು."

"ನೀನೇಕೆ ಶಾಲೆಗೆ ಹೋಗಬೇಕು ಸುಮತಿ. ಮನೆ ಕೆಲಸ ಕಲಿತುಕೋ ಸಾಕು."

"ರಾಜಣ್ಣ, ರಂಗಣ್ಣ ಶಾಲೆಗೆ ಹೋಗುವುದಿಲ್ಲವೇನವ್ವ?"

"ಅವರು ಗಂಡು ಹುಡುಗರು. ಶಾಲೆಗೆ ಹೋಗಲೇಬೇಕು ಸ್ವಲ್ಪ ದಿನ."

"ಹೆಣ್ಣು ಮಕ್ಕಳು ಶಾಲೆಗೆ ಸೇರಬಾರದು ಎಂದೇನಾದರೂ ನಿಯಮವಿದೆಯೇನು?"

"ಹಾಗೇನೂ ಇಲ್ಲ. ನೀನು ಯಾಕೆ ಶಾಲೆಗೆ ಹೋಗಬೇಕು ಸುಮ್ಮನೆ ಸಮಯ ವ್ಯರ್ಥ. ಅದೇ ಸಮಯದಲ್ಲಿ ಮನೆ ಕೆಲಸ ಮಾಡು."

"ಹಾಗಾಗುವಿದಿಲ್ಲವ್ವ. ನಾನು ಶಾಲೆಗೆ ಹೋಗಿ ವಿದ್ಯೆ ಕಲಿಯಲೇ ಬೇಕು."

ಅಪ್ಪನಿಗೆ ನನ್ನ ಮೇಲೆ ಕರುಣೆ ಮೂಡಿರಬೇಕು. ಅವರು ನುಡಿದರು "ಹುಡುಗಿ ಇನ್ನೂ ಚಿಕ್ಕವಳು. ವಿದ್ಯೆ ಕಲಿಯಬೇಕೆಂದು ಆಸೆಪಡುತ್ತಾಳೆ. ನಾಲ್ಕುದಿನ ಶಾಲೆಗೆ ಹೋಗಲಿ ಬಿಡು. ಹೇಗೂ ಜೊತೆಗೆ ರಾಜಣ್ಣ, ರಂಗಣ್ಣ ಇದ್ದಾರಲ್ಲ."

"ಸರಿ ಬಿಡಿ, ಅವಳಿಗೆ ನೀವು ಈ ರೀತಿ ಸಲಿಗೆ ಕೊಟ್ಟರೆ ನಾಳೆ ಅವಳು ನಿಮ್ಮ ತಲೆಯ ಮೇಲೇ ಕುಳಿತುಕೊಳ್ಳುತ್ತಾಳೆ."

"ಓದಲು ಅನುಮತಿ ಕೊಡುವುದು ಸಲಿಗೆ ಕೊಟ್ಟ ಹಾಗೇನವ್ವ. ಅದರಲ್ಲೇನು ತಪ್ಪು?"

"ನೋಡು ಚೋಟುದ್ದದ ಹುಡುಗಿ ಎಷ್ಟು ಬಾಯಿ ಮಾಡುತ್ತೀಯಾ. ಇನ್ನು ನಾಲ್ಕಕ್ಷರ

ಕಲಿತಮೇಲೆ ನಿನ್ನನ್ನು ಹಿಡಿಯುವವರ್ಯಾರು?''

"ಸುಮ್ಮನಿರು ಶಿವಮ್ಮ ಚಿಕ್ಕ ಹುಡುಗಿಯೊಂದಿಗೇಕೆ ಕೋಪಗೊಳ್ಳುತ್ತೀ. ನಾಲ್ಕುದಿನ ಬಿಸಿಲಲ್ಲಿ, ಮಳೆಯಲ್ಲಿ ದೂರದ ಶಾಲೆಗೆ ಹೋಗಿ ಬಂದರೆ, ಆಮೇಲೆ ಅವಳೇ ಶಾಲೆಗೆ ಹೋಗುವುದನ್ನು ನಿಲ್ಲಿಸುತ್ತಾಳೆ.''

"ಸರಿ ಸರಿ, ಏನಾದರೂ ಮಾಡಿಕೊಳ್ಳಿ. ನೀವು ಅಪ್ಪ ಉಂಟು, ಮಗಳುಂಟು. ನನ್ನ ಮಾತೆಲ್ಲಿ ಪಥ್ಯ ನಿಮಗೆ'' ಎಂದು ಒಳಗಡೆ ಹೋದಳು ಶಿವಮ್ಮ.

ಶಾಲೆಗೆ ದಾಖಲಾಗಿ ರಾಜಣ್ಣ, ರಂಗಣ್ಣರೊಂದಿಗೆ ಶಾಲೆಗೆ ಹೋಗಿಬರತೊಡಗಿದೆ ಅವರೊಂದಿಗೆ ಕೆಲವು ದಿನ ಶಾಲೆಗೆ ಹೋಗಿ ಬರುವ ವೇಳೆಗೆ ಅವರಿಬ್ಬರೂ ಎಷ್ಟರಮಟ್ಟಿಗೆ ಶಾಲೆಗೆ ಹೋಗುತ್ತಾರೆ ಎಂಬುದು ನನಗೆ ತಿಳಿದು ಹೋಯಿತು. ರಾಜಣ್ಣ ಆದಷ್ಟೂ ನಿಧಾನವಾಗಿ ನಡೆದು ಸುತ್ತೀ ಬಳಸಿ ತಡಮಾಡಿ ಶಾಲೆಗೆ ಹೋಗುತ್ತಿದ್ದ. ದಾರಿಯಲ್ಲೆಲ್ಲಾದರೂ ಮಾವಿನಮರ ಕಂಡರೆ ಅದಕ್ಕೆ ಕಲ್ಲು ಹೊಡೆಯುವುದು, ಮಾವಿನಕಾಯಿ ಬೀಳಿಸುವುದು. ಮನೆಯಿಂದಲೇ ಚಡ್ಡೀಜೋಬಿನ ಕಾಗದಪಟ್ಟಣದಲ್ಲಿ ತುಂಬಿರುತ್ತಿದ್ದ ಉಪ್ಪು, ಮೆಣಸಿನಪುಡಿ ಕಾಯಿಗೆ ಹಚ್ಚಿ ನಿಧಾನವಾಗಿ ತಿನ್ನುತ್ತ ನಡೆಯುವುದು ಇಲ್ಲವೇ ಕಾಲಿನಲ್ಲಿ ಒಂದು ಕಲ್ಲಿನ ತುಂಡನ್ನೋ, ಕಾಗದದ ಚೂರನ್ನೋ ಒದೆಯುತ್ತ ಶಾಲೆಯವರೆಗೆ ನಡೆಯುವುದು ಅವನ ಪರಿ. ಶಾಲೆಗೆ ತಡವಾದೀತು, ಶಾಲೆಯ ಬೆಲ್ ಹೊಡೆದೀತು ಆದಷ್ಟು ಬೇಗ ಶಾಲೆ ತಲುಪಬೇಕು ಎಂಬ ಆತಂಕವಾಗಲೀ, ಭಯವಾಗಲೀ ಅವನಿಗೆ ಇರಲಿಲ್ಲ. ಇನ್ನು ರಂಗಣ್ಣನಾದರೋ ನೀವು ಮುಂದೆ ಹೋಗುತ್ತಿರಿ, ನಾನು ಬರುತ್ತೇನೆ ಎಂದು ಹೇಳಿದವನು ಯಾವುದಾದರೂ ಮರದ ಕೆಳಗೆ ನಿದ್ರಿಸಿ, ಸಂಜೆಗೆ ಮನೆಗೆ ಹಿಂದಿರುಗುತ್ತಿದ್ದ.

ಇವರಿಬ್ಬರ ದೆಸೆಯಿಂದ ಸರಿಯಾದ ಸಮಯಕ್ಕೆ ಶಾಲೆಗೆ ಹೋಗಲು ಆಗುತ್ತಿರಲಿಲ್ಲ. ನಿಜ ಹೇಳಬೇಕೆಂದರೆ ಅವರಿಬ್ಬರಿಗೂ ವಿದ್ಯಾಭ್ಯಾಸದಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ. ಅವರಿಂದಾಗಿ ನನಗೂ ತೊಂದರೆಯಾಗುತ್ತಿತ್ತು. ಒಂದು ದಿನವೂ ಶಾಲೆಗೆ ಪ್ರಾರ್ಥನೆಯ ಸಮಯಕ್ಕೆ ಹೋಗಲಾಗುತ್ತಿರಲಿಲ್ಲ. ಶಾಲೆಯಲ್ಲಿ ಪ್ರಾರ್ಥನೆ ನನಗೆ ತುಂಬ ಇಷ್ಟವಾದ ವಿಷಯವಾಗಿತ್ತು. 'ಸ್ವಾಮಿದೇವನೆ, ಲೋಕಪಾಲನೆ ತೇನಮೋಸ್ತು ನಮೋಸ್ತುತೇ. ಪ್ರೇಮದಿಂದಲಿ



ಅಂದು ಇಂದು

ಅಂದು
ಮನೆಬಿಟ್ಟು ಹೋಗಲು
ಮಧ್ಯರಾತ್ರಿಗಾಗಿ ಕಾದ
ಗೌತಮ
ಇಂದು
ನಲ್ಲೆಗಾಗಿ
ಪ್ರತಿ ರಾತ್ರಿ ಕಾಯುವನು
ಪ್ರಿಯತಮ.

— ವಿನಾಯಕ ಗಾಂವ್ಕರ್

ನೋಡು ನಮ್ಮನು ತೇನಮೋಸ್ತು ನಮೋಸ್ತುತೇ.'

"ರಾಜಣ್ಣ, ರಂಗಣ್ಣ ನಿಮ್ಮಿಂದಾಗಿ ನನಗೆ ಪ್ರಾರ್ಥನೆಯ ತರಗತಿಗೆ ಹೋಗಲು ಆಗುವುದೇ ಇಲ್ಲ. ಮಿಕ್ಕ ತರಗತಿಗಳಿಗೂ ತಡವಾಗುತ್ತದೆ. ನೀವು ಸರಿಯಾಗಿ ಶಾಲೆಗೆ ಬಾರದೇ ಹೋದರೆ ಅಪ್ಪನಿಗೆ ಹೇಳುತ್ತೇನೆ."

"ಹೇಳು. ನೀನು ಅಪ್ಪನಿಗೆ ಹೇಳಿದರೆ ನಾವು ಅವ್ವನಿಗೆ ಹೇಳಿ ನಿನ್ನ ವಿದ್ಯಾಭ್ಯಾಸವನ್ನು ನಿಲ್ಲಿಸುತ್ತೇವೆ" ಎನ್ನುತ್ತಿದ್ದರು.

ಹಾಗಾಗಿ ಅಪ್ಪನಿಗೆ ಹೇಳುವ ಹಾಗೂ ಇರಲಿಲ್ಲ. ಇವರಿಬ್ಬರೂ ಏನಾದರೂ ಮಾಡಿಕೊಳ್ಳಲಿ ಎಂದು ಹೇಳಿ ನಾನು ಬಿರಬಿರನೆ ಶಾಲೆಯ ಕಡೆ ಹೆಜ್ಜೆ ಹಾಕುತ್ತಿದ್ದೆ. ಹಿಂದಿರುಗುವಾಗ ಮಾತ್ರ ರಾಜಣ್ಣ, ರಂಗಣ್ಣನ ಜೊತೆಯಲ್ಲಿಯೇ ಮನೆಗೆ ಬರುತ್ತಿದ್ದೆ. ಒಬ್ಬಳೇ ಬಂದುದನ್ನು ಕಂಡರೆ ಅಮ್ಮ ಶಾಲೆ ಬಿಡಿಸಿಯಾಳೆಂಬ ಹೆದರಿಕೆ.

ವಿದ್ಯಾರ್ಜನೆಯಲ್ಲಿ ಮಾತ್ರ ಬಹಳಷ್ಟೇ ಶ್ರದ್ಧೆ, ಭಕ್ತಿ, ಆಸಕ್ತಿ ಇತ್ತು. ಪಾಠ ಹೇಳುವ ಉಪಾಧ್ಯಾಯರಲ್ಲಿ ಅಪಾರ ಗೌರವ ಕೂಡ.

"ಬೆಳೆಯುವ ಪೈರು ಮೊಳಕೆಯಲ್ಲಿಯೇ ಎಂಬಂತೆ, ನೀನು ಪ್ರಚಂಡ ಬುದ್ಧಿವಂತ ಹುಡುಗಿಯಾಗುತ್ತೀ ಎಂದು ಈಗಲೇ ಹೇಳಬಹುದು. ಆದರೆ ನಿನ್ನ ಅಣ್ಣಂದಿರೇಕೆ ಹಾಗೆ ಇದ್ದಾರೆ?"

ಅವರ ಈ ಪ್ರಶ್ನೆಗೆ ಏನುತ್ತರ ಹೇಳಬಹುದಿತ್ತು?

"ಅವರಿಗೂ ಸರಿಯಾಗಿ ಶಾಲೆಗೆ ಬರಲು ಹೇಳು, ಮನೆಯಲ್ಲಿ ಚೆನ್ನಾಗಿ ಅಭ್ಯಾಸ ಮಾಡಲು ಹೇಳು."

"ಆಯಿತು, ಹೇಳುತ್ತೇನೆ ಸಾರ್."

"ಸರಿಯಾಗಿ ಅಭ್ಯಾಸ ಮಾಡದೆ ಹೋದರೆ, ದೊಡ್ಡವರಾದ ಮೇಲೆ ಹಸು ಎಮ್ಮೆ ಮೇಯಿಸಿಕೊಂಡೋ ಇಲ್ಲ ನಿಮ್ಮ ಅಪ್ಪನ ಹೊಲಗದ್ದೆಯಲ್ಲಿ ಕೆಲಸ ಮಾಡಿಕೊಂಡೋ ಈ ಹಳ್ಳಿಯಲ್ಲಿಯೇ ಇರಬೇಕಾಗುತ್ತದೆ." ಉಪಾಧ್ಯಾಯರ ಮಾತುಗಳನ್ನು ನಾನು ರಾಜಣ್ಣನ ಬಳಿ ಹೇಳಿದೆ.

"ರಾಜಣ್ಣ ಮೇಸ್ಟ್ರು ಏನು ಹೇಳಿದರು ಗೊತ್ತಾ?"

"ಏನು ಹೇಳಿದರು."

"ನೀನು ಸಮಯಕ್ಕೆ ಸರಿಯಾಗಿ ಶಾಲೆಗೆ ಬಂದು ಅಭ್ಯಾಸ ಮಾಡದೆ ಹೋದರೆ?"

"ಮಾಡದೇ ಹೋದರೆ ಏನಾಗುತ್ತದಂತೆ?"

"ದೊಡ್ಡವನಾದ ಮೇಲೆ ನೀನು ಹೊಲಗದ್ದೆ ಕೆಲಸ ಮಾಡಿಕೊಂಡು ಹಳ್ಳಿಯಲ್ಲೇ ಇರಬೇಕಾಗುತ್ತದಂತೆ."

"ಆದರಲ್ಲಿ ತಪ್ಪೇನಿದೆ?"

"ಅಂದರೆ?"

"ಭೂಮಿತಾಯಿ ಸೇವೆ ಮಾಡ್ಕೊಂಡು, ಅಪ್ಪ ಮಾಡಿಟ್ಟಿರೋ ಆಸ್ತಿ ಹೊಲಗದ್ದೆ ರೂಡಿಸಿಕೊಂಡು ಇರ್ತೀನಿ."

"ಅಂದರೆ ನಿನಗೆ ಹಳ್ಳಿಯಲ್ಲಿರೋಕೆ ಬೇಸರ ಇಲ್ವಾ?"

"ಬೇಸರ ಯಾಕೆ, ನನಗೆ ಹಳ್ಳಿಯ ಜೀವನ, ಬದುಕೇ ಇಷ್ಟ."

"ಆದರೆ ಹಳ್ಳಿಯಲ್ಲಿರುವವರೆಲ್ಲ ಪಟ್ಟಣದಲ್ಲಿರಬೇಕು ಅಂತಾ ಆಸೆ ಪಡ್ತಾರಲ್ಲ."

"ಆದರೆ ನನ್ನ ವಿಚಾರ ಹಾಗಲ್ಲ. ಪಟ್ಟಣಕ್ಕೆ ಹೋದರೆ ಎಲ್ಲ ಕೊಂಡ ಹಾಲು, ತರಕಾರಿ ಬಳಸಬೇಕು. ಬಾಡಿಗೆ ಮನೆಯಲ್ಲಿರಬೇಕು. ಇಲ್ಲಿನ ಹಾಗೆ ಸ್ವಂತವಾಗಿ ಬೆಳೆದದ್ದು, ಸ್ವಚ್ಛವಾದದ್ದು, ಶುಭ್ರವಾದದ್ದು ಸಿಗುವುದೇ?"

"ಹಸು ಎಮ್ಮೆ ಮೇಯಿಸಿಕೊಂಡು ಇರಬೇಕಾಗುತ್ತದೆ" ಎಂದರು.

"ಹೇಳಲಿ ಬಿಡು, ಮೂಕ ಪ್ರಾಣಿಗಳನ್ನು ಕಂಡರೆ ನನಗೆ ಬಹಳ ದಯೆ ಅನುಕಂಪ ಇದೆ. ಅವುಗಳ ಸೇವೆ ಮಾಡಲು ನನಗೆ ಬೇಸರವೇ ಇಲ್ಲ."

"ಅಂದರೆ ನಿನಗೆ ಇಲ್ಲಿನ ಜೀವನವೇ ಇಷ್ಟ ಎಂದಾಯಿತು."

"ಹೌದು, ಅದರಲ್ಲಿ ಸಂಶಯವೇ ಇಲ್ಲ."

"ಹಾಗಿದ್ದ ಮೇಲೆ ಶಾಲೆಗೆ ಯಾಕೆ ಬರುತ್ತೀ?"

"ಏನೋ ನಾಲ್ಕಕ್ಷರ ಓದು ಓದೋಣ ಅಂತ. ಅದರಲ್ಲಿ ತಪ್ಪೇನು ಹೇಳು."

"ತಪ್ಪೇನೂ ಇಲ್ಲ, ಆದರೆ ಶಾಲೆಗೆ ಬರುತ್ತಿದ್ದೀಯಲ್ಲ, ಸ್ವಲ್ಪ ಶ್ರದ್ಧೆಯಿಂದ ಅಭ್ಯಾಸ ಮಾಡು" ಎಂದು ಹೇಳಿದೆ ಅಷ್ಟೆ.

"ಶಾಲೆಯಲ್ಲಿ ಪಾಠ ಕೇಳುವ ವೇಳೆಗೆ ಸಾಕಾಗಿ ಹೋಗುತ್ತವೆ. ಮನೆಯಲ್ಲಿ ಮತ್ತೆ ಯಾರು ಅಭ್ಯಾಸ ಮಾಡುತ್ತಾರೆ ಹೇಳು?"

"ಹಾಗೆಂದರೆ ಹೇಗೆ, ಶಾಲೆಯಲ್ಲಿ ಹೇಳಿದ್ದು ನಿನಗರ್ಥವಾಗಬೇಕಾದರೆ ಮನೆಯಲ್ಲಿ ಸ್ವಲ್ಪ ಓದಬೇಕು."

"ಯಾಕೆ?"

"ಪರೀಕ್ಷೆಗಳಲ್ಲಿ ಪಾಸಾಗಬೇಡವೇ?"

"ಪರೀಕ್ಷೆಗಳನ್ನು ಪಾಸು ಮಾಡುವುದರಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ.



ಅನೇಕ ವಿಷಯಗಳನ್ನು ಅರ್ಧರ್ಧ ಕಲಿಸುವುದಕ್ಕಿಂತ ಕೆಲವೇ ವಿಷಯಗಳನ್ನು ಚೆನ್ನಾಗಿ ಕಲಿಸುವುದು ಒಳ್ಳೆಯದು.

—ಆಂಡ್ರೆ ಮಾರೋಯಿಸ್

ಕಲೆಯು ಜೀವನದ ಶೃಂಗಾರ. ಒಂದು ಸಂಸ್ಕೃತಿಯ ಬಂಗಾರ.

—ಗೌರೀಶ ಕಾಯ್ಕಿಣಿ

ರಾಷ್ಟ್ರದ ಅಳಿವು, ಉಳಿವು, ಬೆಳವಣಿಗೆಗಳು ಆ ರಾಷ್ಟ್ರದ ಕಾವ್ಯ, ಸಂಗೀತ ಇತ್ಯಾದಿಗಳ ಅಳಿವು, ಉಳಿವು, ಬೆಳವಣಿಗೆಯನ್ನೇ ಅವಲಂಬಿಸಿದೆ. —ವಿಲಿಯಂ ಬ್ಲೇಕ್

ಸಂಗ್ರಹ :

ಹಕ್ಕಿ ಮಂಜು ಅಬ್ದುಲ್ ಮಜೀದ್

ಹೇಗಿದ್ದರೂ ಪರೀಕ್ಷೆಯ ಹಿಂದಿನ ದಿನ ಸ್ವಲ್ಪ ಓದುತ್ತೀನಲ್ಲ.''

"ಅಷ್ಟು ಓದಿದರೆ ಸಾಕೆ?''

"ಸಾಕೋ ಸಾಲದೋ, ನಾನು ಓದುವುದು ಮಾತ್ರ ಅಷ್ಟೆ'' ಎಂದ ರಾಜಣ್ಣ.

ರಂಗಣ್ಣನ ಮುಂದೆ ನಾನು ಇದೇ ಮಾತನ್ನಾಡಿದಾಗ "ಓದಿನಲ್ಲೇನಿದೆ ಸುಮತಿ, ಚೆನ್ನಾಗಿ ಹಣ ಇರಬೇಕು, ಆಗಲೇ ಮಜ'' ಎಂದ.

"ಈಗ ಚೆನ್ನಾಗಿ ಓದಿದರೆ ತಾನೆ ಮುಂದೆ ಹಣ ಸಂಪಾದಿಸಿ, ಮಜ ಮಾಡುವುದು.''

"ನಂಗೆ ಹೇಳಲು ಬರಬೇಡ. ಈಗ ಓದದೇ ಇರುವವರೆಲ್ಲ ದೇಶ ವಿದೇಶ ಸುತ್ತಿಕೊಂಡು ಬಂದಿದ್ದಾರೆ ಗೊತ್ತೇ?''

"ಹಾಗಾದರೆ ನಿನಗೂ ವಿದ್ಯಾಭ್ಯಾಸದಲ್ಲಿ ಆಸಕ್ತಿ ಇಲ್ಲವೇ ರಾಜಣ್ಣನ ಹಾಗೆ.''

"ಆಸಕ್ತಿ ಇಲ್ಲ ಎಂದು ನಾನು ಹೇಳುವುದಿಲ್ಲ, ಹೇಗಾದರೂ ಮಾಡಿ ಪರೀಕ್ಷೆಗಳನ್ನು ಪಾಸು ಮಾಡಿದರಾಯಿತು.''

"ಸರಿಯಪ್ಪ, ನಿಮಗೆ ಹೇಗೆ ತೋಚುತ್ತದೋ ಹಾಗೆ ಮಾಡಿಕೊಳ್ಳಿ'' ಎಂದೆ.

ರಾತ್ರಿ ಲಾಟೀನ್ ಬೆಳಕಿನ ಮುಂದೆ ಓದಲು ಮೂವರೂ ಕುಳಿತುಕೊಳ್ಳುತ್ತಿದ್ದೆವು. ಹತ್ತು ನಿಮಿಷ ಕೂಡ ರಾಜಣ್ಣ, ರಂಗಣ್ಣ ಕುಳಿತು ಓದದೆ ಎದ್ದು ಓಡುತ್ತಿದ್ದರು. ನಾನು ನಿರಾತಂಕವಾಗಿ ನಿಧಾನವಾಗಿ ಅಭ್ಯಾಸ ಮಾಡೋಣ ಎಂದು ಹೇಳಿ ಕುಳಿತುಕೊಳ್ಳುತ್ತಿದ್ದೆ. ಆದರೆ ಶಾಲೆಗೆ ಸೇರಲು ಒಂದು ವಿಘ್ನವಾದರೆ, ವಿದ್ಯಾಭ್ಯಾಸ ಮಾಡಲು ನೂರೆಂಟು ವಿಘ್ನಗಳು.

ನಾನು ಓದುತ್ತ ಕುಳಿತೆನೆಂದರೆ ಅವ್ವ ಒಳಗಿನಿಂದ ಕೂಗುತ್ತಿದ್ದಳು. "ಸಾಕು ನೀನು ಓದಿದ್ದು, ಬರೆದದ್ದು ಒಳಗಡೆ ಬಾರೆ. ಒಂದು ರಾಶಿ ಪಾತ್ರೆ ಬಿದ್ದಿದೆ ತೊಳೆಯುವಂತೆ ಬಾ. ಗಂಡು ಹುಡುಗರೇ ಅಷ್ಟು ಓದುವುದಿಲ್ಲ. ನೀನು ಓದಿ ಯಾವ ರಾಜ್ಯ ಆಳಬೇಕಾಗಿದೆ?''

"ಹಾಗಂದರೆ ಹೇಗಪ್ಪ, ರಾಜಣ್ಣ, ರಂಗಣ್ಣ ಓದುತ್ತ ಕುಳಿತಾಗ ನೀನು ಹೀಗೆ ಕೂಗಿ ಕೆಲಸ ಹೇಳ್ತೀಯಾ?''

"ಅವರು ಗಂಡು ಹುಡುಗರು, ಓದಕ್ಕೆ ಕುಳಿತುಕೊಳ್ಳೋದೆ ಅಪರೂಪ. ಏನೋ ನಾಲ್ಕಕ್ಷರ ಕಲೀಲಿ ಅಂತ ಸುಮ್ಮನಿರುತ್ತೇನೆ.''

"ಗಂಡು ಹುಡುಗರಾದರೆ ಓದಬಹುದಾ, ಹೆಣ್ಣುಮಕ್ಕಳು ಓದಬಾರದೇ?''

"ನೀನು ಮೂರು ಹೊತ್ತು ಶಾಲೆ, ಓದು ಅಂತ ಕಾಲ ಕಳೆಯುತ್ತಿದ್ದರೆ ಮನೆಕೆಲಸ ಮಾಡುವವರ್ಯಾರು? ಅಲ್ಲದೆ ನೀನು ಓದಿ ಏನಾಗಬೇಕಾಗಿದೆ?''

"ಹೆಣ್ಣು ಅಂತ ಹೇಳಿದರೆ ಏನೂಂತ ತಿಳಿದುಕೊಂಡಿದ್ದೀಯ ನೀನು. ತೊಟ್ಟಿಲು ತೂಗುವ ಕೈ, ರಾಜ್ಯವನಾಳುವ ಕೈ ಎಂದು ತಿಳಿದಿಲ್ಲವೇ ನೀನು?''

"ಹಾಗೆಲ್ಲ ಹೆಮ್ಮೆಪಡಬೇಡ ನೀನು. ಎಷ್ಟು ಓದಿದರೂ ಹೆಂಗಸಾದವಳಿಗೆ ಸೌಟು ತಿರುಗಿಸುವ ಕೆಲಸ ತಪ್ಪಿದ್ದಲ್ಲ?''

"ನೀನು ಅದೇ ಕೆಲಸ ಮಾಡಿದೆ ಎಂದು ಹೇಳಿ, ನಾನೂ ಅದೇ ಕೆಲಸ ಮಾಡಿಕೊಂಡಿರಲಿ ಎಂದು ಆಶಿಸಬಾರದವ್ವ ನೀನು.''

"ನಾಲ್ಕಕ್ಷರ ಕಲಿತಿದ್ದೀ ಅಂತ ಇಷ್ಟೆಲ್ಲ ಮಾತನಾಡಬಾರದು ಸುಮತಿ. ನೀನು ಏನೂ

ಕೆಲಸ ಮಾಡಬೇಡ ಹೋಗು'' ಎಂದಳು ಶಿವಮ್ಮ.

"ಕೆಲಸ ಮಾಡಿ ಕೊಡುತ್ತೇನಮ್ಮ ಇಲ್ಲ ಎನ್ನುವುದಿಲ್ಲ, ಆದರೆ ನನ್ನ ಓದಿಗೆ ನೀನು ಅಡ್ಡಿಪಡಿಸಬೇಡ ನೀನು'' ಎಂದಳು ಸುಮತಿ.

ರಾಜಣ್ಣ, ರಂಗಣ್ಣರ ಜೊತೆ ಶಾಲೆಗೆ ಹೋಗಿಬರುತ್ತ ಪ್ರೈಮರಿ ಏಳನೆಯ ತರಗತಿ ಪಾಸು ಮಾಡಿದಳು ಸುಮತಿ. ಹೈಸ್ಕೂಲಿಗೆ ಹೋಗಬೇಕೆಂದರೆ ಮತ್ತೂ ದೂರದ ಶಾಲೆಗೆ ಹೋಗಬೇಕಿತ್ತು. ಆದರೆ ಆ ವೇಳೆಗಾಗಲೇ ದೊಡ್ಡಣ್ಣ ಎಸ್.ಎಸ್.ಎಲ್.ಸಿ. ಫೇಲಾಗಿ ಓದುವುದನ್ನೇ ಬಿಟ್ಟುಬಿಟ್ಟಿದ್ದ. ರಂಗಣ್ಣ ಬಸ್ಸಿನಲ್ಲಿ ಪಕ್ಕದ ತಾಲ್ಲೂಕ್ ಹೆಡ್‌ಕ್ವಾರ್ಟಸ್ ಹೋಗಿ ಪಿ.ಯು.ಸಿ.ಗೆ ಸೇರಿದ್ದ. ಪ್ರತಿನಿತ್ಯ ಬಸ್ಸಿನಲ್ಲಿ ಅವನ ತಿರುಗಾಟ. ಈಗ ವಿದ್ಯಾಭ್ಯಾಸ ಮುಂದುವರಿಸಬೇಕು ಎಂದರೆ ಸುಮತಿ ಒಬ್ಬಳೇ ಎಂಟು ಕಿಲೋಮೀಟರ್ ದೂರದ ಶಾಲೆಗೆ ಹೋಗಬೇಕು. ಅದು ಅವಳಿಗೆ ಇಷ್ಟವೇ ಆಗಿತ್ತು. ಆದರೆ ಶಿವಮ್ಮ ಮತ್ತೆ ವರಾತ ತೆಗೆದಳು.

"ಪ್ರಾಯದ ಹುಡುಗಿ ಅಷ್ಟು ದೂರದ ಶಾಲೆಗೆ ಒಬ್ಬಳೇ ಹೋಗುವುದೇ. ಏನೂ ಬೇಕಾಗಿಲ್ಲ'' ಎಂದಳು.

"ನಾನು ಹೈಸ್ಕೂಲಿನ ವಿದ್ಯಾಭ್ಯಾಸ ಮಾಡಲೇಬೇಕು'' ಎಂದಳು ಸುಮತಿ.



"ನಿನ್ನೆ ಶಾಲೆಗೆ ಬಾರದೆ ಎಲ್ಲಿಗೆ ಹೋಗಿದ್ಯೋ?''

"ನನಗೂ ಹೆಂಡ್ತಿ ಬೇಕು ಮೇಡಂ.''

"ಶಾಲೆಗೆ ರಜೆ ಹಾಕಿ ಎಲ್ಲಿಗೆ ಹೋಗಿದ್ಯೋ ಅಂತ ಕೇಳಿದ್ರೆ ನನಗೂ ಹೆಂಡ್ತಿ ಬೇಕಂತೀಯ'' ಎಂದು ಮೇಡಂ ರಾಮನ ಕೆನ್ನೆಗೆ ಬಾರಿಸಿದರು.

"ನಿಜವಾಗ್ಲೂ ಹೇಳ್ತೀನಿ ಮೇಡಂ. ನಾನು ನಿನ್ನೆ ನನಗೂ ಹೆಂಡ್ತಿ ಬೇಕು ಎಂಬ ಸಿನಿಮಾಕ್ಕೆ ಹೋಗಿದ್ದೆ'' ಎಂದು ಅಳುತ್ತ ಹೇಳಿದ ರಾಮು.

— ಸಿ. ಸುಧಾಕರ್

"ಏನೂಬೇಡ, ಈಗ ಹೇಗೂ ಓದು ಬರಹ ಕಲಿತಿದ್ದೀಯಲ್ಲ ಅಷ್ಟು ಸಾಕು'' ಎಂದಳು ಶಿವಮ್ಮ.

"ನಿನ್ನ ಅವ್ವ ಒಪ್ಪಿದರೆ ನನ್ನದೇನಡ್ಡಿ ಇಲ್ಲಮ್ಮ'' ಎಂದರು ಶಂಕರಪ್ಪ.

ಅವ್ವನನ್ನು ಒಪ್ಪಿಸುವುದು ಹೇಗೆ? ರಾಜಣ್ಣ ಆಗಲೇ ಎಸ್.ಎಸ್.ಎಲ್.ಸಿ. ಫೇಲಾಗಿ ಗದ್ದೆ, ತೋಟದ ಕೆಲಸ ಮಾಡಿಕೊಂಡಿದ್ದಾನೆ. ರಂಗಣ್ಣ ಇನ್ನು ಒಂದೋ ಎರಡು ವರ್ಷವೋ ಓದಬಹುದು. ಹಾಗಿರುವಾಗ ಹೆಣ್ಣು ಹುಡುಗಿ ನೀನಿನ್ನೆಷ್ಟು ಓದಬೇಕು, ಸಾಕು ಎಂದು ಶಿವಮ್ಮನ ವಾದ.

ಹೆಣ್ಣು ಹುಡುಗಿ ಎಂದು ಒತ್ತಿ ಒತ್ತಿ ಹೇಳುತ್ತಿದ್ದಳು ಶಿವಮ್ಮ.

ಹೆಣ್ಣೇ ಹೆಣ್ಣಿಗೆ ಶತ್ರುವಾಗಿ ಯಾಕೆ ಹೀಗೆ ಕಾಡುತ್ತಾಳೋ ಎಂದೆನಿಸುತ್ತಿತ್ತು ಸುಮತಿಗೆ.

ಹೆಣ್ಣಾಗಿ ಹುಟ್ಟುವುದೋ, ಗಂಡಾಗಿ ಹುಟ್ಟುವುದೋ ಅದನ್ನು ನಿರ್ಧರಿಸುವುದು ನಮ್ಮ ಕೈಯಲ್ಲಿದೆಯೇ? ಈ ಲಿಂಗಭೇದಕ್ಕೆ ಯಾಕಿಷ್ಟೊಂದು ಮಹತ್ವ ಕೊಡುತ್ತಾಳೋ ಅವ್ವ. ಹಾಗೆ ನೋಡಿದರೆ ಅಪ್ಪನೇ ಎಷ್ಟೋ ವಾಸಿ. ಎಷ್ಟೊಂದು ಉದಾರ ಹೃದಯಿ ಅವರು. ಅವ್ವನದಂತೂ ಇಡೀ ಆಯುಸ್ಸು ಮನೆಯ ಕೆಲಸ, ಕೊಟ್ಟಿಗೆಯ ಕೆಲಸದಲ್ಲಿಯೇ ಕಳೆದು ಹೋಯಿತು. ಮಗಳಾದ ತಾನಾದರೂ ವಿದ್ಯಾವತಿಯಾಗಿ ವಿಸ್ತಾರವಾದ ಪ್ರಪಂಚವನ್ನು ಕಾಣಲಿ ಎಂಬ ಹಂಬಲವೇ ಇಲ್ಲವಲ್ಲ ಅವಳಿಗೆ. ಏನು ಮಾಡಿದರೆ ಅವ್ವ ಮುಂದೆ ಓದಲು ನನಗೆ ಅನುಮತಿ ಇತ್ತಾಳು? ಸುಮತಿಗೆ ಹೊಳೆದುದು ಒಂದೇ ಮಾರ್ಗ.

ಗಾಂಧೀ ಮಾರ್ಗ.

ಉಪವಾಸ ಸತ್ಯಾಗ್ರಹ.

ಮೂರುದಿನ ಕೋಣೆಯ ಕದವಿಕ್ಕಿಕೊಂಡು ಕುಳಿತವಳು ಹೊರಗೆ ಬರಲಿಲ್ಲ. ಎರಡನೆಯ ದಿನವೇ ಶಂಕರಪ್ಪ ಮಡದಿಯ ಮೇಲೆ ಎಗರಾಡಿದರು. "ಆ ಮಗು ಓದ್ತೀನಿ ಅಂದರೆ ಏನದು ನಿನ್ನ ಅಡ್ಡಿ. ಈಗ ರಾಜಣ್ಣನ್ನ ನೀನು ಓದಿಸ್ತೀನಿ ಅಂದ್ರೂ ಓದ್ತಾನೆಯೇ ಇಲ್ಲ. ಓದ್ತೀನಿ ಅಂದವರನ್ನು ಓದಿಸುವುದು. ಬೇಡ ಅಂದವರಿಗೆ ಬೇಡ ಅಷ್ಟೆ."

"ಚೆನ್ನಾಗಿದೆ ನಿಮ್ಮ ಮಾತು. ಅವಳಿಗೇನು ಕಡಿಮೆ ವಯಸ್ಸಾಯಿತೇ. ಮೈನೆರೆಯುವ ವಯಸ್ಸಾಯಿತು. ಒಂಟಿ ಹುಡುಗಿಯನ್ನು ಅಷ್ಟು ದೂರ ಕಳುಹಿಸುವುದೇ? ಈಗ ರಾಜಣ್ಣ, ರಂಗಣ್ಣ ಕೂಡ ಜೊತೆಗಿಲ್ಲ. ಗಂಡು ನೋಡಿ ಮದುವೆ ಮಾಡುವುದು ಬೇಡವೇ? ನಾಳೆ ಏನಾದರೂ ಹೆಚ್ಚು ಕಡಿಮೆ ಆದರೆ ಯಾರು ಹೊಣೆ? ಅವಳ ಮಾತು ಕೇಳಿ ಕುಣಿಯಬೇಡಿ ನೀವು."

ಹೆಂಡತಿಯ ಹೇಳುವುದೂ ಸರಿ ಎನ್ನಿಸಿತು ಶಂಕರಪ್ಪ.

ಆದರೆ ಮೂರನೆಯ ದಿನವೂ ಊಟ, ತಿಂಡಿ ಏನೊಂದೂ ಮಾಡದೆ ಕೋಣೆಯ ಕದವಿಕ್ಕಿಕೊಂಡು ಸುಮತಿ ಕುಳಿತಾಗ ಶಿವಮ್ಮನ ಕರುಳೇ ನೊಂದಿತು. "ಯಾಪಾಟಿ ಓದೋ ಹುಚ್ಚು ಈ ಹುಡುಗಿಯದು" ಎಂದು ಗೊಣಗಿಕೊಂಡರು.

ಗಂಡ ಮನೆಗೆ ಬಂದೊಡನೆ "ನೋಡಿ ಚಿಕ್ಕಂದಿನಿಂದ ಅವಳನ್ನು ತಲೆಯ ಮೇಲಿಟ್ಟುಕೊಂಡು ಮೆರೆಸಿದ್ದೀರಿ. ಈಗ ಯಾರ ಮಾತೂ ಕೇಳುವುದಿಲ್ಲ ಅವಳು. ಶಾಲೆಗೆ ಹೋಗುವುದೋ ಬಿಡುವುದೋ ಅವಳ ಇಷ್ಟ. ಮೊದಲು ಹೊರಗಡೆ ಬಂದು ಊಟ ಮಾಡಲು ಹೇಳಿ. ಮೂರು ದಿನದಿಂದ ಅವಳು ಕಾಫಿಯೂ ಕುಡಿಯದೆ ಕುಳಿತಿರುವಾಗ ನಾವು ಊಟ ಮಾಡುವುದಾದರೂ ಹೇಗೆ ಹೇಳಿ?"

"ಬಾ ಮಗು ಶಾಲೆಗೆ ಹೋಗುವೆಯಂತೆ, ಮೊದಲು ಉಣ್ಣು ಬಾ" ಎಂದರು ಶಂಕರಪ್ಪ.

ಸುಮತಿ ಕದ ತೆರೆದು ಹೊರಗಡೆ ಬಂದಳು.

ಅವಳ ಹೈಸ್ಕೂಲಿನ ವಿದ್ಯಾಭ್ಯಾಸ ಪ್ರಾರಂಭವಾಯಿತು. ನಿತ್ಯ ಅವಳನ್ನು ಶಾಲೆಗೆ ಬಿಡಲು, ಹಿಂದಕ್ಕೆ ಕರೆತರಲು ಆಳನ್ನು ಗೊತ್ತು ಮಾಡಿದರು ಶಂಕರಪ್ಪ. ವಿದ್ಯಾಭ್ಯಾಸದಲ್ಲಿ ತನ್ನ ಗಮನವನ್ನೆಲ್ಲ ಕೇಂದ್ರೀಕರಿಸಿದಳು. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಗಮನ ಕೇಂದ್ರೀಕರಿಸಿದಳು. ಶಾಲೆಯಲ್ಲೆಲ್ಲ ಹೆಸರು ಮಾಡಿ ಉಪಾಧ್ಯಾಯರ ಅಚ್ಚುಮೆಚ್ಚಿನ ಶಿಷ್ಯೆ

ಎನಿಸಿದುದಾಯಿತು. ಮೂರು ವರುಷದ ವಿದ್ಯಾಭ್ಯಾಸ ಮೂರುದಿನದ ವಿದ್ಯಾಭ್ಯಾಸದ ಹಾಗೆ ಮುಗಿದೇ ಹೋಯಿತು. ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಸಂತೋಷ ಸಂಭ್ರಮದಿಂದ ಮನೆಗೆ ಬರುತ್ತಿರುವಂತೆ ಆಘಾತವೊಂದು ಕಾದಿತ್ತು.

"ಸುಮತಿ ಬೇಗ ಮುಖತೊಳೆದು ರೆಡಿಯಾಗು. ನಾನು ತಲೆಬಾಚಿ ಹೂ ಮುಡಿಸಿ. ಸೀರೆ ಉಡಿಸುತ್ತೇನೆ'' ಎಂದಳು ಅವ್ವ.

"ಸೀರೆ, ಯಾಕವ್ವ ಸೀರೆ, ಏನು ವಿಶೇಷ ಇಂದು?''

"ಪಕ್ಕದ ಹಳ್ಳಿಯ ಸಾಹುಕಾರರು ಮಗನೊಂದಿಗೆ ಬರುತ್ತಾರಂತೆ ಅದಕ್ಕೆ.''

"ಯಾತಕ್ಕೆ ಬರುತ್ತಿದ್ದಾರೆ?''

"ನಿನ್ನನ್ನು ನೋಡಲು?''

"ನನ್ನನ್ನು ನೋಡಲು?''

"ಅಷ್ಟು ತಿಳಿಯಲಿಲ್ಲವೇ ಹಾಗಾದರೆ, ನಿನ್ನ ಓದೆಲ್ಲ ಪುಸ್ತಕದ ಬದನೇಕಾಯಿ?''

'ರಾಗಸಂಗಮ'

ಲಾಟರಿ ಡ್ರಾ – ೧೩ಲರ ವಿಜೇತರು



ಹೆಚ್. ಬಿ. ಭಾನುಮತಿ

ರತ್ನಗಿರಿ

ಚಿಕ್ಕಮಗಳೂರು.

"ಏನಮ್ಮ ಹಾಗಂದರೆ?''

"ನಿನ್ನನ್ನು ನೋಡಿ ಮದುವೆಯಾಗಲು ಬರುತ್ತಿದ್ದಾರೆ.''

"ಮದುವೆ? ನನಗೆ ಇಷ್ಟು ಬೇಗ ಮದುವೆ ಬೇಡಮ್ಮ.''

"ಬೇಗ ಎಂತಾದ್ದು ಬಂತು, ನಿನ್ನ ವಯಸ್ಸಿಗಾಗಲೇ ನಾನು ರಾಜಣ್ಣನ ತಾಯಿಯಾಗಿದ್ದೆ.''

"ಇರಬಹುದು, ಆದರೆ ನನಗೆ ಇಷ್ಟು ಬೇಗ ಮದುವೆಯಾಗುವ ಮನಸ್ಸೂ ಇಲ್ಲ, ಇಚ್ಛೆಯೂ ಇಲ್ಲ.''

"ಪ್ರತಿಯೊಂದಕ್ಕೂ ನಿನ್ನ ಇಚ್ಛೆ ಅನಿಚ್ಛೆಗಳನ್ನು ಕೇಳುತ್ತ ಕುಳಿತರೆ ಆಗುತ್ತದೆಯೇ? ಯಾವ ಯಾವ ಕಾಲಕ್ಕೆ ಏನೇನು ಮಾಡಬೇಕೋ ಅದು ನಮಗೆ ತಿಳಿದಿದೆ?''

"ಆದರೆ ಅವ್ವ...'' ಎನ್ನುವ ವೇಳೆಗೆ ಅಪ್ಪ ಅಲ್ಲಿಗೆ ಬಂದರು.

"ಬಂದಿರಾ ಸದ್ಯ ನೋಡಿ ನಿಮ್ಮ ಮುದ್ದು ಮಗಳನ್ನು.''

"ಏನು ಸಮಸ್ಯೆ ಈಗ?''

"ಅವಳಿಗೆ ಈಗಲೇ ಮದುವೆ ಬೇಡವಂತೆ.''

"ನೋಡು ಸುಮತಿ, ಎಲ್ಲದಕ್ಕೂ ಹಟ ಹಿಡಿದರೆ ಹೇಗೆ?''

"ಹಾಗಲ್ಲ ಅಪ್ಪ ನನಗೆ ಇಷ್ಟು ಬೇಗ ಮದುವೆ ಬೇಡ ಎಂದೆ ಅಷ್ಟೆ.''

"ಈಗಲೇ ಮದುವೆ ಯಾರು ಮಾಡುತ್ತಿದ್ದಾರೆ?''

"ಈಗ ಗಂಡಿನ ಕಡೆಯವರು ನಿನ್ನನ್ನು ನೋಡಿಕೊಂಡು ಹೋಗಲು ಬರುತ್ತಿದ್ದಾರೆ."

"ಒಂದು ವೇಳೆ ಒಪ್ಪಿದರೆ?"

"ಒಪ್ಪಿದರೆ ನಿನ್ನ ಭಾಗ್ಯದ ಬಾಗಿಲು ತೆರೆಯಿತು ಎಂದು ತಿಳಿದುಕೋ."

"ಅದು ಹೇಗೆ?"

"ಅವರಿಗೆ ಬೇಕಾದಷ್ಟು ಆಸ್ತಿ ಇದೆ, ಕುಳಿತು ಉಂಡರೂ ಕರಗದಷ್ಟು. ನೀನು ಮಹಾರಾಣಿಯ ಹಾಗೆ ಇರಬಹುದು."

"ಅದೆಲ್ಲ ಬೇಡ ಅಪ್ಪ."

"ಒಳ್ಳೆಯ ಕೆಲಸ ನಡೆಯುವಾಗ ಅಶುಭದ ಮಾತನಾಡಬಾರದು."

"...."

"ಬೇಗ ತಯಾರಾಗು. ಬಂದವರ ಮುಂದೆ ನನ್ನ ಮಾನ ತೆಗೆಯಬೇಡ."

"...."

"ನೀನು ಹೈಸ್ಕೂಲು ಓದಬೇಕು ಎಂದೆ, ಓದಿಸಿದೆನೋ ಇಲ್ಲವೋ ಈಗ ನಾನು ಹೇಳಿದ ಹಾಗೆ ನೀನು ಕೇಳು."

"ಆಯಿತು ಅಪ್ಪ" ಎಂದೆ ಅರೆಮನಸ್ಸಿನಿಂದ.

ಮುಖ ತೊಳೆದು ಬಂದೊಡನೆ ಅಮ್ಮ ನನಗೆ ಶೃಂಗಾರ ಮಾಡಲು ಬಾಚಣಿಗೆ ಹಿಡಿದು ಬಂದಳು. ಕೂದಲು ಬಾಚಿ ಜಡೆ ಹೆಣೆದಳು. ಸೀರೆ ಉಡಿಸಿ ಹಣೆಗೆ ತಿಲಕವಿಟ್ಟಳು. ಹೊರಗಡೆ ಅತಿಥಿಗಳು ಬಂದ ಶಬ್ದವಾಯಿತು.

ಬಂದವರನ್ನು ಅಪ್ಪ ಉಪಚರಿಸಿ ಒಳಗೆ ಕರೆತಂದರು. ಅಮ್ಮ ಬಂದವರಿಗಾಗಿ ಕಾಫಿ ತಿಂಡಿ ತಯಾರಿಸಿದಳು. ರಾಜಣ್ಣ, ರಂಗಣ್ಣ ಸರಬರನೆ ಓಡಾಡುತ್ತ ಅಮ್ಮನಿಗೆ ಸಹಾಯ ಮಾಡಿದರು. ಅಪ್ಪ ನನ್ನನ್ನು ಕರೆತಂದು ಬಂದವರೆದುರಿಗೆ ಹಾಸಿದ್ದ ಚಾಪೆಯ ಮೇಲೆ ಕುಳ್ಳಿರಿಸಿದರು.

"ಹುಡುಗಿ ಚೆನ್ನಾಗಿದ್ದಾಳೆ, ಚೆಲುವೆ" ಎಂದರು ಹುಡುಗನ ತಾಯಿ.

"ಶಾಲೆಗೆ ಬೇರೆ ಹೋಗಿದ್ದಾಳಂತೆ" ಎಂದರು ಹುಡುಗನ ತಂದೆ.

"ಹೌದು ಇಂದಷ್ಟೇ ಪರೀಕ್ಷೆ ಬರೆದು ಬಂದಿದ್ದಾಳೆ."

"ಎಷ್ಟನೆಯ ಕ್ಲಾಸಿನವರೆಗೆ ಕಲಿತಿದ್ದಾಳೆ?"

"ಈ ದಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದು ಬಂದಳು."

"ಹೌದೇ?"

"ನಮ್ಮ ಹುಡುಗನೂ ನಾಲ್ಕಾರು ವರ್ಷ ಶಾಲೆಗೆ ಹೋದ. ಆಮೇಲೆ ಬಿಟ್ಟುಬಿಟ್ಟ."

"ಇರಲಿ ಬಿಡಿ ಪರವಾಗಿಲ್ಲ. ಅದೇನು ಮಹಾ ದೊಡ್ಡ ವಿಷಯವಲ್ಲ" ಎಂದರು ಶಂಕರಪ್ಪ.

"ಓದಿ ಏನಾಗಬೇಕಾಗಿದೆ ಹೇಳಿ, ಇರುವ ಆಸ್ತಿ ರೂಢಿಸಿಕೊಂಡರೆ ಸಾಕಾಗಿದೆ."

"ನಿಜ, ನಿಜ."

"ಈ ಹುಡುಗಿ ನೋಡುವ ಶಾಸ್ತ್ರ ಅಂತ ಏನೂ ಬೇಡ. ಶಂಕರಪ್ಪ ನನಗೆ



ಗೆಳತಿಗೆ

ಗೆಳತೀ
ಹೌದು
ಬಾಳೊಂದು
ನಾಟಕ ರಂಗ
ಇಲ್ಲಿ
ನನ್ನ ನಿನ್ನ
ಪಾತ್ರ
ಕ್ಷಣಿಕ
ನೋವೇ
ಅಧಿಕ.

— ನಾರಾಯಣ ರೈ ಕುಕ್ಕುವಳ್ಳಿ

ತಿಳಿಯದವರೇನಲ್ಲ ಅಂದೆ ನನ್ನ ಹೆಂಡತಿಗೆ ಅವಳು ಕೇಳಲಿಲ್ಲ. ಒಂದು ಬಾರಿ ಹುಡುಗಿಯನ್ನು ನೋಡಿಬರೋಣ ಎಂದಳು ಹೊರಟು ಬಂದೆವು.''

"ಒಳ್ಳೆಯದಾಯಿತು ಬಿಡಿ. ಆದರಲ್ಲಿ ತಪ್ಪೇನಿದೆ?''

"ತಪ್ಪೇನಿಲ್ಲ. ಈಗ ನನ್ನ ನಿಮ್ಮ ಮದುವೆಗಳೆಲ್ಲ ಹೆಣ್ಣು ನೋಡಿದ ಶಾಸ್ತ್ರ ಮಾಡಿಯೇ ನೆರವೇರಿತೇ? ನಾವೆಲ್ಲ ಹಾಗೆಯೇ ಮದುವೆಯಾಗಲಿಲ್ಲವೇ, ಸುಖವಾಗಿಲ್ಲವೇ?''

"ಅದೇನೋ ನಿಜ. ಇವರು ಈಗಿನ ಕಾಲದ ಹುಡುಗರು, ಸ್ವಲ್ಪ ಬೇರೆಯದೇ ಆದ ಮನೋಭಾವ.''

"ಕಾಲ ಏನು ಮಾಡುತ್ತದೆ ಹೇಳಿ, ಹಿಂದೆ ಹೇಗಿತ್ತೋ ಇಂದೂ ಕಾಲ ಹಾಗೆಯೇ ಇದೆ. ಬದಲಾಗಿರುವವರು ನಾವು.''

"ಅದೇನೋ ನಿಜ. ಅಂದಹಾಗೆ ನಿಮ್ಮ ಮಗನ ಹೆಸರು ಏನು ಹೇಳಿದಿರಿ?''

"ನಂಜಪ್ಪ.''

"ಇವರೇ ದೊಡ್ಡ ಮಗ ಅಲ್ಲವೇ?''

"ಹೌದು. ಎರಡನೆಯವನು ವೆಂಕಣ್ಣ.''

"ಮಗಳೂ ಇದ್ದಾಳಲ್ಲವೇ?''

"ಹಿರಿಯವಳೇ ಮಗಳು ರುಕ್ಮಿಣಿ. ಅವಳ ಮದುವೆಯಾಗಿ ಎರಡು ವರ್ಷವಾಯಿತು. ಈಗ ಏಳು ತಿಂಗಳ ಚೊಚ್ಚಲ ಬಸುರಿ.''

"ಓಹೋ, ಸಂತೋಷ.''

"ಈಗ ವಿಷಯಕ್ಕೆ ಬರೋಣ. ನಮಗೇನೋ ನಿಮ್ಮ ಮಗಳು ಹಿಡಿಸಿದ್ದಾಳೆ. ನಿಮ್ಮ ಸಂಬಂಧ ಬೆಳೆಸಲು ನಾವು ಸಿದ್ಧ. ಜೋಯಿಸರನ್ನು ಕರೆದು ಮುಹೂರ್ತ ಕಟ್ಟಿಸಿ, ಬಂದು ತಿಳಿಸಿ'' ಎಂದರು ಹಿರಿಯಣ್ಣ.

"ಹಾಗೇ ಆಗಲಿ. ತುಂಬ ಸಂತೋಷವಾಯಿತು ನಿಮ್ಮ ಮಾತು ಕೇಳಿ. ದೊಡ್ಡ ಮನಸ್ಸು ಮಾಡಿ ನಮ್ಮ ಕನ್ಯಾಸೆರೆ ಬಿಡಿಸುತ್ತಿದ್ದೀರಿ.''

ಶಿವಮ್ಮ ಬಂದವರಿಗೆ ಕುಂಕುಮ ತಾಂಬೂಲ ಕೊಟ್ಟಳು. "ಬಂದವರಿಗೆ ನಮಸ್ಕಾರ ಮಾಡು ಸುಮತಿ'' ಎಂದಳು. ಸುಮತಿ ತಾಯಿಯನ್ನು ದುರುಗುಟ್ಟಿಕೊಂಡು ನೋಡಿದಳು.

ಯಾರ ಕಾಲಿಗೂ ಬೀಳುವ ಇಚ್ಚೆ ಅವಳಿಗೆ ಇರಲಿಲ್ಲ.

"ಅಪ್ಪ ಹೇಳಿದ್ದು ಕೇಳಿಸಲಿಲ್ಲವಾ ಮಗು?'' ಎಂದು ಶಂಕರಪ್ಪ ಗದರಿಕೊಂಡಾಗ ವಿದಿಯಿಲ್ಲದೆ ಬಂದವರಿಗೆ ಅಡ್ಡಬಿದ್ದಳು ಸುಮತಿ.

ಬಂದವರನ್ನು ಕಳುಹಿಸಿ ಒಳಗಡೆ ಬಂದರು ಶಂಕರಪ್ಪ, ಶಿವಮ್ಮ. ಅವರಂದು ಬಹಳ ಸಂತೋಷಭರಿತರಾಗಿದ್ದರು. ಸ್ವಲ್ಪವೂ ಶ್ರಮವಿಲ್ಲದೆ ನಿರಾಯಾಸವಾಗಿ ಮಗಳಿಗೆ ವರ ದೊರೆತನಲ್ಲ. ಅದು ತಮ್ಮ ಪೂರ್ವಜನ್ಮದ ಪುಣ್ಯವೇ ಸರಿ ಎಂದು ಅವರು ಭಾವಿಸಿದರು.

ಒಳಗೆ ಬಂದ ಶಂಕರಪ್ಪ ನುಡಿದರು "ಏನು ಮಗು, ನಿನ್ನ ವಿದ್ಯಾಭ್ಯಾಸ ಪೂರೈಸುತ್ತಿದ್ದ ಹಾಗೆ ಒಳ್ಳೆಯ ಕಡೆ ಸಂಬಂಧ ದೊರೆತಿರುವುದು ನಿನ್ನ ಅದೃಷ್ಟವೆಂದೇ ತಿಳಿ.''

"ಅಪ್ಪ ನನಗೀಗಲೇ ಮದುವೆ ಬೇಕಿಲ್ಲ.''

"ಯಾಕೆ, ಯಾಕೆ ಹಾಗೆ ಹೇಳುತ್ತೀ?''

"ನಾನಿನ್ನು ಕೆಲವು ವರ್ಷ ಹೀಗೆಯೇ ಇರಬೇಕೆಂದಿದ್ದೇನೆ.''

"ಈಗ ಹಾಗೆ ಇದ್ದುಬಿಟ್ಟರೆ ವಯಸ್ಸಾದಮೇಲೆ ನಿನಗೆ ಗಂಡು ಯಾರು ಹುಡುಕುತ್ತಾರೆ ಸುಮತಿ?''

"ಅಪ್ಪ ಅದೇನೋ ನನಗೆ ಗೊತ್ತಿಲ್ಲ. ನನಗೆ ಈಗಲೇ ಬೇಡ. ಕೆಲವು ವರ್ಷಗಳಾದ ಮೇಲೆ ಮದುವೆಯಾದರೂ ನಾನು ಯಾರಾದರೊಬ್ಬ ಪಟ್ಟಣದ ಹುಡುಗನನ್ನು ಮದುವೆಯಾಗುತ್ತೇನೆ.''

"ಯಾಕೆ ಈಗ ಬಂದಿದ್ದ ಹುಡುಗ ಏನಾಗಿದ್ದಾನೆ? ನೋಡಲು ಅಂದವಾಗಿದ್ದಾನೆ. ಅಪ್ಪ, ಅಮ್ಮ ಇದ್ದಾರೆ. ಅಕ್ಷರ ಜ್ಞಾನವಿದೆ. ಕುಳಿತು ತಿನ್ನುವಷ್ಟು ಆಸ್ತಿ ಇದೆ. ಇನ್ನೇನಾಗಬೇಕು ನಿನಗೆ?''

"ನನಗೆ ಆಸ್ತಿ ಮುಖ್ಯವಲ್ಲಪ್ಪ ಅವಿದ್ಯಾವಂತ ಹುಡುಗನನ್ನು ನಾನು ಮದುವೆಯಾಗುವುದಿಲ್ಲ.''

"ಆಗಲೇ ಅಷ್ಟು ಜಂಬ ಬಂತಾ ನಿನಗೆ?'' ಶಿವಮ್ಮ ಟೀಕಿಸಿದಳು.

"ಜಂಬ ಅಲ್ಲಮ್ಮ, ಎಸ್.ಎಸ್.ಎಲ್.ಸಿ. ಕೂಡ ಪಾಸಾಗಿರದ ಹುಡುಗನನ್ನು ಮದುವೆಯಾಗಲು ಇಚ್ಛಿಸುವುದಿಲ್ಲ ನಾನು.''

"ನಾಲ್ಕು ಅಕ್ಷರ ಕಲಿತೊಡನೆ, ನನ್ನ ಸಮಾನರಿಲ್ಲ ಎಂದು ತಲೆತಿರುಗಿ ಹೋಗಿದೆ ನಿನಗೆ.''

"ಹಾಗೇನಿಲ್ಲಪ್ಪ.''

"ಹಾಗೂ ಇಲ್ಲ, ಹೀಗೂ ಅಲ್ಲ ನನಗೆ ತಿಳಿಯದೇ. ಮೊದಲೇ ಹೇಳಿದೆ. ಅವಳನ್ನು ಶಾಲೆಗೆ ಸೇರಿಸಬೇಡಿ ಎಂದು. ಕೇಳಿದಿರಾ ನೀವು? ಒಬ್ಬಳೇ ಮಗಳು ಎಂದು ತಲೆಯ ಮೇಲಿಟ್ಟುಕೊಂಡು ಮೆರೆದಿರಿ. ಈಗ ಅನುಭವಿಸಿ.''

"ಏನಿಲ್ಲ, ನನ್ನ ಮಗಳು ನಾನು ಹೇಳಿದ ಹಾಗೆ ಕೇಳುತ್ತಾಳೆ.''

"ಇಲ್ಲಪ್ಪ, ಕಂಡಿತ ನಾನು ಈ ಮದುವೆ ಆಗುವುದಿಲ್ಲ.''

"ನೋಡಿದಿರಾ ನಿಮ್ಮ ಮಗಳು ಹೇಗೆ ತಯಾರಾಗಿದ್ದಾಳೆ?''

"ಸುಮತಿ ನನಗೆ ಕೋಪ ತರಿಸಬೇಡ.''

"ಇದೊಂದು ವಿಷಯದಲ್ಲಿ ನನ್ನನ್ನು ಬಲವಂತ ಮಾಡಬೇಡಪ್ಪ."

"ಅವಳ ಮಾತಿಗೆ ಏನೂ ಬೆಲೆ ಕೊಡಬೇಡಿ. ಕುರಿ ಕೇಳಿ ಸಾಂಬಾರು ಅರೆಯುತ್ತಾರೆಯೇ ಯಾರಾದರೂ?"

ಅಮ್ಮನ ಮಾತುಗಳು ಕೇಳಿ ಕೋಣೆಗೆ ಹೋಗಿ ಕುಳಿತೆ ನಾನು. ಅಪ್ಪ ಕೂಡ ಏನೊಂದೂ ಮಾತನಾಡದೆ ಹೊರಗಡೆ ಹೋದರು.

ಮನೆಯಲ್ಲಿ ಮದುವೆಯ ತಯಾರಿ ಪ್ರಾರಂಭವಾಯಿತು. ರಾಜಣ್ಣ, ರಂಗಣ್ಣನಿಗೆ ವಿಪರೀತ ಓಡಾಟ. ನನಗೆ ಮಾತ್ರ ಮನದಲ್ಲೇ ಸಂಕಟ. ಯಾರ ಬಳಿ ಹೇಳಿಕೊಳ್ಳುವುದು ಸಂಕಟವನ್ನು? ಮನಸ್ಸು ಖಿನ್ನವಾಗಿತ್ತು. ಆದರೆ ನನ್ನ ರೋದನ ಅರಣ್ಯರೋದನವಾಯಿತು. ರಾಜಣ್ಣನ ಬಳಿ ದೂರಿದೆ. "ರಾಜಣ್ಣ ನನಗೆ ಈ ಮದುವೆ ಸ್ವಲ್ಪವೂ ಇಷ್ಟವಿಲ್ಲ."

"ಯಾಕೆ ಸುಮತಿ?"

"ಇಷ್ಟು ಬೇಗ ಯಾರು ಮದುವೆ ಯಾಗುತ್ತಾರೆ ಹೇಳು."

"ಇವತ್ತಲ್ಲ ನಾಳೆ ಮದುವೆಯಾಗಲೇ ಬೇಕು."



ಚಾರಿತ್ರ್ಯವಿಲ್ಲದವರು ತಾವಾಗಿಯೇ ನಾಶ ಹೊಂದುತ್ತಾರೆ. ಇತರರನ್ನೂ ನಾಶ ಮಾಡುತ್ತಾರೆ.
—ಸ್ವಾಮೀ ವಿವೇಕಾನಂದ

ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬನ ಕರ್ತವ್ಯ. ಆದರೆ ಅವನಿಗೆ ಅದನ್ನು ನಿರೀಕ್ಷಿಸುವ ಹಕ್ಕಿಲ್ಲ. —ರೋಸಿಯೋ

ಸಂಗ್ರಹ :
ಮೊಗರು ರವಿಕಲಾ ಟಿ. ಅಳ್ವ

"ಅದು ಸರಿ."

"ಒಂದೆರಡು ವರ್ಷ ಹಿಂಚು, ಮುಂಚು ಮದುವೆಯಾದರೇನಾಯ್ತೀಗ?"

"ಹಾಗಲ್ಲ."

"ಮತ್ತೇನು?"

"ನನಗೆ ಹಳ್ಳಿ ಹುಡುಗ ಇಷ್ಟವಿಲ್ಲ."

"ಸ್ವಲ್ಪ ಓದಿದೊಡನೆ ಪಟ್ಟಣದ ಮೋಹ ಎಳೆಯುತ್ತಿದೆಯಾ ನಿನ್ನನ್ನು?"

"ನೀನು ಹೇಗಾದರೂ ತಿಳಿದುಕೋ."

"ಪಟ್ಟಣದ ಜೀವನ ಚೆನ್ನಾಗಿರುವುದಿಲ್ಲ ಸುಮತಿ. ಶಬ್ದ ಮಾಲಿನ್ಯ. ವಾಯು ಮಾಲಿನ್ಯ, ಏರಿದ ಬೆಲೆ ತೆತ್ತು ಸಾಮಾನು ಕೊಳ್ಳಬೇಕು, ಎಲ್ಲೆಲ್ಲೂ ಗದ್ದಲ."

"ಎಲ್ಲಾ ಬಿಟ್ಟು ನಿನ್ನ ಮುಂದೆ ಹೇಳಿದೆನಾ ನಾನು?"

"ಹಳ್ಳಿಯ ಜೀವನವೇ ಚೆನ್ನ."

"ಸರಿ ಬಿಡು."

"ಇನ್ನೇನು ನಿನ್ನ ಅಸಮಾಧಾನ?"

"ಹುಡುಗ ವಿದ್ಯಾವಂತನಲ್ಲ."

"ವಿದ್ಯಾವಂತನಲ್ಲದೇ ಹೋದರೆ ಏನಾಯ್ತು? ಅಕ್ಷರ ಜ್ಞಾನ ಇದೆಯಲ್ಲ ಅಷ್ಟು ಸಾಕು ವ್ಯವಹಾರ ಮಾಡಲು."

"ಎಸ್.ಎಸ್.ಎಲ್.ಸಿ. ಕೂಡ ಮಾಡದೆ ಇರುವ ಹುಡುಗನನ್ನು ಹೇಗೆ ಮದುವೆಯಾಗಲಿ ನಾನು?"

"ನಾನು ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸು ಮಾಡಿಲ್ಲ. ಹಾಗೆಂದು ಯಾವ ಹುಡುಗಿಯೂ ನನ್ನನ್ನು ಮದುವೆಯಾಗುವುದಿಲ್ಲವೇ?"

"ಹಾಗಲ್ಲ ನಾನು ಹೇಳಿದ್ದು."

"ಹಾಗೂ ಇಲ್ಲ, ಹೀಗೂ ಅಲ್ಲ. ಅಪ್ಪ ಅವ್ವ ಸಂಭ್ರಮದಿಂದ ಮದುವೆಯ ಕೆಲಸಕಾರ್ಯಗಳಿಗೆ ಓಡಾಡುತ್ತಿದ್ದಾರೆ. ಇಲ್ಲ ಸಲ್ಲದ ವಿಚಾರಗಳನ್ನು ತಲೆಯಿಂದ ತೆಗೆದು ಹಾಕಿ ಹಾಯಾಗಿರು" ಎಂದ ರಾಜಣ್ಣ.

ರಾಜಣ್ಣನ ಮುಂದೆ ಹೇಳಿ ಪ್ರಯೋಜನವೇನೂ ಆಗಲಿಲ್ಲ ಎಂದು ಹೇಳಿ ರಂಗಣ್ಣನಿಗೆ ದುಂಬಾಲು ಬಿದ್ದೆ. "ರಂಗಣ್ಣ ಹೇಗಾದರೂ ಮಾಡಿ ಈ ಮದುವೆ ನಿಲ್ಲಿಸೋ."

"ಯಾಕೆ?" ಎಂದ ಅವನು ಆಶ್ಚರ್ಯದಿಂದ.

"ನಾನು ಇನ್ನೂ ಕೆಲವು ವರ್ಷ ನಿಮ್ಮಗಳ ಜೊತೆಯೇ ಇರಬೇಕು."

"ಅದಕ್ಕೇಕೆ ಬೇಸರ ಮಾಡಿಕೊಳ್ಳುತ್ತೀ. ಪಕ್ಕದ ಹಳ್ಳಿಯೇನು ಬಲು ದೂರವೇ? ಬೇಕೆನಿಸಿದಾಗ ಹೋಗಿ ಬರಬಹುದು."

"ದೂರ ಸಮೀಪದ ಪ್ರಶ್ನೆಯಲ್ಲ. ಹುಡುಗ ನನಗೆ ಹಿಡಿಸಿಲ್ಲ."

"ಅದನ್ನು ಅಪ್ಪ ಅಮ್ಮನ ಮುಂದೆ ಹೇಳು, ನನ್ನ ಮುಂದೆ ಹೇಳಿ ಏನು ಪ್ರಯೋಜನ?"

"ಅವರ ಮುಂದೆ ಹೇಳಿದ್ದಾಯ್ತು."

"ಏನಂದರು?"

"ಎಲ್ಲ ಚೆನ್ನಾಗಿದೆ ನೀನು ಮದುವೆಯಾಗಿಯೇ ತೀರಬೇಕು ಎಂದರು."

"ಅಂದರೆ ನಿನ್ನ ಮದುವೆ ಬಲವಂತದ ಮಾಘ ಸ್ನಾನವೇ?"

"ಹೌದು."

"ನಾನು ಮಾತನಾಡುತ್ತೇನೆ ಸುಮ್ಮನಿರು, ಅವ್ವನ ಬಳಿ" ಎಂದ.

ರಂಗಣ್ಣನ ಮಾತುಗಳನ್ನು ಕೇಳಿದ ಅವ್ವ ಕೆರಳಿದಳು. "ಅವಳಿಗೇನೋ ತಲೆ ಕೆಟ್ಟಿದೆ ಎಂದರೆ ನಿನಗೂ ತಲೆ ಸರಿ ಇಲ್ಲವೇನೋ. ನಾಲ್ಕಕ್ಷರ ಕಲಿತೆ ಅಂತ ನನ್ನ ಸಮಾನರಿಲ್ಲ ಅಂತ ಮೆರೀತಿದ್ದಾಳೆ ಅವಳು. ನೀನು ಅವಳ ತಾಳಕ್ಕೆ ತಕ್ಕ ಹಾಗೆ ಕುಣಿಯಬೇಡ, ಅವಳಿಗೆ ಬುದ್ಧಿ ಹೇಳು."

ರಂಗಣ್ಣ ತಂಗಿಯ ಬಳಿ ನುಡಿದ. "ಸುಮತಿ ನಿನಗೆ ನೋಡಿರುವ ವರನ ಕಡೆಯವರು ಒಳ್ಳೆಯ ಅನುಕೂಲಸ್ಥರು. ಚೆನ್ನಾಗಿ ಸಂಪಾದನೆ ಇದೆ. ಆಸ್ತಿ ಜೋರಾಗಿದೆ. ಆ ಹುಡುಗನನ್ನೇ ಮದುವೆಯಾಗಿ ಸುಖವಾಗಿರು."

ತನ್ನ ಮಾತಿಗೆ ಯಾರೂ ಓಗೊಡರು ಎಂಬುದು ಅರಿವಿಗೆ ಬಂದೊಡನೆ ಮೌನದ ಮೊರೆ ಹೊಕ್ಕಿದುದಾಯಿತು.

ಹಳ್ಳಿ ಮನೆಯಲ್ಲಿಯೇ ಮದುವೆ ನಡೆಯುವುದೆಂದು ತೀರ್ಮಾನವಾಯಿತು. ಅಪ್ಪ ಜೋಯಿಸರ ಬಳಿ ಮುಹೂರ್ತ ಕಟ್ಟಿಸಿಕೊಂಡು ಬಂದರು. ಹೊಸಸೀರೆ ಒಡವೆಗಳನ್ನು ಖರೀದಿಸಿ ತಂದರು. ಮನೆಯ ಮುಂದೆ ಹಸಿರುಚಪ್ಪರ, ತಳಿರುತೋರಣ. ಅಡುಗೆಯವರು ಬಂದರು, ವಾದ್ಯದವರು ಬಂದರು. ಯಾವುದರಲ್ಲೂ ತನಗೆ ಆಸಕ್ತಿ ಇರಲಿಲ್ಲ. ಆಸಕ್ತಿ ಇರಲಿ ಬಿಡಲಿ ಆಗುವ ಕಾರ್ಯ ನಿಲ್ಲುತ್ತದೆಯೇ. ನಿಶ್ಚಿತ ಲಗ್ನದಲ್ಲಿ ನಂಜಪ್ಪನೊಡನೆ ತನ್ನ ಮದುವೆ ನಡೆದೇ ಹೋಯಿತು.

ಮದುವೆ ಮುಗಿದು ಮೂರು ತಿಂಗಳನಂತರ ಪತಿಗೃಹಕ್ಕೆ ತೆರಳಬೇಕೆಂಬ ಪದ್ಧತಿ ಇದ್ದುದರಿಂದ ಮದುವೆಯ ಕಲಾಪ ಮುಗಿದೊಡನೆ ಬಂದಿದ್ದ ನೆಂಟರಿಷ್ಟರು ಚೆದುರಿದರು. ಬೀಗರು ಹಿಂದಿರುಗಿದರು.



"ಯಾಕೋ, ಸಪ್ಪಗಿದ್ದೀಯಾ ಹುಶಾರಿಲ್ವೇನೋ?"

"ನಾನು ಹುಶಾರಾಗಿದ್ದೀನಿ ಕಣೋ, ಆದರೆ ನಮ್ಮ ಲೆಕ್ಕದ ಮೇಷ್ಟ್ರಿಗೆ ನಾಲ್ಕೈದು ದಿವಸಗಳಿಂದ ಸೀರಿಯಸ್ ಆಗಿತ್ತು. ಈ ದಿನ ಅಪ್ರು..."

"ಅವರಿಗೇನಾದ್ರು ಆಯ್ತಾ?"

"ಇಲ್ಲ ಕಣೋ, ಹುಶಾರಾಗಿ ಈ ದಿವಸ ಕ್ಲಾಸಿಗೆ ಬಂದ್ಬಿಟ್ಟಿದ್ದಾರೆ."

— ಎಸ್. ಎಸ್. ರಘುಪತಿ

ತಮ್ಮ ಕನ್ಯಾಸೆರೆ ಹರಿಯಿತೆಂದು ಅಪ್ಪ ಅವ್ವನಿಗೆ ಎಲ್ಲಿಲ್ಲದ ಸಂತಸ. ತಮ್ಮನ್ನು ಕನ್ಯಾಸೆರೆಯಿಂದ ಬಿಡಿಸಿದ ಬೀಗರಲ್ಲಿ ಅಪಾರ ಗೌರವ. ಅವರನ್ನೆಷ್ಟು ಆದರಿಸಿದರೂ, ಉಪಚರಿಸಿದರೂ ಸಾಲದು ಇವರಿಗೆ. ಅವರು ಹೊರಟಾಗ ಅವರಿಗೆ ಭಾರಿ ಉಡುಗೊರೆಯಿತ್ತು ನಮಸ್ಕರಿಸಿದರು ಅಡ್ಡಬಿದ್ದು. ಆದರೆ ತನ್ನ ಮನ ಜೋರಾಗಿ ರೋದಿಸುತ್ತಿತ್ತು.

ಇಷ್ಟು ಬೇಗ ತನಗೆ ಮದುವೆಯ ಬಂಧನದ ಅಗತ್ಯವಿತ್ತೇ? ಇನ್ನು ಮೂರು ತಿಂಗಳಿಗೆ ತನಗೆ ಈ ಹಳ್ಳಿಯಿಂದ ಪಕ್ಕದ ಹಳ್ಳಿಗೆ ರವಾನೆ. ಬದುಕಿನಲ್ಲಿ ಅಷ್ಟೇ ವ್ಯತ್ಯಾಸ. ಅಲ್ಲಿಗೆ ಹೋದಮೇಲೆ ಆ ಹಳ್ಳಿಮನೆಯಲ್ಲಿ ತನಗೆ ಭವಿಷ್ಯವೇನಿದೆ?

ಪರೀಕ್ಷೆಯ ಫಲಿತಾಂಶ ಬಂತು. ಇಡೀ ಶಾಲೆಗೆ ಮೊದಲಿಗಳಾಗಿ ಅತೀ ಹೆಚ್ಚಿನ ಅಂಕಗಳನ್ನು ಪಡೆದು ಪಾಸಾಗಿದ್ದೆ. ಆದರಿಂದ ತನ್ನ ಮನಸ್ಸಿಗೆ ಹಿರಿ ಹಿಗ್ಗು ಎನಿಸಿತು. ಆದರೆ ಅದರಿಂದೇನು ಪ್ರಯೋಜನ? ಪ್ರತಿಭೆ ಇದ್ದೂ ಬೆನ್ನು ತಟ್ಟಿ ಪ್ರೋತ್ಸಾಹಿಸುವವರ್ಯಾರಿಲ್ಲ ಎಂಬಂತಾಗಿತ್ತು ಮನಸ್ಥಿತಿ. ಬೆಳೆಯುವ ಪೈರನ್ನು ಮೊಳಕೆಯಲ್ಲಿಯೇ ಚಿವುಟಿದಂತಾಗಿತ್ತು ಪರಿಸ್ಥಿತಿ. ಬೇಕಾದ ವಿದ್ಯಾಭ್ಯಾಸ ಮುಂದುವರಿಸುವಂತಿಲ್ಲ, ಬೇಡದ ಮದುವೆ ಆಗಿ ಹೋಗಿದೆ.

ಮಾಡುವುದೇನು? ಮನುಷ್ಯ ಪರಿಸ್ಥಿತಿಯ ಶಿಶು. ಮನುಷ್ಯನ ಜೀವನ ಗಾಳಿಗೊಡ್ಡಿದ ಸೊಡರು ಎಂಬುದು ಆ ಎಳೆ ವಯಸ್ಸಿನಲ್ಲಿಯೇ ಅರ್ಥವಾಯಿತು. ಶಾಲೆಗೆ ಹೋಗಿ ಬರುತ್ತಿದ್ದಾಗ ಇದ್ದ ಚುರುಕುತನ ಮಾಯವಾಗಿ ಒಂದು ರೀತಿಯ ಮಂಕು ಆವರಿಸಿಕೊಂಡಿತು ತನು, ಮನವನ್ನು. ಮೊದಲಿನ ಹಾಗೆ ಅಪ್ಪನೊಂದಿಗೆ ಪ್ರತಿಯೊಂದಕ್ಕೂ ವಾಗ್ವಾದ ಹೂಡದೆ, ಪ್ರತಿಭಟಿಸದೆ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನ ನಡೆಸಿದೆ. ದಿನದ ಬಹುತೇಕ ಕಾಲ ಮೌನವೇ ಪ್ರಿಯಸ್ನೇಹಿತ. ಯಾರಾದರೂ ಮಾತನಾಡಿಸಿದರೆ ಹೌದು, ಇಲ್ಲ ಅಷ್ಟೇ. ಬಾಕಿಯಂತೆ ಮೌನ.

ಆ ದಿನ ರಾತ್ರಿ ಕೋಣೆಯೊಳಗೆ ಮಲಗಿದ್ದಾಗ ಅಪ್ಪ ಅವ್ವ ಹಜಾರದಲ್ಲಿ ಕುಳಿತು ಮಾತನಾಡುತ್ತಿದ್ದರು.

"ನೋಡಿದೆಯಾ ಶಿವಮ್ಮ ಮದುವೆಯಾದ ಮೇಲೆ ಎಷ್ಟು ಬದಲಾಗಿದ್ದಾಳೆ ಸುಮತಿ."

"ಹೌದೌದು ನಾನೂ ನಿಮಗೆ ಅದನ್ನೇ ಹೇಳಬೇಕೆಂದಿದ್ದೆ. ಅರಿಸಿನದ ನೀರು ಬಿದ್ದ ಮೇಲೆ ಅವಳಿಗೆ ವಿಶೇಷ ಕಳೆ ಬಂದಿದೆ. ಜೊತೆಗೆ ಗಂಭೀರ ಕೂಡ."

"ಮೊದಲಿನ ಹಾಗೆ ಈಗವಳು ಮಾತುಮಾತಿಗೆ ಚರ್ಚೆ ಮಾಡುವುದು ವಾಗ್ವಾದ ಹೂಡುವುದು ಬಿಟ್ಟಿದ್ದಾಳೆ."

"ನೀನೂ ಅಷ್ಟೇ ಎಷ್ಟು ಎಗರಾಡುತ್ತಿದ್ದೆ ಮಗುವಿನ ಮೇಲೆ. ಈಗ ಅವಳಾಗೇ ದಾರಿಗೆ ಬಂದಳೋ ಇಲ್ಲವೋ."

"ನಾನು ಮಾಡಿದುದೆಲ್ಲ ಒಳ್ಳೆಯದಕ್ಕೇ ಅಲ್ಲದೆ. ಕೆಟ್ಟದ್ದಕ್ಕೆ ಮಾಡುತ್ತೇನೆಯೇ ನಾನು."

"ಅದು ನಿಜ ಅನ್ನು."

"ಅವಳೇನು ನಾನು ಹಡೆದ ಮಗಳಲ್ಲವೇ, ನನ್ನ ಸವತಿಯ ಮಗಳೇ?"

"ಅದಕ್ಕೇಕಿಷ್ಟು ಮುನಿಸಿಕೊಳ್ಳುತ್ತೀ ಶಿವಮ್ಮ."

"ಅಲ್ಲ ನೀವು ಆಡುವ ಮಾತಿಗೆ ಹೇಳಿದೆ ಅಷ್ಟೇ."

"ಅದೆಲ್ಲ ಸರಿ, ಸುಮತಿಯ ಮದುವೆಯಾಗಿ ಮೂರು ತಿಂಗಳು ಕಳೆಯಿತಲ್ಲ, ಅವಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿ ಬಿಡುವುದು ಬೇಡವೇ?"

"ಕರೆದುಕೊಂಡು ಹೋಗಬೇಕು. ಅವರಿಂದೇನೂ ಸುದ್ದಿ ಸಮಾಚಾರ ಬಂದಿಲ್ಲವಲ್ಲ."

"ಅದಕ್ಕೆಲ್ಲ ಕಾಯುತ್ತ ಕುಳಿತರೆ ಆಗುತ್ತದೆಯೇ, ಮದುವೆಯಾಗಿ ಮೂರು ತಿಂಗಳಾದರೂ ಗಂಡ ಹೆಂಡತಿ ಜೊತೆಗಿರಬಾರದೆಂದರೆ ಹೇಗೆ?"

"ಅದೂ ಸರಿ ಅನ್ನಿ."

"ಅದಕ್ಕೇ ಸುಮತಿ ಮಂಕಾಗಿದ್ದಾಳೇನೋ."

"ಇರಬಹುದು."

"ಯಾವುದಕ್ಕೂ ನಾಳೆ ಜೋಯಿಸರ ಬಳಿ ಹೋಗಿ ಒಳ್ಳೆಯ ದಿನ ವಿಚಾರಿಸಿಕೊಂಡು ಬರುತ್ತೇನೆ. ನೀನು ಮಗಳನ್ನೂ ಹೊರಡಿಸಿ ನೀನೂ ಹೊರಡಲು ತಯಾರಾಗು."

ಶಿವಮ್ಮ ಮರುದಿನದಿಂದ ವಿಶೇಷ ತಿಂಡಿ ತೀರ್ಥ ತಯಾರಿಸತೊಡಗಿದಳು. ಮಗಳೊಂದಿಗೆ ಗಂಡನ ಮನೆಗೆ ಸಾಗಿಸಬೇಕಾಗಿದ್ದ ಸಾಮಾನು ಸರಂಜಾಮುಗಳನ್ನು ಜೋಡಿಸಿಟ್ಟಳು.



ಶಿವಮ್ಮ, ಶಂಕರಪ್ಪ ಮಗಳನ್ನು ಕರೆತಂದು ಪತಿಗೃಹದಲ್ಲಿ ಬಿಟ್ಟರು. ಬೀಗಿತ್ತಿ ಕಣ್ಣರಳಿಸಿದರು. ಬೀಗರು 'ಬನ್ನಿ, ಬನ್ನಿ' ಎಂದು ಸ್ವಾಗತಿಸಿದರು.

"ಎಲ್ಲರೂ ಆರೋಗ್ಯವಷ್ಟೆ?'' ವಿಚಾರಿಸಿದರು.

"ದೇವರ ದಯೆಯಿಂದ ಎಲ್ಲ ಚೆನ್ನಾಗಿದ್ದೀವಿ ಸ್ವಾಮಿ.''

ಬೀಗಿತ್ತಿ ಬೆಲ್ಲದ ಪಾನಕ ಮಾಡಿ ಎಲ್ಲರಿಗೂ ಹಂಚಿದರು.

"ಮದುವೆಯಾಗಿ ಮೂರು ತಿಂಗಳಾಯಿತು. ನೀವು ಅತ್ತ ಬರಲಿಲ್ಲ, ಸುದ್ದಿ ಸಮಾಚಾರವೇನೂ ತಿಳಿಯಲಿಲ್ಲ. ಅದಕ್ಕೆಂದೇ ಜೋಯಿಸರ ಬಳಿ ದಿನ ನೋಡಿಸಿ, ಈ ದಿನ ಚೆನ್ನಾಗಿದೆ ಎಂದು ತಿಳಿಯಿತು, ಮಗಳನ್ನು ಕರೆದುಕೊಂಡು ಬಂದೆವು.''

"ಒಳ್ಳೆಯದಾಯಿತು. ನಾವೇ ಬಂದು ಕರೆಯಬೇಕೆಂದಿದ್ದೆವು ಸ್ವಲ್ಪ ತಡವಾಯಿತು ನೋಡಿ. ಮೂರು ತಿಂಗಳಿಂದ ಮನೆಯಲ್ಲಿ ಸ್ವಲ್ಪ ಗಲಾಟೆ. ಮಗಳಿಗೆ ಹೆರಿಗೆಯಾಯಿತು ಬಾಣಂತನವಾಯಿತು. ಮಗಳನ್ನು ಕಳಿಸಿ ಬರಲು ಮಗನನ್ನು ಕಳುಹಿಸಿದ್ದೇನೆ. ಅವನು ಬಂದೊಡನೆ ಬಂದು ಕರೆಯೋಣ ಎಂದಿದ್ದೆವು.''

"ಅಂದರೆ ಅಳಿಯಂದಿರು ಇಲ್ಲವೇ?''

"ಇಲ್ಲ.''

"ಎಂದು ಬರುತ್ತಾರೆ?''

"ಇನ್ನೂ ಎಂಟು ಹತ್ತು ದಿನಗಳಾಗಬಹುದು. ಆ ಎಳೆಯ ಮಗು ಅವನಿ ಅಂಟಿಕೊಂಡು ಬಿಟ್ಟಿದೆ. ಹಟ ತೆಗೆದ ಎಂದು ಹೇಳಿದರೆ ನಿಲ್ಲಿಸುವುದೇ ಇಲ್ಲ. ನನ್ನ ಮಗ ತೊಡೆಯ ಮೇಲೇ ಅವನು ಸುಮ್ಮನಾಗುವುದು. ಒಂದೆರಡು ವಾರ ಇದ್ದು ಸ್ವಲ್ಪ ಸುಧಾರಿ ಬಾ ಎಂದಿದ್ದೇನೆ.''

"ಹಾಗಿದ್ದರೆ ನಾವು ಮಗಳನ್ನು ಕರೆದುಕೊಂಡು ಹೋಗಿ ಮತ್ತೆ ಕರೆ ತರುತ್ತೇವೆ.''

"ಬೇಡ, ಬೇಡ. ಒಳ್ಳೆಯ ದಿನ ಕರೆತಂದಿದ್ದೀರಿ. ಇಲ್ಲಿಯೇ ಇರಲಿ ಅವಳು.''

ಶಂಕರಪ್ಪ ಶಿವಮ್ಮ ಆ ದಿನ ಅಲ್ಲಿಯೇ ಉಳಿದರು. ಮರುದಿನ ಊಟ ಮುಗಿಸಿ ಹಳ್ಳಿ ಹಿಂದಿರುಗಿದರು. ಪತಿಗೃಹದಲ್ಲಿ ಸುಮತಿಯ ಜೀವನ ಪ್ರಾರಂಭವಾಯಿತು. ಅತ್ತೆಯ ಮನೆಯಲ್ಲಿ ದಿನಗಳು ಉರುಳತೊಡಗಿದವು. ನಿಜ ಹೇಳಬೇಕೆಂದರೆ ಅತ್ತೆ ಮನೆಯ ವಾತಾವರಣ, ಅಮ್ಮನ ಮನೆಯ ವಾತಾವರಣಕ್ಕಿಂತ ಹೆಚ್ಚು ಭಿನ್ನವಾಗೇನಿರಲಿಲ್ಲ. ಹೆಣ್ಣು ಎಂದರೆ ಬೆಳಗ್ಗೆ ಕೋಳಿ ಕೂಗಿದಾಗಿನಿಂದ ರಾತ್ರಿ ಮಲಗುವವರೆಗೆ ದುಡಿಯುವ ಜೀತದಾಳು ಎಂಬುವಷ್ಟೇ ಅರ್ಥ. ದುಡಿದಷ್ಟೂ ಮುಗಿಯದ ಕೆಲಸ. ದೇಹದ ಆಯಾಸ ಲೆಕ್ಕಿಸದೆ ಹಾಗೂ ಕೆಲವು ದಿನಗಳು ದುಡಿದುದಾಯಿತು.

ಬೆಳಗ್ಗೆ ಎದ್ದೊಡನೆ ಪ್ರಾರಂಭವಾಗುತ್ತಿತ್ತು ಕೆಲಸ. ಬಾಗಿಲು ಸಾರಿಸಿ ರಂಗೋಲಿ ಇಡುವುದು, ಮುಸುರೆ ಪಾತ್ರೆ ತೊಳೆಯುವುದು, ಬಾವಿಯಿಂದ ನೀರು ಸೇದುವುದು, ಬಟ್ಟೆ ಒಗೆಯುವುದು ಹೀಗೆ ಅನಂತರ ಅಡುಗೆಯ ಕೆಲಸದಲ್ಲಿ ನೆರವಾಗುವುದು. ಸಂಜೆಯಾಯಿತೆಂದರೆ ಹಾಲು ಕರೆಯುವುದು, ಹೂವು ಕಟ್ಟುವುದು, ಪುನಾ ರಾತ್ರಿ ಅಡುಗೆಯ ಕೆಲಸ. ಹಳ್ಳಿ ಮನೆಯಲ್ಲಿ ಹುಟ್ಟಿ ಬೆಳೆದುದರಿಂದ ಇದ್ಯಾವುದೂ ಹೊಸದೆನಿಸಲಿಲ್ಲ, ಭಾರವೆನಿಸಲಿಲ್ಲ

ಆದರೆ ನನ್ನ ಓದು ಬರಹ ಸಂಪೂರ್ಣವಾಗಿ ನಿಂತುಹೋದುದು ನನಗೆ ದುಃಖಕರವಾದ ವಿಷಯವಾಗಿತ್ತು. ಮನಸ್ಸು ಖಿನ್ನವಾಗಿತ್ತು. ಅತ್ತೆಯ ಮನೆಗೆ ಬಂದು ಎರಡು ವಾರವಾದರೂ ನಂಜಪ್ಪ ಇನ್ನೂ ಹಿಂದಿರುಗಿ ಬಂದಿರಲಿಲ್ಲ. ಅವನ ನಿರೀಕ್ಷೆಯಲ್ಲಿ ತಾನಿರಲಿಲ್ಲ. ಬದಲಾಗಿ ನಿಂತುಹೋಗಿರುವ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಹೇಗೆ ಎಂಬತ್ತ ನನ್ನ ಗಮನ ಹರಿದಿತ್ತು. ಇಡೀ ಮನೆಯನ್ನು ಜಾಲಾಡಿ ಇದ್ದ ಪುಸ್ತಕಗಳನ್ನು ಓದಿ ಮುಗಿಸಿದೆ.

ಮೂರನೆಯ ವಾರದಲ್ಲಿ ನಂಜಪ್ಪ ಮರಳಿದ. ಅವನನ್ನು ಕಂಡು ನನಗಿಂತಲೂ ಅವನ ಅಪ್ಪ ಅಮ್ಮನಿಗೆ ಹಿರಿಹಿಗ್ಗು. "ಯಾಕೋ ಮಗು, ಸೊರಗಿ ಹೋಗಿದ್ದೀಯಲ್ಲೋ?''

"ಮೂರುದಿನದಿಂದ ಚಳಿಜ್ವರ ಬರುತ್ತಿದೆ ಅಮ್ಮ. ಊಟ ಕೂಡ ಸರಿಯಾಗಿ ಸೇರುತ್ತಿಲ್ಲ.''

"ರುಕ್ಮಿಣಿಯ ಮಗು ಹೇಗಿದೆಯೋ?''

"ಮಗು ಚೆನ್ನಾಗಿದೆ ಅಮ್ಮ. ಆದರೆ ವಿಪರೀತ ರಚ್ಚೆ. ನನ್ನನ್ನು ಬಿಟ್ಟು ಇರುವುದೇ ಇಲ್ಲ ಎನ್ನುತ್ತಾನೆ. ಹಾಗಾಗಿ ಇಷ್ಟುದಿನ ಉಳಿಯಬೇಕಾಗಿ ಬಂತು.''



ಲೋಕ ನಿಮ್ಮನ್ನು ನಿಂದಿಸುವುದೇ ಹೊರತು ನಿಮಗೆ ಸಹಾಯ ಮಾಡದು.

—ಗೋಲ್ಡ್‌ಸ್ಮಿತ್

ಜಗವೆಂಬುದು ರಂಗಭೂಮಿ. ಪ್ರತಿಯೊಬ್ಬರೂ ಅದರಲ್ಲಿ ನಟರು.

—ಶೇಕ್ಸ್‌ಪಿಯರ್

ಅಮರತ್ವವನ್ನೇ ಸಾಧಿಸಲು ನಿರಾಡಂಬರ ಸೇವೆಯೇ ಹಾದಿ. —ಸಿಸಿರೋ

ಸಂಗ್ರಹ : ಶಿರ್ಸು ಕಲಾದಗಿ

"ನೀನು ಅಲ್ಲಿ ಕುಳಿತಿದ್ದೀ. ನಿನ್ನ ಹೆಂಡತಿ ಇಲ್ಲಿ ಕುಳಿತು ನಿನಗಾಗಿ ಕಾಯುತ್ತಿದ್ದಾಳೆ.''

"ಹೌದೇ?'' ಎನ್ನುತ್ತ ನಂಜಪ್ಪ ನೋಟ ಹರಿಸಿದ ಮಡದಿಯತ್ತ.

ಏನೊಂದೂ ಮಾತನಾಡದೆ ಮೌನಿಯಾಗುಳಿದೆ.

ಎಲ್ಲರೊಂದಿಗೆ ಊಟಕ್ಕೆ ಕುಳಿತ ನಂಜಪ್ಪ. ಆದರೆ ಒಂದು ತುತ್ತೂ ಸರಿಯಾಗಿ ಊಟ ಮಾಡಲಾಗಲಿಲ್ಲ ಅವನಿಗೆ. "ಅವ್ವ, ಯಾಕೋ ವಿಪರೀತ ತಲೆನೋಯುತ್ತಿದೆ, ನನಗೆ ಊಟ ಬೇಡ ಮಲಗಿಕೊಳ್ಳುತ್ತೇನೆ'' ಎಂದು ಹೇಳಿ ಎದ್ದ ನಂಜಪ್ಪ. ತಾನು ಅವನೆಡೆಗೆ ನೋಟ ಹರಿಸಿದಾಗ "ನೀನು ಊಟ ಮಾಡವ್ವ ಅವನು ಹೋಗಿ ಮಲಗಿಕೊಳ್ಳುತ್ತಾನೆ'' ಎಂದರು ಮಾವ.

ಸಂಜೆಯ ವೇಳೆಗೆ ನಂಜಪ್ಪನಿಗೆ ಚಳಿಜ್ವರ ಪ್ರಾರಂಭವಾಯಿತು. ಜೊತೆಗೆ ವಿಪರೀತ ತಲೆನೋವು ಬೇರೆ. ಸಂಜೆಯ ವೇಳೆಗೆ ಬಂದ ಚಳಿಜ್ವರ ವಾರವಾದರೂ ಕಡಿಮೆಯಾಗಲಿಲ್ಲ. ದಿನದಿನಕ್ಕೆ ಏರುತ್ತಲೇ ಹೋಯಿತು. ತನ್ನನ್ನು ಅವನಿರುವ ಕೋಣೆಯ ಬಳಿಗೂ ಸುಳಿಯಗೊಡಲಿಲ್ಲ ಅತ್ತೆವ್ವ. ತಲೆಗೆ ಮುಲಾಮು ತಿಕ್ಕಿದರು, ನಾನಾ ಬೇರಿನ ಕಷಾಯ ಮಾಡಿ ಕುಡಿಸಿದರು. ನಾನಾಗ ಮೈದುನ ವೆಂಕಣ್ಣನ ಬಳಿ ನುಡಿದೆ.

"ವೆಂಕಣ್ಣ ಒಂದು ವಾರವಾದರೂ ನಿಮ್ಮಣ್ಣನಿಗೆ ಜ್ವರ ಇಳಿದಿಲ್ಲ. ಪಟ್ಟಣದ ಡಾಕ್ಟರ್ ಬಳಿ

ಕರೆದುಕೊಂಡು ಹೋಗಿ ಒಮ್ಮೆ ತೋರಬಾರದೆ?''

"ಅಪ್ಪ ಅವ್ವನಿಗೆ ಪಟ್ಟಣದ ಡಾಕ್ಟರ ಬಳಿ ಕರೆದೊಯ್ಯುವುದು ಇಷ್ಟವಿಲ್ಲ.''

"ಹಾಗೆಂದರೆ ಹೇಗೆ, ಸರಿಯಾದ ಡಾಕ್ಟರ್ ಬಳಿ ತಪಾಸಣೆ ನಡೆಸಿದರೆ ಕಾಯಿಲೆ ಏನ ಎಂದು ತಿಳಿದು ಬಿಡುತ್ತದೆ. ಅನಂತರ ಅದಕ್ಕೆ ಸೂಕ್ತವಾದ ಔಷಧಿ ಕೊಡಿಸಿದರೆ ಕಾಯಿಲ ಗುಣವಾಗುತ್ತದೆ.''

ವೆಂಕಣ್ಣ ನನ್ನ ಅನಿಸಿಕೆಗಳನ್ನು ಅಪ್ಪ, ಅವ್ವರ ಮುಂದೆ ಹೇಳಿದ. "ಆಗಲಿ ಇನ್ನೊಂದೆರಡು ದಿನ ನೋಡೋಣ. ಜ್ವರ ಇಳಿಮುಖವಾಗದೇ ಹೋದರೆ ಪಟ್ಟಣಕ್ಕೆ ಕರೆದುಕೊಂಡು ಹೋಗೋಣ'' ಎಂದರವರು.

ಆದರೆ ಮತ್ತೆ ಎರಡು ದಿನಗಳವರೆಗೆ ನಂಜಪ್ಪ ಉಳಿಯಲೇ ಇಲ್ಲ. ಅದೇ ರಾತ್ರಿ ಕೊನೆಯುಸಿರೆಳೆದ.

ಹೆತ್ತವರಿಗೆ ಭರಿಸಲಾಗದ ಸಂಕಟ. ಅಪ್ಪ, ಅಮ್ಮ ಓಡಿಬಂದರು. "ಇಷ್ಟು ಚಿಕ್ಕವಯಸ್ಸಿಗೆ ನಿನ್ನ ಗತಿ ಹೀಗಾಯಿತಲ್ಲೇ. ಕಟ್ಟಿಕೊಂಡ ಗಂಡನ ಜೊತೆಯಲ್ಲಿ ಒಂದು ದಿನ ಕೂಡ ಸರಿಯಾಗಿ ಬಾಳುವೆ ಮಾಡಲಿಲ್ಲವಲ್ಲೇ?'' ಎಂದು ಗೋಳೋ ಎಂದು ಅತ್ತಳು.

"ನಿನ್ನ ಮಗಳ ಕಾಲ್ಗುಣ ಸ್ವಲ್ಪವೂ ಚೆನ್ನಾಗಿಲ್ಲ, ಬರುತ್ತಲೇ ನನ್ನ ಮಗನನ್ನು ನುಂಗಿಕೊಂಡಳು'' ಎಂದು ಅವ್ವನ ಮೂತಿ ತಿವಿದಳು ಬೀಗಿತ್ತಿ.

"ನನ್ನ ಮಗಳ ಕಾಲ್ಗುಣ ಚೆನ್ನಾಗಿಯೇ ಇದೆ. ನಿನ್ನ ಮಗ ಕಾಯಿಲೆಯ ಮಗ ಎಂದು ನಮಗೆ ತಿಳಿದಿರಲಿಲ್ಲ'' ಎಂದು ಜಬರಿಸಿದಳು ಅವ್ವ.

ಪರಸ್ಪರರಲ್ಲಿ ಇದ್ದ ಸ್ನೇಹ, ಗೌರವ, ಪ್ರೇಮ ಮಾಯವಾಗಿ ಮನಸ್ಸುಗಳು ಕಲುಷಿತಗೊಂಡವು. ಮಗನನ್ನು ಕಳೆದುಕೊಂಡ ಸಂಕಟ ಅವರದಾದರೆ, ಮಗಳು ಎಳೆಯ ವಯಸ್ಸಿನಲ್ಲಿ ವಿಧವೆಯಾದಳಲ್ಲ ಎಂಬ ದುಃಖ ಅಪ್ಪ ಅವನದು.

ಯಾರ ದುಃಖ ಹೆಚ್ಚು, ಯಾರ ಸಂಕಟ ಕಡಿಮೆ ಅಳೆಯಲು ಬರುವಂತಿದೆಯೋ?

ತನಗಾದರೋ ದುಃಖ, ಸಂಕಟಕ್ಕೆ ಬದಲಾಗಿ ಒಂದು ವಿಧವಾದ ಸಂತಾಪ ಮನದಲ್ಲಿ ಮನೆಮಾಡಿತ್ತು. ವಾರಗಟ್ಟಲೆ ನಾರುಬೇರಿನ ಕಷಾಯ ಕುಡಿಸದೆ, ತಕ್ಷಣ ಡಾಕ್ಟರ್ ಬಳಿ ಕರೆದೊಯ್ದು ತಪಾಸಿಸಿ ಔಷದೋಪಚಾರ ನಡೆಸಿದ್ದರೆ ನಂಜಪ್ಪ ಉಳಿದಿರುತ್ತಿದ್ದನೇನೋ ಎನಿಸುತ್ತಿತ್ತು ನನಗೆ.

ನಂಜಪ್ಪನ ದೇಹ ಬೂದಿಯಾದಮೇಲೆ ಅಲ್ಲುಳಿದು ಮಾಡುವುದೇನೂ ಇಲ್ಲ ಎನಿಸಿತು ನನಗೆ. ಅವ್ವ ಇನ್ನೂ ದುಃಖತಪ್ತಳಾಗಿದ್ದಳು. ನೋವಿನಿಂದ ಸಂಕಟದಿಂದ ಅಪ್ಪನ ಕಣ್ಣುಗಳು ಕೆಂಡದುಂಡೆಗಳಾಗಿದ್ದವು.

ನೋವೋ, ಸಂಕಟವೋ, ದುಃಖವೋ ಏನೊಂದೂ ಹೇಳಲಾರದ ಸ್ಥಿತಿಯಲ್ಲಿದ್ದೆ ತಾನು. ಒಂದು ರೀತಿಯ ಸ್ಥಿತಪ್ರಜ್ಞತೆ ತನ್ನನ್ನು ಆವರಿಸಿತ್ತು.

"ನಾವಿಬ್ಬರೂ ಊರಿಗೆ ಹೊರಡೋಣ.'' ಅಪ್ಪ ಅವ್ವನ ಬಳಿ ನುಡಿಯುತ್ತಿದ್ದರು.

"ಇಲ್ಲುಳಿದು ಮಾಡುವುದೇನು?'' ಎಂದಳು ಅವ್ವ.

"ಸುಮತಿ?'' ಕೇಳಿದರು ಅಪ್ಪ.

"ಅವಳ ಋಣಬರಹಕ್ಕೆ ಹೊಣೆ ಯಾರು?''

"ಹಾಗೆಂದರೆ ಹೇಗೆ ಶಿವಮ್ಮ?''

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಗಾದೆಯೇ ಇಲ್ಲವೇ?''

"ಗಾದೆ ಹೇಗೂ ಇರಲಿ, ಇಲ್ಲಿ ಬಿಟ್ಟು ಹೋದರೆ ಅವಳೇನು ಮಾಡುತ್ತಾಳೆ?''

"ಅತ್ತೆ ಮಾವನ ಸೇವೆ ಮಾಡಿ ಕೊಂಡಿರುತ್ತಾಳೆ. ಅಲ್ಲಿ ಬಂದು ತಾನೆ ಏನು ಮಾಡಬೇಕು?''

"ಅವ್ವಾ'' ಕಠಿಣ ಸ್ವರದಲ್ಲಿ ಕರೆದೆ.

"ಏನು ಸುಮತಿ?''

"ನಾನಿಲ್ಲಿರುವುದಿಲ್ಲ, ನಿನಗೆ ಭಾರ ಎನಿಸಿದರೆ ಅಲ್ಲೂ ಇರುವುದಿಲ್ಲ. ನನ್ನ ಪಾಡು ನನ್ನದು. ಈಗ ಈ ಮನೆಯಿಂದ ಹೊರಗೆ ನಿಮ್ಮೊಡನೆ ಬರುತ್ತೇನಷ್ಟೆ.''

ನನ್ನ ಸ್ವರದ ಕಾಠಿಣ್ಯವನ್ನೂ ಮುಖದ ಆವೇಶವನ್ನೂ ಗಮನಿಸಿದ ಅವ್ವ ದಂಗಾದಳು. "ಬಳ್ಳಿಗೆ ಕಾಯಿ ಭಾರವೇ ಬಾ ತಾಯಿ, ಬಾ ಮಗು'' ಎಂದಳು ಅವ್ವ.

"ಈಗಲೇ ಸೊಸೆಯನ್ನು ಕರೆದೊಯ್ದರೆ ಹೇಗೆ, ನಂಜಪ್ಪನ ವೈಕುಂಠ ಸಮಾರಾಧನೆಯಾಗಬೇಡವೇ?'' ಎಂದಳು ಅತ್ತೆವ್ವ.



ಗೆಳತಿ

ಗೆಳತಿ
ನನಗೆ
ಮತ್ತು ಬಂದದ್ದು
ಮಾದಕ
ಪಾನೀಯ
ದಿಂದಲ್ಲ
ನಿನ್ನ ಮಾದಕ
ಕಣ್ನೋಟದಿಂದ.

– ರೇಣುಕಾ ಪ್ರಸಾದ್

"ಯಾವ ಸಮಾರಾಧನೆಗೂ ನಾನಿಲ್ಲಿರುವುದಿಲ್ಲ. ಇಂದೇ ಹೊರಟೆ.''

"ಹೊರಡವ್ವ, ಹೊರಡು ಮಾತಾಯಿ. ಬರುತ್ತಿದ್ದಂತೆ ನನ್ನ ಮಗನನ್ನು ನುಂಗಿಕೊಂಡ ಮೇಲೆ ನೀನಿಲ್ಲಿರಲಿ ಎಂಬ ಚಪಲ ನನಗೂ ಇಲ್ಲ'' ಎಂದಳು ಆಕೆ.

ಅಪ್ಪ ಅವ್ವನೊಂದಿಗೆ ಕೆಲವೇ ದಿನಗಳಲ್ಲಿ ಬಂದ ಹಾದಿಯಲ್ಲಿ ಹಿಂದಿರುಗಿ ಹೊರಟೆ. ಆಗ ಪತಿಗೃಹಕ್ಕೆ ಹೊರಟ ನವವಧುವಾಗಿದ್ದೆ. ಈಗ ಹಿಂದಿರುಗಿ ಬರುತ್ತಿರುವಾಗ ತನ್ನೊಂದಿಗೆ ಬಂದುದು ವಿಧವೆಯ ಪಟ್ಟ.

ಕೆಲವೇ ದಿನಗಳಲ್ಲಿ ಎಷ್ಟೊಂದು ಬದಲಾವಣೆ ಬದುಕಿನಲ್ಲಿ. ನೆನೆಯಲಾರದಷ್ಟು.

ಭಾರವಾದ ಹೆಜ್ಜೆಗಳನ್ನಿರಿಸಿಕೊಂಡೇ ತವರುಮನೆ ಮುಟ್ಟಿದ್ದಾಯಿತು. ಅಪ್ಪ ಅಮ್ಮ ಕೂಡ ನನ್ನಷ್ಟೇ ಮಂಕಾಗಿದ್ದರು. ದಿನಗಳು ಉರುಳಿದವರು.

ಆದಿನ ಮಧ್ಯಾಹ್ನ ಊಟ ಮಾಡುತ್ತ ಸುಮತಿ ಎಂದು ಕರೆದರು ಅಪ್ಪ. "ಏನಪ್ಪ?'' ಅವರೆದುರಿಗೆ ಬಂದು ನಿಂತೆ.

"ಈದಿನ ನಿಮ್ಮ ಶಾಲಾಮಾಸ್ತರು ಸಿಕ್ಕಿದ್ದರು.''

"ಹೌದೇ, ಏನಂದರು?''

"ನಿನ್ನ ವಿಚಾರವೆಲ್ಲ ತಿಳಿದು ಎಷ್ಟೊಂದು ನೊಂದರು ಅಂತೀ?''

"ಯಾರು ನೊಂದರೆ ಏನಪ್ಪ, ನನ್ನಕಷ್ಟ ನನ್ನದು.''

"ಯಾಕೆ ಹಾಗೆ ಹೇಳುತ್ತೀ ಮಗು, ಅವರು ನಿನಗೆ ದಾರಿಯೊಂದನ್ನು ಸೂಚಿಸಿದ್ದಾರೆ.''

"ಹೌದೇ, ಏನದು?''

"ನಿಮ್ಮ ಮಗಳು ಬಹಳ ಬುದ್ಧಿವಂತೆ. ಇಷ್ಟು ಚಿಕ್ಕ ವಯಸ್ಸಿಗೆ ಈ ರೀತಿ ಆಗಬಾರದಿತ್ತು. ಮೊದಲಿಗೆ ಇಷ್ಟು ಬೇಗ ನಿಮ್ಮ ಮಗಳಿಗೆ ಮದುವೆ ಮಾಡಲೇಬಾರದಿತ್ತು. ಈಗ ಮದುವೆಯಾಗಿ ಆಗಲೇ ಅವಳ ಸ್ಥಿತಿ ಹೀಗಾಯಿತು ಎನ್ನುತ್ತೀರಿ.''

"ಹೌದು ನನಗೂ ಹಾಗೆಯೇ ಅನ್ನಿಸಿದೆ ಸಾರ್'' ಎಂದೆ.

"ನಿಮ್ಮ ಮಗಳು ಅಪ್ರತಿಮ ಬುದ್ಧಿವಂತೆ. ಅವಳ ವಿದ್ಯಾಭ್ಯಾಸವನ್ನು ಇಲ್ಲಿಗೇ ನಿಲ್ಲಿಸಬೇಡಿ, ಮುಂದುವರಿಸಿ.''

"ಮುಂದೇನೋ ಓದಿಸಬಹುದು. ಆದರೆ ಈ ಹಳ್ಳಿಯಲ್ಲಿ ಅದಕ್ಕೆಲ್ಲ ಅವಕಾಶವೆಲ್ಲಿದೆ ಮಾಸ್ತರೇ?''

"ಈ ಹಳ್ಳಿಯಲ್ಲಿಯೇ ವಿದ್ಯಾಭ್ಯಾಸ ಆಗಬೇಕೆಂದೇನಿಲ್ಲ. ಪಟ್ಟಣಕ್ಕೆ ಕಳಿಸಿ. ಹೆಣ್ಣು ಮಕ್ಕಳಿಗೆಂದೇ ಹಾಸ್ಟಲ್‌ಗಳಿರುತ್ತವೆ. ಅಲ್ಲಿದ್ದುಕೊಂಡು ಅವಳು ವಿದ್ಯಾಭ್ಯಾಸ ಮಾಡಲಿ'' ಎಂದರು.

"ನೀನೇನು ಹೇಳಿದೆ ಅಪ್ಪ?''

"ಹೆಣ್ಣು ಹುಡುಗಿಯನ್ನು ದೂರ ಕಳಿಸಿ ಓದಿಸುವುದೇ ಎಂದೆ?''

"ಕಾಲ ಬದಲಾಗಿದೆ ಶಂಕರಪ್ಪ, ಬೇಕಾದ ಹಾಗೆ ಹಳ್ಳಿಯ ಹೆಣ್ಣು ಮಕ್ಕಳು ಈಗ ಪಟ್ಟಣಕ್ಕೆ ಹೋಗಿ ಓದಿ ಮುಂದೆ ಬರುತ್ತಿದ್ದಾರೆ. ಅದರಲ್ಲೂ ನಿಮ್ಮ ಮಗಳು ಸುಮತಿ ಯಂಥವರು ನೂರಕ್ಕೆ ಒಬ್ಬರು ಸಿಗುತ್ತಾರೋ ಇಲ್ಲವೋ. ಅವಳಿಗೆ ವಿದ್ಯಾಭ್ಯಾಸದಲ್ಲಿ ಬಹಳ ಆಸಕ್ತಿ ಇದೆ. ಚೆನ್ನಾಗಿ ಓದಿಸಿ ಅವಳ ಕಾಲಮೇಲೆ ಅವಳು ನಿಂತುಕೊಳ್ಳಲಿ. ಈ ವಿಚಾರದಲ್ಲಿ ನೀವು ದೊಡ್ಡ ಮನಸ್ಸು ಮಾಡಬೇಕು. ಮಗಳ ಭವಿಷ್ಯದತ್ತ ಹೆಚ್ಚಿನ ಗಮನ ಹರಿಸಬೇಕು. ಚಿಕ್ಕ ಹುಡುಗಿಯ ಭವಿಷ್ಯ ಮಂಕಾಗಿ ಮುರುಟಿಹೋಗಲು ಆಸ್ಪದ ಕೊಡಬೇಡಿ'' ಎಂದರು.

"ನೀನೇನು ಹೇಳಿದೆ?''

"ಯಾವುದಕ್ಕೂ ನನ್ನ ಮಗಳನ್ನು ಕೇಳುತ್ತೇನೆ. ಅವಳು ಇಷ್ಟಪಟ್ಟರೆ ಮುಂದಕ್ಕೆ ಓದಿಸುತ್ತೇನೆ'' ಎಂದೆ.

ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ ಎಂಬಂತಾಯಿತು ನನ್ನ ಮನಸ್ಥಿತಿ. ಮನದಲ್ಲಿಯೇ ಮಾಸ್ತರರಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸಿದೆ.

ಅವ್ವ ಈ ವಿಚಾರದಲ್ಲಿ ತಕರಾರು ತೆಗೆಯುತ್ತಾಳೇನೋ ಎಂಬ ಭಯ ನನಗಿದ್ದೇ ಇತ್ತು. ಆದರೆ ಈ ಬಾರಿ ಅವಳೇನೂ ಚಕಾರ ಎತ್ತದೇ ಇದ್ದುದು ನನ್ನ ಪುಣ್ಯ.

"ಅವ್ವ ಅಪ್ಪ ನನ್ನನ್ನು ಮುಂದಕ್ಕೆ ಓದಿಸಲು ಮಾಡಿರುವ ಏರ್ಪಾಡೆಲ್ಲ ನಿನಗೆ ತಿಳಿದಿದೆ ತಾನೇ?''

"ತಿಳಿದಿದೆ ಸುಮತಿ.''

"ಮುಂದಕ್ಕೆ ಓದಬೇಕೆಂಬ ಆಸೆ ನನಗೂ ಇದೆ ಅವ್ವಾ.''

"ಅದು ನನಗೆ ಗೊತ್ತು ಸುಮತಿ.''

"ನಾನು ನಗರಕ್ಕೆ ಹೋಗಿ ಓದುವುದು ನಿನಗೆ ಇಷ್ಟವಿದೆಯೋ ಇಲ್ಲವೋ.''

"ನನಗೆ ಇಷ್ಟವಿದೆಯೋ ಇಲ್ಲವೋ, ಅದನ್ನು ಕಟ್ಟಿಕೊಂಡು ನಿನಗೆ ಆಗಬೇಕಾದುದೇನು? ನಿನ್ನ ಮುಂದಿನ ಹಾದಿ ನೀನು ನೋಡಿಕೋ.''

"ಹಾಗಂದರೇನಮ್ಮಾ?''

"ಆಸೆಪಟ್ಟು ಮಾಡಿದ ಮದುವೆ ಹೀಗಾಯಿತು. ಹೀಗಾಗುತ್ತದೆಂದು ನಿರೀಕ್ಷಿಸಿದ್ದೆನೇ ನಾನು? ಎಲ್ಲ ಒಳ್ಳೆಯದಾಗಲಿ ಎಂದು ಮಾಡಿದ್ದು ನಾವು ಆದರೆ ಆದುದೇನು?''

"ಅದನ್ನು ಮರೆಯಲು ಪ್ರಯತ್ನಿಸಮ್ಮ.''

"ಮರೆಯುವುದೇ, ಈ ಜನ್ಮದಲ್ಲಿ ಸಾಧ್ಯವಿಲ್ಲ.''

"ಹಾಗಂದರೆ ಹೇಗೆ?''

"ನಿನ್ನನ್ನು ಕಂಡೊಡನೆ ಕರುಳಲ್ಲಿ ಕತ್ತರಿ ಆಡಿಸಿದ ಹಾಗಾಗುತ್ತದೆ.''



ಮನುಷ್ಯನಿಂದ ಮನುಷ್ಯನು ಹುಟ್ಟುವಂತೆ ಪುಸ್ತಕದಿಂದ ಪುಸ್ತಕ ಹುಟ್ಟುತ್ತದೆ.

—ವಿ. ಕೃ. ಗೋಕಾಕ

ತುಂಬಿದ ಹೃದಯ ಜಲಭರಿತ ಮೋಡದಂತೆ ವರದಾನ ಮಾಡಲು ಬಾಗುತ್ತದೆ.

—ಠಾಗೋರ

ಈ ದೇಹವೇ ರಥ, ಇಂದ್ರಿಯಗಳೇ ಅಶ್ವ, ಮನಸ್ಸೇ ಲಗಾಮು, ಬುದ್ಧಿಯೇ ಸಾರಥಿ, ಆತ್ಮವೇ ಮನಸ್ಸಿನಲ್ಲಿ ಮುಂಡಿಸಿರುವಾತ.

—ವಿವೇಕಾನಂದ

ಸಂಗ್ರಹ : ಈರಯ್ಯ ಕೊಳ್ಳಿಮಠ

"ಅದಕ್ಕೆಂದೇ ನಾನೀಗ ದೂರ ಹೋಗುತ್ತಿದ್ದೇನಲ್ಲ.''

"ಹಾಗಾದರೂ ಮಾಡು, ಮೋಸ ಮಾಡಿದರು ಆ ಹುಡುಗನ ಕಡೆಯವರು ನಮಗೆ.''

"ಹಾಗೇನೂ ಅನ್ನಿಸುವುದಿಲ್ಲವ್ವ ನನಗೆ.''

"ಮತ್ತೇನು, ಹುಡುಗನಿಗೆ ಕಾಯಿಲೆ ಇದೆ ಎಂದು ಸುಳಿವು ಸೂಚನೆ ಕೊಡಲಿಲ್ಲ ನೋಡು.''

"ಆದದ್ದು ಆಗಿಹೋಯಿತು. ಮತ್ತೆ ಅದನ್ನೇ ನೆನೆದು ಫಲವೇನಿಲ್ಲ.''

"ನಿನಗೆ ವಿದ್ಯೆ ಕಲಿಯುವುದರಲ್ಲಿ ಆಸಕ್ತಿ ಇದೆ ಎಂಬ ಅಂಶ ನಮಗೆ ತಿಳಿದದ್ದೇ. ಈ ರೀತಿ ಆಗುತ್ತದೆ ಎಂದು ಮೊದಲೇ ತಿಳಿದಿದ್ದರೆ ಮದುವೆ ಬೇಡ, ಏನೂ ಬೇಡ, ಓದಿಕೊಂಡಿರು ಎನ್ನಬಹುದಿತ್ತು.''

"ಯಾರ ಭವಿಷ್ಯ ಯಾರು ಬಲ್ಲರವ್ವ?''

"ಈಗ ನಿನ್ನ ಬದುಕು, ಭವಿಷ್ಯ ಎಲ್ಲ ಬರಿದಾಯಿತಲ್ಲ."

"ನನಗೆ ಹಾಗನ್ನಿಸುವುದಿಲ್ಲ. ಒಂದು ರೀತಿಯಲ್ಲಿ ನನ್ನ ಭವಿಷ್ಯ ಮುಕ್ಕಾಗಿದೆ ನಿಜ. ಆದರೆ ಅದು ಮತ್ತೊಂದು ರೀತಿಯಲ್ಲಿ ಅರಳಿಸಬಹುದು."

"ಏನಾದರೂ ಹೆಣ್ಣಿಗೆ ಗಂಡನೇ ಬದುಕು, ಭವಿಷ್ಯ ಸುಮತಿ. ಆ ಸೌಭಾಗ್ಯ ಇಲ್ಲದ ಮೇಲೆ ಬೇರೆಲ್ಲ ಇದ್ದೂ ಇಲ್ಲದ ಹಾಗೆ."

"ಹಾಗೆಂದು ಪರಿತಪಿಸುತ್ತ ಕುಳಿತರೆ ಫಲವೇನವ್ವ?"

"ಬೇರೇನು ಮಾರ್ಗವಿದೆ ಹೇಳು."

"ನನ್ನ ಮದುವೆಯ ಸಂಬಂಧ ಮುರಿದು ಹೋದುದಕ್ಕೆ ನನಗೇ ಬೇಸರವಿಲ್ಲ. ನೀನೇಕೆ ಅಷ್ಟೊಂದು ಬೇಸರಗೊಳ್ಳುತ್ತೀ?"

"ನಿನಗಿನ್ನೂ ಅದರ ಬೆಲೆ, ಮಹತ್ವದ ಅರಿವಾಗಿಲ್ಲ. ಅದಕ್ಕೆ ಹಾಗೆ ಹೇಳುತ್ತೀ."

"ಹಾಗಲ್ಲವ್ವ. ಸಂಬಂಧ ಬೆಳೆಸಿದ್ದರೆ ತಾನೆ ಮುರಿದುಹೋದುದಕ್ಕೆ ಬೇಸರವಾಗುತ್ತಿತ್ತು. ಸಂಬಂಧ ಬೆಳೆಯಲೇ ಇಲ್ಲವಲ್ಲ."

"ಅದೇ ನನಗೆ ಬೇಸರ ತಂದಿರುವ ವಿಷಯ ಸುಮತಿ, ಒಂದು ದಿನವೂ ಆತನೊಂದಿಗೆ ಸಂಸಾರ ಮಾಡದೆಯೇ ವಿಧವೆಯ ಪಟ್ಟ ಬಂದಿತಲ್ಲ ನಿನಗೆ."

"ಹೋಗಲಿ ಬಿಡು, ಬಂದದ್ದೆಲ್ಲ ಅನುಭವಿಸದೆ ಬೇರೆ ದಾರಿ ಯಾವುದಿದೆ."

"ನಿನ್ನ ಧೈರ್ಯವೇ ಧೈರ್ಯ ಸುಮತಿ."

"ಅದಕ್ಕೇ ನಾನು ಹೇಳುವುದು. ಇನ್ನು ಮುಂದೆ ನಾನೂ ಇರುವುದಿಲ್ಲ. ನೀನು ಇದೇ ವಿಷಯವನ್ನು ಮನದಲ್ಲಿರಿಸಿಕೊಂಡು ಕೊರಗಬೇಡ. ಅಪ್ಪನನ್ನೂ, ರಾಜಣ್ಣ, ರಂಗಣ್ಣರನ್ನು ನೋಡಿಕೊಂಡು ಹಾಯಾಗಿರು."

"ಇನ್ನೆಲ್ಲಿಯ ಸಂತೋಷ ನೆಮ್ಮದಿ ಸುಮತಿ."

"ಮತ್ತೆ ಅದೇ ಮಾತನಾಡುತ್ತೀಯಲ್ಲಮ್ಮ."

"ನಿನ್ನ ದುರದೃಷ್ಟವನ್ನು ಕಂಡು ನನ್ನ ಮನಸ್ಸು ಕಲಕಿಹೋಗಿದೆ ಮಗಳೇ."

"ಈ ನೋವನ್ನೆಲ್ಲ ಮಾಯಿಸುವುದಕ್ಕೆ ಇರುವ ಪರಿಹಾರ ಮಾರ್ಗ ಒಂದೇ."

"ಏನದು ಮಗಳೇ."

"ಕಾಲ."

"ನೋಡೋಣ."

"ಮನುಷ್ಯನೇ ಶಾಶ್ವತವಲ್ಲ ಎಂದಮೇಲೆ ನೋವು ಶಾಶ್ವತವೇನವ್ವ. ಇಂದಲ್ಲ ನಾಳೆ ಕಾಲ ನಿನ್ನ, ನನ್ನ ನೋವುಗಳನ್ನು ಮಾಯಿಸುತ್ತದೆ."

"ಆಯಿತು, ಈ ವಿಚಾರವಾಗಿ ಎಷ್ಟು ನೊಂದರೂ ಅಷ್ಟೆ. ಸತ್ತ ನಂಜಪ್ಪನೇನೂ ಎದ್ದು ಬರುವುದಿಲ್ಲ. ಮುಂದೆ ನಿನಗೆ ಯಾವುದು ಸೂಕ್ತವೋ ಹಾಗೆ ಮಾಡು."

ಸುಮತಿ ಬೆಂಗಳೂರಿಗೆ ಹೊರಟು ನಿಂತಾಗ ಶಿವಮ್ಮನದು ಮಾತ್ರವಲ್ಲದೆ ರಾಜಣ್ಣ, ರಂಗಣ್ಣನ ಕಣ್ಣೂ ಒದ್ದೆಯಾದವು.

"ನನ್ನ ತಪ್ಪನ್ನು ಕ್ಷಮಿಸಿಬಿಡು ಸುಮತಿ. ಈ ಮದುವೆ ಬೇಡ ಇಷ್ಟವಿಲ್ಲ ನಿಲ್ಲಿಸಿಬಿಡು

ಎಂದು ಎಷ್ಟೋ ಹೇಳಿದೆ ನೀನು ಕಿವಿ ಗೊಡಲಿಲ್ಲ.''

"....''

"ಹೀಗಾಗುತ್ತದೆಂದು ನಾನು ಕನಸಿನಲ್ಲೂ ನೆನಸಿರಲಿಲ್ಲ ಸುಮತಿ.''

"ಯಾರು ಕನಸು ಕಂಡಿದ್ದರು ರಾಜಣ್ಣ.''

"ನೀನೀಗ ಇತ್ತಲೂ ಇಲ್ಲ, ಅತ್ತಲೂ ಇಲ್ಲ ಒಂಟಿಯಾಗಿ ಕಷ್ಟ ಪಡುವ ಪರಿಸ್ಥಿತಿ ಬಂತು.''

"ಇರಲಿ ಬಿಡು ರಾಜಣ್ಣ. ಸುಖ ಬೇಕೆಂದರೆ ಕಷ್ಟಪಡಲೇಬೇಕು. ವಿದ್ಯಾಭ್ಯಾಸ ಮಾಡುವುದೇ ಕಷ್ಟ ಎಂದು ನೀನು ಹೇಳುವುದಾದರೆ ಆ ಕಷ್ಟದಲ್ಲಿಯೇ ಸುಖ ಕಾಣುವೆ ನಾನು.''

"ಹೇಗಾದರೂ ರಜ ಬಂದೊಡನೆ ಇಲ್ಲಿಗೆ ಬರುತ್ತೀ ತಾನೆ?''

"ಅಷ್ಟಲ್ಲದೆ ಮತ್ತೆಲ್ಲಿಗೆ ಹೋಗಲಿ?''

"ಅಲ್ಲ ಅತ್ತೆಯ ಮನೆಗೆ ಹೋಗುವೆ ಯೇನೋ ಎಂದುಕೊಂಡೆ.''

"ಇನ್ನು ಮುಂದೆ ನನಗಿರುವುದು ಇದೊಂದೇ ಮನೆ.''

"ಸುಮತಿ ನಿನಗೆ ಹೀಗೇನಾದರೂ ಎಡವಟ್ಟಾಗಬಹುದು ಎಂಬ ಸುಳಿವು ಸೂಚನೆ ತಿಳಿದಿತ್ತೇ'' ರಂಗಣ್ಣ ಕೇಳಿದ್ದ.

"ಇಲ್ಲವಲ್ಲ.''

"ಈಗಲೇ ಈ ಮದುವೆ ಬೇಡ, ಮುಂದಕ್ಕೆ ಓದಬೇಕು ಎಂದೆಲ್ಲ ಹೇಳಿದೆ ನೀನು.''

"ಹೌದು.''

"ನೀನು ಹೇಳಿದುದನ್ನೆಲ್ಲ ಅಪ್ಪ, ಅವ್ವನ ಮುಂದೆ ಹೇಳಿದೆ ನಾನು.''


"ಅವಳಿಗೆ ಬುದ್ಧಿ ಇಲ್ಲ ಅಂದರೆ ನಿನಗೂ ಬುದ್ಧಿ ಇಲ್ಲವೇನೋ. ಅವಳನ್ನು ಮದುವೆಗೆ ಒಪ್ಪಿಸು ಎಂದರವರು.''

"ಹೌದೇ?''

"ಅವರ ಮಾತಿಗೆ ಹೆಚ್ಚಿನ ಮನ್ನಣೆ ಇತ್ತೆ ನಾನು.''

"ಈಗನಿಸುತ್ತಿದೆ ನಿನ್ನ ಮಾತಿಗೇ ಹೆಚ್ಚಿನ ಬೆಲೆ ಕೊಡಬೇಕಾಗಿತ್ತು ಎಂದು.''

"ಒಡೆದು ಹೋದ ಹಾಲಿಗಾಗಿ ಅತ್ತರೇನು ಪ್ರಯೋಜನ ರಂಗಣ್ಣ.''



"ಲೈಟ್ ಇಲ್ಲದೆ ಸೈಕಲ್‌ನಲ್ಲಿ ಹೋಗುತ್ತಿಯಲ್ಲ ಯಾಕೆ?''

"ಇಷ್ಟೊಂದು ಬೀದಿ ಲೈಟ್‌ಗಳಿರುವಾಗ ಸೈಕಲ್‌ಗೇಕೆ ಲೈಟ್.''

ಹಾಗೋ ಎಂದು ಸೈಕಲ್ ಚಕ್ರದ ಗಾಳಿ ಬಿಟ್ಟ ಪೋಲೀಸ್.

"ರೀ ರೀ ಯಾಕ್ರೀ ಸೈಕಲ್ ಚಕ್ರದ ಗಾಳಿ ಬಿಡ್ತಿದ್ದೀರಿ?''

"ಇಲ್ಲಿ ಸುತ್ತಮುತ್ತ ಎಷ್ಟೊಂದು ಗಾಳಿ ಇದೆ. ಇನ್ನ್ಯಾಕಪ್ಪ ಆ ಚಕ್ರದಲ್ಲಿ ಗಾಳಿ?''

– ನಿಂಗಪ್ಪ ಕಳ್ಳಿಮನಿ

"ಅದು ನಿಜ, ಆದರೆ ಮದುವೆಯಾಗದೆಯೇ ನೀನು ಈ ರೀತಿ ಮುಂದೆ ಓದಲು ನಗರಕ್ಕೆ ಹೋಗುವಂತಿದ್ದರೆ ಎಷ್ಟು ಸೊಗಸಿತ್ತು?''

"ಈಗ ಅದು ಸಾಧ್ಯವಿಲ್ಲವಲ್ಲ.''

"ಅದಕ್ಕಾಗಿ ನನ್ನ ಮನ ರೋದಿಸುತ್ತಿದೆ. ಬೇಕೆಂದೇ ನಾವೆಲ್ಲ ಸೇರಿ ನಿನ್ನ ತಲೆಯಮೇಲೆ ಚಪ್ಪಡಿ ಎಳೆದೆವೇನೋ ಎನಿಸುತ್ತಿದೆ.''

"ನಿನ್ನೆ ಕಳೆದು ಹೋಗಿದೆ ರಂಗಣ್ಣ, ಈದಿನ ಕಳೆಯುತ್ತಲಿದೆ ಈ ರೀತಿಯಲ್ಲಿ. ನಾಳೆ ಒಳ್ಳೆಯದಾಗಲಿ ಎಂದು ಆಶಿಸೋಣ'' ಎಂದೆ.

ಅಪ್ಪನೊಂದಿಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದೆ.

ಹೆಣ್ಣು ಮಕ್ಕಳ ವಸತಿ ಗೃಹದಲ್ಲಿ ನನ್ನನ್ನು ದಾಖಲಿಸಿ, ಹೆಣ್ಣು ಮಕ್ಕಳ ಕಾಲೇಜಿಗೇ ನನ್ನನ್ನು ಸೇರಿಸಿ ಅಪ್ಪ ಊರಿಗೆ ಹೊರಟು ನಿಂತರು. ಹೊರಡುವ ಮುನ್ನ ಸಾಕಷ್ಟು ಉಪದೇಶವನ್ನು ಹೇಳಲು ಮರೆಯಲಿಲ್ಲ ಅವರು.

"ಸುಮತಿ, ನಿನ್ನನ್ನು ಈ ಸ್ಥಿತಿಯಲ್ಲಿ ಇಲ್ಲಿ ಒಂಟಿಯಾಗಿ ಬಿಟ್ಟು ಹೋಗಬೇಕಲ್ಲ ಎಂದು ನನಗೆ ದುಃಖವಾಗುತ್ತದೆ.''

"ಇಲ್ಲ ಸುತ್ತಲೂ ಜನರಿರುವಾಗ ನಾನು ಒಂಟಿ ಹೇಗಾದೇನಪ್ಪ?''

"ಹಾಗಲ್ಲ ಮಗು. ಇಷ್ಟು ದಿನ ಮನೆಯಲ್ಲಿ ಹೆತ್ತವರು, ಒಡಹುಟ್ಟಿದವರೊಂದಿಗೆ ಆನಂದದಿಂದ ಕಾಲ ಕಳೆದುಕೊಂಡಿದ್ದೆ. ವೈವಾಹಿಕ ಜೀವನ ಪ್ರಾರಂಭದಲ್ಲಿಯೇ ಮರುಟಿಹೋಗಿ ಆಶಾಭಂಗವಾಯಿತು ಎಲ್ಲರಿಗೂ. ಇಂತಾ ಪರಿಸ್ಥಿತಿಯಲ್ಲಿ ನಿನ್ನನ್ನು ಕರೆತಂದು ಇಲ್ಲಿ ಬಿಡುತ್ತಲಿದ್ದೇನೆ.''

"ಪರಿಸ್ಥಿತಿ ಹಾಗೆ ಬಂದರೆ ಯಾರೇನು ಮಾಡಲಾಗುತ್ತದೆ ಅಪ್ಪ?''

"ಇಲ್ಲ ನೀನು ಮನದಲ್ಲಿಯೇ ಎಷ್ಟು ನೊಂದುಕೊಳ್ಳುತ್ತೀಯೋ ಕೊರಗುತ್ತೀಯೋ ಎಂಬ ಯೋಚನೆ ನನ್ನದು.''

"ಆ ಬಗೆಗೆ ನೀನೇನೂ ಕೊರಗಬೇಡ ಅಪ್ಪ. ಆ ಮದುವೆಯಿಂದಾಗಿ ನಾನು ಕಳೆದುಕೊಂಡುದೇನೂ ಇಲ್ಲ. ಅದಕ್ಕಾಗಿ ನಾನು ದುಃಖಿಸುವುದೂ ಇಲ್ಲ.''

"ಇಲ್ಲಿನ ವಾತಾವರಣ ನಿನಗೆ ಹಿಡಿಸುತ್ತದೆಯೋ ಇಲ್ಲವೋ.''

"ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಮುಂದುವರೆಯುತ್ತೇನೆ ಅಪ್ಪ. ನೀರಿನಲ್ಲಿ ಇಳಿದವನಿಗೆ ಚಳಿಯೇನು ಗಾಳಿಯೇನು?''

"ಆಗಾಗ ತಪ್ಪದೇ ಕಾಗದ ಬರೀ ಮಗು.''

"ಹಾಗೇ ಆಗಲಿ.''

"ಹಣ ಬೇಕಾದರೆ ತಕ್ಷಣ ತಿಳಿಸು ತಂದುಕೊಡುತ್ತೇನೆ.''

"ಆಯಿತು.''

"ಇಲ್ಲಿ ವಾತಾವರಣ ಬೇಸರವಾದರೆ, ಓದು ಬೇಸರವೆನಿಸಿದರೆ ತಕ್ಷಣ ಕಾಗದ ಬರೆದು ತಿಳಿಸು, ಬಂದು ಕರೆದುಕೊಂಡು ಹೋಗುತ್ತೇನೆ.''

"ತಿಳಿಸುತ್ತೇನೆ.''

"ನಾನಿನ್ನು ಬರಲೇ ಮಗು?''


"ಹೋಗಿಬನ್ನಿ ಅಪ್ಪ.'' ಎಷ್ಟೇ ಬೇಡವೆಂದು ತಡೆದುಕೊಂಡರೂ ಅಪ್ಪ ಹಿಂದಿರುಗಿ ಹೊರಟಾಗ ನನ್ನ ಕಣ್ಣಿನಲ್ಲಿ ನೀರು ಚಿಮ್ಮಿತು. ಅದನ್ನು ಕಂಡ ಅವರು ಕಣ್ಣೀರೊರೆಸಿಕೊಂಡರು.

ಹಳ್ಳಿಯ ವಾತಾವರಣದಲ್ಲಿ ಹುಟ್ಟಿ ಬೆಳೆದ ನನಗೆ ಹಾಸ್ಟಲಿನ ಜೀವನಕ್ಕೆ ಹೊಂದಿಕೊಳ್ಳುವುದು ಬಹಳಷ್ಟೇ ಕಠಿಣವೆನಿಸಿತು. ಅಲ್ಲಿ ಹಳ್ಳಿಯಿಂದ ವಿದ್ಯಾಭ್ಯಾಸ ಮುಂದುವರಿಸಲೆಂದು ಪಟ್ಟಣಕ್ಕೆ ಬಂದ ಹುಡುಗಿಯರ ಸಂಖ್ಯೆ ಕಡಿಮೆ. ಬದಲಿಗೆ ಬೇರೆ ಬೇರೆ ಊರುಗಳಿಂದ ಮನೆಯ ವಾತಾವರಣ ಹಿಡಿಸದೆ, ಅಧ್ಯಯನ ಮುಂದುವರಿಸಲು ಹಾಸ್ಟಲಿಗೆ ಸೇರಿದ ಬೆಡಗಿಯರೇ ಹೆಚ್ಚು. ಎಷ್ಟೋ ಹುಡುಗಿಯರು ಅದೇ ಊರಿನಲ್ಲಿ ಮನೆ ಇಟ್ಟುಕೊಂಡು ಹಾಸ್ಟಲಿಗೆ ಸೇರಿದ್ದರು. ಮನೆಯಲ್ಲಿ ಓದಲು ಅನುಕೂಲ ಸರಿಯಿಲ್ಲ ಎಂಬುದು ಅವರ ವಾದ. ಮನೆ ಚಿಕ್ಕದು, ಜನ ಜಾಸ್ತಿ, ಓದಿನಲ್ಲಿ ಮಗ್ನರಾಗುವುದು ಕಷ್ಟ ಎಂಬುದು ಕೆಲವರ ವಾದವಾದರೆ, ಮನೆಯಲ್ಲಿ ಟೀವಿ, ರೇಡಿಯೋ, ವೀಡಿಯೋ ಇವುಗಳ ಹಾವಳಿಯಲ್ಲಿ ವಿದ್ಯಾಭ್ಯಾಸ ಮಾಡುವುದು ಕಷ್ಟ ಎಂಬುದು ಮತ್ತೆ ಹಲವರ ವಾದ. ಹಾಸ್ಟಲಿಗೆ ಸೇರಿ ಕೆಲವರು ಓದಿ ಉದ್ಧಾರವಾಗುತ್ತಿದ್ದರೆ, ಮತ್ತೆ ಕೆಲವರು ಓದದೆ ಸಮಯ ಉಡಾಯಿಸಿ ಹಾಳಾಗುತ್ತಿದ್ದುದು ಸ್ಪಷ್ಟವಾಗಿತ್ತು. ಹಾಸ್ಟಲಿಗೆ ಸೇರಿದ ಹುಡುಗಿಯರೆಲ್ಲ ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಾರೆಂದೇನೂ ಇಲ್ಲ. ಹಾಸ್ಟಲಿನ ಏಕಾಂತದ, ಪ್ರಶಾಂತತೆಯ ಲಾಭ ಪಡೆಯುವವರೂ ಇದ್ದಾರೆ. ಸಕಾರಣವಿಲ್ಲದೆ ಹಾಸ್ಟಲಿಗೆ ಸೇರಿ ಹಾಳಾಗುವವರೂ ಇದ್ದಾರೆ. ಎರಡು ತರವೂ ಉಂಟು. ಪಟ್ಟಣದ ಹುಡುಗಿಯರ ಬೆಡಗೇನು, ವೇಷ ಭೂಷಣವೇನು, ಇರಸರಿಕೆಯೇನು? ನೋಡಿದವರು ಬೆರಗಾಗಿ ಬಿಡಬೇಕು. ಆದರೆ ಅವರ ಮುಂದೆ ನಾನು ಯಾವ ರೀತಿಯಲ್ಲೂ ಸರಿಸಾಟಿ ಇರಲಿಲ್ಲ, ಶೋಭಿಸುತ್ತಿರಲಿಲ್ಲ.

ಮುಂದಿನ ಗುರಿ ನನಗೆ ಸ್ಪಷ್ಟವಾಗಿತ್ತು. ಎರಡು ವರುಷದ ಪಿ.ಯು.ಸಿ. ಪರೀಕ್ಷೆಯನ್ನು ಅತಿ ಹೆಚ್ಚಿನ ಅಂಕಗಳೊಂದಿಗೆ ಪಾಸು ಮಾಡುವುದು. ಅದಷ್ಟೇ ಮುಖ್ಯ, ಬೇರೆಯದೆಲ್ಲ ಗೌಣ. ಗುರಿ ಮುಟ್ಟುವತ್ತ ನನ್ನ ಗಮನವೆಲ್ಲ. ಬೇರೇ ಯಾವುದರೆಡೆಗೂ ಗಮನಹರಿಸುತ್ತಿರಲಿಲ್ಲ. ಆದರೂ ಎಷ್ಟೋ ಬಾರಿ ಸಹಪಾಠಿಗಳ ಇಂಗ್ಲಿಷಿನ ಮಾತಿನ ವೈಕರಿಯನ್ನೂ, ಇರಸರಿಕೆಯನ್ನೂ ಕಂಡು ಮನಸ್ಸು ಕುಬ್ಜವಾಗುತ್ತಿತ್ತು. ದುಃಖತಪ್ತವಾಗುತ್ತಿತ್ತು. ನಾಲ್ಕು ಜನರ ಮಧ್ಯೆ ಬೇರೆಯಲಾಗದಂಥ ಪರಿಸ್ಥಿತಿ ತನ್ನದು. ಅವರುಗಳ ರೀತಿಯಲ್ಲಿ ಆಡಂಬರದ ಉಡುಗೆತೊಡಿಗೆಗಳನ್ನು ಬಯಸುವುದು

'ರಾಗಸಂಗಮ'

ಲಾಟರಿ ಡ್ರಾ - ೧೩೮ರ ವಿಜೇತರು



ಪವಿತ್ರ ಭಂಡಾರಿ

ಬೆಳ್ಳೂರು

ದಕ್ಷಿಣ ಕನ್ನಡ ಜಿಲ್ಲೆ.

ತರವೇ? ಅದಕ್ಕೆಲ್ಲ ಅಪ್ಪನಿಂದ ಹಣ ಸುಲಿಗೆ ಮಾಡುವುದು ಯಾವ ನ್ಯಾಯ? ಹಾಸ್ಟಲಿನ ಫೀಸು, ಕಾಲೇಜಿನ ಫೀಸು ಕೊಡುತ್ತಿರುವುದು ಸಾಲದೇ ಅವರು? ಮತ್ತೂ ಹೆಚ್ಚಿನ ಹೊರೆಯನ್ನು ಅವರ ಮೇಲೆ ಹೊರಿಸಬೇಕೇ ತಾನು? ಅವರೇನೋ ಹಣ ಬೇಕಾದರೆ ಕಾಗದ ಬರಿ, ತಕ್ಷಣ ಕಳಿಸಿಕೊಡುತ್ತೇನೆ ಎಂದಿದ್ದಾರೆ. ಹಾಗೆಂದು ಅವರಿಂದ ಅಗತ್ಯಕ್ಕಿಂತ ಹೆಚ್ಚಿನ ಹಣ ತರಿಸಿಕೊಳ್ಳುವುದು ತರವೇ? ಒಂದು ವೇಳೆ ತರಿಸಿಕೊಂಡರೂ ಸ್ಕರ್ಟ್ ಮಿನಿಸ್ಕರ್ಟ್ ಮುಂತಾದ ಆಧುನಿಕ ಉಡುಗೆ ತೊಡುಗೆಗಳನ್ನು ಧರಿಸುವುದು ತನ್ನಿಂದ ಸಾಧ್ಯವೇ? ಕನ್ಯೆಯಾಗಿಯೇ ಉಳಿದಿದ್ದರೆ ಅದೊಂದು ರೀತಿ. ಒಮ್ಮೆ ಮದುವೆಯಾಗಿ ವಿಧವೆಯೆನಿಸಿದವಳು ಹುಚ್ಚಾರೆ ಆಡಿದರೆ ನೋಡಿದವರು ನಗುವುದಿಲ್ಲವೇ? ಮೊದಲು ಶಾಲೆಗೆ ಹೋಗುವಾಗ ಇದ್ದ ನವನವೋಲ್ಲಾಸ ಈಗಿಲ್ಲ ತನ್ನಲ್ಲಿ. ಎಲ್ಲಿ ಹೋಯಿತು ತನ್ನ ಮೊದಲಿನ ವಾಚಾಳಿತನ, ಮಾತುಗಾರಿಕೆ? ಮಾತು ಎಷ್ಟು ಬೇಕೋ ಅಷ್ಟು, ಅಗತ್ಯಕ್ಕಿಂತ ಹೆಚ್ಚಿಲ್ಲ, ಕಡಿಮೆಯಿಲ್ಲ ಎಂಬಂತಾಗಿದೆ ತನ್ನ ಮಾತುಗಾರಿಕೆ ಈಗ. ಬೇಡದ ಮದುವೆ, ವೈಧವ್ಯ ತನ್ನ ವ್ಯಕ್ತಿತ್ವವನ್ನೇ ಬದಲಾಯಿಸಿದೆ. ಬೇಡ ಬೇಡವೆಂದರೂ ಮಾಡಿದ ಮದುವೆಗೆ ಕಟುಕನ ಕತ್ತಿಗೆ ತಲೆಯೊಡ್ಡಿದ ಕುರಿಯಂತಾಯಿತು ತನ್ನ ಪರಿಸ್ಥಿತಿ. ವಯಸ್ಸಿಗೆ ಸಲ್ಲದ ಗಾಂಭೀರ್ಯ ತನ್ನಲ್ಲಿ ಮಾಡಿತು. ಹಾಗೆ ನೋಡಿದರೆ ಹಾಸ್ಟಲಿನಲ್ಲಿರುವ ಅನೇಕ ಹುಡುಗಿಯರು ತನ್ನ ಓರಗೆಯವರೇ. ಎಷ್ಟೋ ಹುಡುಗಿಯರು ತನಗಿಂತ ವಯಸ್ಸಿನಲ್ಲಿ ದೊಡ್ಡವರು. ಅವರಲ್ಲಿರುವ ಚೆಲ್ಲುತನ, ಲಾಲಿತ್ಯ ತನ್ನ ಬಳಿ ಈಗಿಲ್ಲ. ಎಷ್ಟು ದಿನಗಳಿಗೆ ತನ್ನ ಮನಸ್ಥಿತಿ ಸರಿಹೋಗುವುದೋ ಇಲ್ಲ ಹೀಗೆಯೇ ಉಳಿದುಬಿಡುವುದೋ?

ಹಾಸ್ಟಲಿನ ಒಂದೊಂದು ಕೋಣೆಯಲ್ಲಿ ಇಬ್ಬರು ಹುಡುಗಿಯರು. ನನ್ನ ಕೋಣೆಯಲ್ಲಿದ್ದ ನಂದಿತಾ ಬೆಂಗಳೂರಿನವಳೇ. ಮನೆಯಲ್ಲಿ ಮಲತಾಯಿಯ ಕಾಟ ತಡೆಯಲಾರದೆ ತಂದೆಗೆ ದುಂಬಾಲುಬಿದ್ದು ಹಾಸ್ಟಲು ಸೇರಿದ್ದಳು.

ನಂದಿತಾ ಒಳ್ಳೆಯ ಹುಡುಗಿ. ಸ್ನೇಹಮಯಿ. ನಾನು ಹಾಸ್ಟಲಿಗೆ ಸೇರಿದ ಮೊದಲ ದಿನಗಳಲ್ಲಿ ಅವಳು ತೋರಿದ ಸ್ನೇಹ, ಪ್ರೇಮ, ಅನುಕಂಪ, ಆತ್ಮೀಯತೆ ಮಾರ್ಗದರ್ಶನ ಮರೆಯುವಂತಾದ್ದಲ್ಲ. ಎರಡು ವರುಷದ ದಿನಗಳು ಅವಳು ನನ್ನ ರೂಂಮೇಟ್ ಆಗಿದ್ದು ಹಳ್ಳಿಯ ಜೀವನದ ಕಹಿನೆನಪುಗಳನ್ನು ಮರೆತು ವಿದ್ಯಾಭ್ಯಾಸದಲ್ಲಿ ನನ್ನ ಮನತೊಡಗಿಸಲು ಸಹಕರಿಸಿದಳು.

ಅಪ್ಪ ನನ್ನನ್ನು ಬಿಟ್ಟು ಹೊರಟ ಮೇಲೆ ರೂಂನಲ್ಲಿ ನಾನೊಬ್ಬಳೇ ಕುಳಿತಿದ್ದೆ. ಎದುರಿನ ಮಂಚ ಕಾಲಿಯಿತ್ತು. ಹಾಗಾಗಿ ಈ ರೂಮಿನಲ್ಲಿ ಇರಲು ಮತ್ತೊಬ್ಬ ಹುಡುಗಿಗೆ ಅವಕಾಶವಿದೆ ಎಂಬಂಶ ಸ್ಪಷ್ಟವಾಯಿತು. ಯಾವ ಹುಡುಗಿ ಬರುತ್ತಾಳೋ, ಹೇಗಿರುತ್ತಾಳೋ ತನ್ನೊಂದಿಗೆ ಈ ಕೋಣೆಯಲ್ಲಿರುವುದು ಅವಳಿಗೆ ಇಷ್ಟವಾಗುತ್ತದೋ ಇಲ್ಲವೋ ಎಂಬೆಲ್ಲ ಯೋಚನೆಗಳು ಅನಿಸಿಕೆಗಳು ನನ್ನ ಮನದಲ್ಲಿ ಮೂಡಿತು..

ರಜಾ ದಿನವೆಂದು ಮನೆಗೆ ಹೋಗಿದ್ದ ನಂದಿತಾ ಮರುದಿನ ಬಂದಳು. ಸಂಕೋಚದ ಮುದ್ದೆಯಾಗಿ ಕುಳಿತಿದ್ದ ನನ್ನ ಪಕ್ಕದಲ್ಲೇ ಬಂದು ಕುಳಿತಳು.

"ನೀವೂ ಈ ರೂಮಿನಲ್ಲಿರುವವರೇ?''

"ಹೌದು."

"ಹೆಸರು?"

"ಸುಮತಿ."

"ಊರು?"

"ಚೆಲುವಿನಹಳ್ಳಿ."

"ಹಳ್ಳಿಯೇ, ಹಳ್ಳಿಗಳೆಂದರೆ ನನಗೆ ತುಂಬ ಇಷ್ಟ."

"ನೀವು ಯಾವ ಊರಿನವರು?"

"ಇದೇ ಊರಿನವಳು, ಹೆಸರು ನಂದಿತಾ. ಮನೆಯಲ್ಲಿ ಮಲತಾಯಿಯ ಕಾಟ. ಅದಕ್ಕಾಗಿ ಹಾಸ್ಟಲಿಗೆ ಸೇರಿದ್ದೇನೆ."

"ಹಳ್ಳಿಯ ಹುಡುಗಿ, ನಾನಿಲ್ಲಿ ನಿಮ್ಮ ಜೊತೆಗಿರುವುದು ನಿಮಗೆ ಬೇಸರವೇನೋ?"

"ಛೇ ಛೇ ಖಂಡಿತ ಇಲ್ಲ. ನಾನು ಹುಟ್ಟಿ ಬೆಳೆದುದೆಲ್ಲ ಬೆಂಗಳೂರಿನಲ್ಲಿಯೇ. ಹಾಗಾಗಿ ಒಂದು ಹಳ್ಳಿಯನ್ನೂ ನೋಡಿಲ್ಲ. ನಿಮ್ಮ ಹಳ್ಳಿಯನ್ನೊಮ್ಮೆ ಬಂದು ನೋಡುತ್ತೇನೆ."

"ಖಂಡಿತ ಬನ್ನಿ, ನಮ್ಮ ಚೆಲುವಿನಹಳ್ಳಿ ಹೆಸರಿಗೆ ತಕ್ಕಂತೆ ಸುಂದರವಾಗಿಯೇ ಇದೆ."

"ಎಲ್ಲಿರುವುದು ಅದು?"

"ಮೈಸೂರಿನ ಬಳಿ."

"ಹಾಗಿದ್ದಮೇಲೆ ನೀವು ಬೆಂಗಳೂರಿಗೆ ಬರಲು ಕಾರಣ?"

"ಬೆಂಗಳೂರಿನ ಹಾಸ್ಟಲಿಗೆ ಸೇರಲು ಕಾರಣವಿದೆ. ಮೈಸೂರಿನ ಕಾಲೇಜಿನಲ್ಲಿ ಸೀಟು ಸಿಕ್ಕರೂ ಹಾಸ್ಟಲಿನಲ್ಲಿ ಸೀಟು ಸಿಗಲಿಲ್ಲ."

"ಓಹೋ."

"ತಂದೆ ತಾಯಿ ಹಳ್ಳಿಯಲ್ಲಿದ್ದಾರೆಯೇ?"

"ಹೌದು."

"ಮತ್ತೆ ಯಾರಿದ್ದಾರೆ?"

"ಇಬ್ಬರು ಅಣ್ಣಂದಿರು."

"ಅಪ್ಪಟ ಹಳ್ಳಿಯ ಹುಡುಗಿಯಾದ ನೀವು ಇಲ್ಲಿ ಇದ್ದುಕೊಂಡು ಓದುತ್ತಿರುವುದು ಸೋಜಿಗವಾಗಿದೆ."

"ಯಾಕೆ?"



ನೆನಪು

ಸೂರ್ಯನ ಸ್ಪರ್ಶಕೆ
ಭುವಿ ನಾಚುವಂತ
ರಂಗು ರಂಗಿನ ಸಂಜೆ
ನಿನ್ನ ಸನಿಹ ಸ್ಪರ್ಶಕ್ಕೆ
ನನ್ನಲ್ಲಿ ಕವಿತೆ ಹುಟ್ಟಿತಲ್ಲೇ
ಮಿಂಚು ಮಿನುಗಿ
ಒಡುಕು ಮುಗಿಯುವ
ಮುನ್ನ ಮರೆಯಾಗಿ
ಬರಿ ನೆನಪಾಗಿ
ಉಳಿದೆಯಲ್ಲೆ.

— ರಚನ

"ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಓದುವುದು ಅಪರೂಪ ಅಲ್ಲವೇ?''

"ಹೌದು.''

"ನಾಲ್ಕಾರು ವರುಷ ಶಾಲೆಗೆ ಹೋಗಿ ಬರುತ್ತಿದ್ದಂತೆ, ಶಾಲೆ ಬಿಡಿಸಿ ಮನೆ ಕೆಲಸಕ್ಕೆ ಹಾಕಿಕೊಂಡು ಬಿಡುತ್ತಾರೆ, ಇಲ್ಲವೇ ಮದುವೆ ಮಾಡಿಬಿಡುತ್ತಾರೆ.''

"ನಿಮ್ಮ ಮಾತು ನಿಜ.'' ದುಃಖ ಉಕ್ಕಿಬಂತು ಸುಮತಿಗೆ.

"ಯಾಕೆ ಅಳುತ್ತಿದ್ದೀರಿ?''

"ನನ್ನದೂ ಮದುವೆಯಾಗಿದೆ.''

"ಮದುವೆಯಾಗಿದೆಯೇ?''

"ಹೌದು, ಗಂಡ ಸತ್ತುಹೋದದ್ದೂ ಆಯಿತು.''

"ಏನು!''

"ಹೌದು ನಂದಿತಾ'' ಎಂದು ನುಡಿದ ಸುಮತಿ ತನ್ನ ವಿಚಾರವನ್ನೆಲ್ಲ ಸಾದ್ಯಂತವಾಗಿ ವಿವರಿಸಿದಳು.

"ಎಂತಹ ಮೋಸ? ಎಂತಾ ವಂಚನೆ? ಆಡುವ ಹುಡುಗಿಗೆ ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಮಾಡಿದುದು ನಿನ್ನ ಹೆತ್ತವರದೇ ತಪ್ಪು.''

"ಹೀಗಾಗುತ್ತದೆಂದು ಅವರು ಕನಸು ಕಂಡಿದ್ದರೇ ನಂದಿತಾ?''

"ಓಹೋ. ಈಗ ಮಾಡಿರುವ ತಪ್ಪನ್ನು ಸರಿಪಡಿಸಲು ನಿನ್ನನ್ನಿಲ್ಲಿಗೆ ಸೇರಿಸಿದ್ದಾರೋ.''

"ಮುಂದೆ ಓದಬೇಕೆಂಬ ಅದಮ್ಯ ಹಂಬಲ ನನಗೆ ಇತ್ತು. ಅದು ಈ ರೀತಿ ಕೈಗೂಡಿತು ಅಷ್ಟೆ.''

"ನೀನು ತೀರಾ ಅಮಾಯಕಳು ಸುಮತಿ. ಈಗಲೂ ಅಷ್ಟೇ ನೀನು ಮದುವೆಯಾದವ ಳೆಂದಾಗಲೀ, ಗಂಡನಿಲ್ಲ ಎಂಬ ವಿಚಾರವನ್ನಾಗಲಿ ಯಾರ ಮುಂದೂ ಬಾಯಿಬಿಡಬೇಡ.''

"ಯಾಕೆ?''

"ಯಾಕೆಂದರೆ ಹಾಸ್ಟೆಲಿನಲ್ಲಿ ಎಲ್ಲ ಬಗೆಯ ಹುಡುಗಿಯರೂ ಇರುತ್ತಾರೆ. ಕೇಳಿ ಅನುಕಂಪ ತೋರುವವರಿದ್ದಾರೆ. ಕೇಳಿ ಆಡಿಕೊಳ್ಳುವವರಿದ್ದಾರೆ. ಪ್ರಶ್ನೆಗಳ ಸುರಿಮಳೆಗಳನ್ನೇ ಕೇಳಿ ದಂಗುಬಡಿಸುವವರಿದ್ದಾರೆ. ಎಲ್ಲರ ಮುಂದೆ ಯಾಕೆ ಹೇಳಿ ಬೆಪ್ಪಾಗುತ್ತಿ.''

"ನಿಜ ಹೇಳಿದರೂ ತಪ್ಪೇ.''

"ಹೌದು, ನಗುವವರ ಮುಂದೆ ಎಡವಿ ಬಿದ್ದಂತಾಗುತ್ತದಷ್ಟೆ.''

"ಹಾಗಾದರೆ ಏನು ಮಾಡಬೇಕೆನ್ನುತ್ತೀ?''

"ಮದುವೆಯಾಗಿದೆ ನಿನಗೆ ಎಂಬಂಶವನ್ನೇ ಯಾರ ಮುಂದೂ ಎತ್ತಬೇಡ.''

"ಅದು ಸಾಧ್ಯವೇ?''

"ಯಾಕೆ ಸಾಧ್ಯವಿಲ್ಲ?''

"ನಿಜವನ್ನು ಮರೆಮಾಚುವುದು ಅಷ್ಟು ಸುಲಭವಲ್ಲ.''

"ಅಷ್ಟು ಮಾತ್ರವಲ್ಲ, ನಿನ್ನ ಮನಸ್ಸಿನಿಂದಲೂ ಈ ವಿಚಾರವನ್ನು ತೆಗೆದು ಹಾಕು.''

"ಪ್ರಯತ್ನಿಸುತ್ತೇನೆ.''

"ಪ್ರಯತ್ನಿಸಿ ಗೆಲ್ಲಬೇಕು."

"ಅಲ್ಲದೆ ನಿನ್ನ ಇರಸುವಿಕೆಯನ್ನೂ ಸ್ವಲ್ಪ ಬದಲಾಯಿಸಬೇಕು."

"ಅಂದರೆ?"

"ಹಳ್ಳಿ ಹುಡುಗಿಯ ರೀತಿಯಲ್ಲಿ ಉಟ್ಟಿರುವ ನಿನ್ನ ಸೀರೆ, ವೇಷಭೂಷಣ, ಮಾತುಕತೆ ಎಲ್ಲವನ್ನೂ ಬದಲಾಯಿಸಿಕೊಳ್ಳಬೇಕು."

"ಹೊಸ ರೀತಿಗಳು ನನಗೆ ತಿಳಿಯದಲ್ಲ?"

"ನಾನೆಲ್ಲ ತಿಳಿಸಿಕೊಡುತ್ತೇನೆ."

"ಹೀಗೆಯೇ ಇದ್ದರೆ ಆಗದೇ?"

"ಯಾಕೆ ಹೀಗಿರಬೇಕು, ಯಾರಂತೆ ಅಂದರೆ ಊರಂತೆ ಎಂಬಂತಿರಬೇಕು."

ನಂದಿತಾ ಕ್ರಮೇಣ ನನ್ನ ಮಾತುಕತೆಗಳನ್ನೂ ನಡೆನುಡಿಗಳನ್ನೂ ತಿದ್ದಿದಳು. ಪ್ರತಿದಿನ ನಾವಿಬ್ಬರೂ ಬೆಳಗಿನ ಜಾವದಲ್ಲಿಯೇ ಎದ್ದುಬಿಡುತ್ತಿದ್ದೆವು. ಹಾಗಾದರೆ ಬಾತ್ ರೂಮಿನಲ್ಲಿ ರಶ್ ಇರುತ್ತಿರಲಿಲ್ಲ. ದಂಡಿಯಾಗಿ ಬಿಸಿ ನೀರು ದೊರಕುತ್ತಿತ್ತು. ಹಾಗಾಗಿ ಬೇಗನೆ ಎದ್ದವರೆ ಸ್ನಾನ ಶೌಚಾದಿಗಳನ್ನು ಮುಗಿಸಿಯೇ ಕೋಣೆಗೆ ಬರುತ್ತಿದ್ದೆವು. ಅನಂತರ ವಿದ್ಯಾಭ್ಯಾಸದಲ್ಲಿ ತೊಡಗುತ್ತಿದ್ದವು. ಹಳ್ಳಿಯಲ್ಲಿ ಎಲ್ಲ ಕನ್ನಡದಲ್ಲಿ ಓದಿ ಬರೆದ ನನಗೆ ಈಗ ಇಂಗ್ಲಿಷ್‌ನಲ್ಲಿ ಎಲ್ಲವನ್ನೂ ಅರ್ಥ ಮಾಡಿಕೊಳ್ಳುವುದು ತುಸು ಕಷ್ಟವೆನಿಸಿತು. ಆ ಸಂದರ್ಭದಲ್ಲೂ ನಂದಿತಾ ಸಹಾಯ ಬೇಕಾದಷ್ಟು ಮಾಡಿದಳು.



ಕಠೋರವಾದ ನುಡಿ, ಸುಳ್ಳು, ಚಾಡಿ ಹೇಳುವುದು, ಅನುಪಯುಕ್ತ ಹರಟೆ ಇವು ಮಾತಿನಿಂದಾಗುವ ಪಾಪ ಕೃತ್ಯಗಳು.

— ಮನುಸ್ಮೃತಿ

ಸಂಯಮವಿಲ್ಲದೆ, ಮೈಮುರಿದು ದುಡಿಯದೆ ಯಾವ ಮಹತ್ಕಾರ್ಯವೂ ಸಾಧ್ಯವಿಲ್ಲ.

— ಸರ್ ಎಂ. ವಿಶ್ವೇಶ್ವರಯ್ಯ

ಸಂಗ್ರಹ : ಬಿ. ನಿರ್ಮಲ

ಒಂಬತ್ತು ಗಂಟೆಗೆ ಹಾಸ್ಟಲಿನಲ್ಲಿ ಊಟ ಮುಗಿಸಿ ಕಾಲೇಜಿಗೆ ಹೊರಡುತ್ತಿದ್ದೆವು. ಕಾಲೇಜಿನಲ್ಲೂ ಅಷ್ಟೆ. ತರಗತಿಗಳಿಗೆ ಹಾಜರಾಗಿ ಪಾಠ ಕೇಳಿ ಮುಂದೆ ಬರಬೇಕೆಂಬ ಆಸೆ ಹೊತ್ತವರು ಹಲವರಾದರೆ ಕಾಲೇಜಿನ ಜೀವನದಲ್ಲಿ ಮಜಾ ಮಾಡಲೆಂದೇ ಕಾಲೇಜಿಗೆ ಸೇರಿದವರೂ ಇದ್ದರು. ಅವರುಗಳು ಕಾಲೇಜಿಗೆ ಬರುತ್ತಿದ್ದರೇನೋ ನಿಜ. ಆದರೆ ತರಗತಿಗಳಿಗೆ ಸರಿಯಾಗಿ ಹಾಜರಾಗುತ್ತಿರಲಿಲ್ಲ. ಯಾವಾಗಲೂ ಕಾರಿಡಾರಿಲ್ಲಿ ಸುತ್ತಾಡುವುದು, ಹರಟುವುದು, ಕ್ಯಾಂಟೀನಿನಲ್ಲಿ ತಿಂಡಿ ತಿನ್ನುವುದು ಇದರಲ್ಲೇ ಕಾಲ ಕಳೆದು ಬಿಡುತ್ತಿದ್ದರು. ನಂದಿತಾ ನನ್ನ ವೇಷಭೂಷಣಗಳಲ್ಲಿ ಸಾಕಷ್ಟು ಬದಲಾವಣೆ ತರಲು ಬಯಸಿದಳು. ಅವಳು ನನ್ನೊಂದಿಗೆ ಹೇಳಿದಳು.

"ಸುಮತಿ, ಇಡೀ ತರಗತಿಯಲ್ಲಿ ನೀನೊಬ್ಬಳೇ ಸೀರೆ ಉಟ್ಟುಕೊಂಡು ಬರುವುದು

ಅದನ್ನು ಗಮನಿಸಿದ್ದೀಯಾ?''

"ಹೌದು.''

"ನೀನೇಕೆ ಎಲ್ಲರಂತೆ ಸ್ಕರ್ಟ್ ಅಥವಾ ಚೂಡಿದಾರ್ ತೊಡಬಾರದು?''

"ಖಂಡಿತ ಬೇಡ ನಂದಿತಾ.''

"ಯಾಕೇ?''

"ಈಗಷ್ಟೇ ನಾನು ಹಳ್ಳಿಯಿಂದ ಬಂದಿದ್ದೇನೆ. ಓದಿನಲ್ಲಿ ಮುಂದೆ ಬರಬೇಕೆಂಬ ಬಯಕೆ ನನಗಿದೆಯೇ ಹೊರತು, ವೇಷಭೂಷಣಗಳನ್ನು ಬದಲಾಯಿಸಿಕೊಳ್ಳುವ ಬಯಕೆಯಿಲ್ಲ.''

"ತರಗತಿಯಲ್ಲಿ ಎಲ್ಲರಂತೆ ನೀನ್ಯಾಕಿರಬಾರದು?''

"ಅದೆಲ್ಲ ಸಾಧ್ಯವಿಲ್ಲ ನಂದಿತಾ. ಹಳ್ಳಿಯಿಂದ ನನ್ನ ತಂದೆ, ಅಣ್ಣಂದಿರು ಬಂದರೆ ಏನೆಂದಾರು?''

"ತರಗತಿಯಲ್ಲಿ ಎಲ್ಲರಂತೆ ನಾನಿದ್ದೇನೆ ಎಂದು ಹೇಳು.''

"ನನ್ನ ಪರಿಸ್ಥಿತಿಯನ್ನೆಲ್ಲ ವಿವರಿಸಿದ್ದೇನೆ ನಿನಗೆ ನಂದಿತಾ. ನಾನು ಹಾಗೆಲ್ಲಾದರೂ ಮಾಡಿದರೆ ನನ್ನ ಅಪ್ಪ ನನ್ನನ್ನು ಹಳ್ಳಿಗೇ ಕರೆದುಕೊಂಡು ಹೊರಟುಹೋಗುತ್ತಾರಷ್ಟೆ.''

"ಹೋಗಲಿ ಮುಂದಿನ ವಾರ ಕಾಲೇಜಿನಲ್ಲಿ ಟ್ಯಾಲೆಂಟ್ಸ್ ಡೇ ಇದೆಯಲ್ಲ. ನಾಟಕ ಮಾಡೋಣವೆಂದಿದ್ದೇವೆ. ಅದರಲ್ಲಿ ಪಾತ್ರ ಮಾಡುತೀಯಾ?''

"ಇಲ್ಲ, ಇಲ್ಲ.''

"ಯಾಕೆ ಎಲ್ಲದಕ್ಕೂ ಇಷ್ಟೊಂದು ಹಿಂಜರಿಕೆ.''

"ನನಗೆ ಸದ್ಯಕ್ಕೆ ಯಾವುದೂ ಬೇಕಿಲ್ಲ ನಂದಿತಾ.''

"ಅಂದರೆ ನೀನು ಹಳೆಯದನ್ನು ಮರೆತಿಲ್ಲ, ಮನದಲ್ಲಿರಿಸಿಕೊಂಡು ಕೊರಗುತ್ತಿದ್ದೀ ಎಂದಾಯಿತು.''

"ನಾನು ಕೊರಗುತ್ತಲೇನೂ ಇಲ್ಲ, ಆದರೆ ಹಳೆಯ ಘಟನೆಯನ್ನು ಮರೆತಿಲ್ಲ ಅಷ್ಟೆ.''

"ಮರೆತುಬಿಡು ಎಂದು ಹೇಳಿದೆನಲ್ಲವೇ ನಾನು?''

"ಅದಷ್ಟು ಸುಲಭವೇ, ಕಾಲಕ್ರಮೇಣ ಮರೆಯಬಹುದು ಎಂದು ನನಗೂ ಅನಿಸುತ್ತಿದೆ.''

"ಆ ವೇಳೆಗೆ ನಿನ್ನ ಕಾಲೇಜಿನ ದಿನಗಳು ಮುಗಿದು ಹೋಗಿರಬಹುದು.''

"ಮುಗಿದು ಹೋಗಲಿ ಬಿಡು, ನಾನು ಕಾಲೇಜಿಗೆ ಸೇರಿರುವ ಉದ್ದೇಶವೇ ಬೇರೆ.''

"ಏನದು?''

"ವಿದ್ಯಾವಂತಳಾಗಿ ಸ್ವಾವಲಂಬಿಯಾಗಬೇಕು ಅಷ್ಟೆ.''

"ಅದರ ಪಾಡಿಗೆ ಅದು ಆಗೇ ಆಗುತ್ತದೆ. ಅದಕ್ಕಾಗಿ ಯಾಕಷ್ಟು ತಲೆ ಕೆಡಿಸಿಕೊಳ್ಳಬೇಕು.''

"ಅದರ ಪಾಡಿಗೆ ಅದಾಗುವುದಲ್ಲ, ಅದೇ ಮುಖ್ಯ, ಅದೇ ಗುರಿ ಬೇರೆಯದೆಲ್ಲ ಗೌಣ.''

"ಹಾಗೆಂದರೆ ಹೇಗೆ ಸುಮತಿ ಕಾಲೇಜಿನಲ್ಲಿ ಓದು ಅಂಗವಾದರೆ ಸಹಪಾಠಿಗಳೊಂದಿಗೆ, ಸಮವಯಸ್ಕರೊಂದಿಗೆ ಸ್ನೇಹ, ಸಲಿಗೆಯಿಂದ ಓಡಾಡಿಕೊಂಡಿರುವುದು ಮತ್ತೊಂದು ಅಂಗ.''



“ನನಗೆ ಅದೆಲ್ಲ ಬೇಕಿಲ್ಲಮ್ಮ. ಸದ್ಯಕ್ಕೆ ನೀನೊಬ್ಬಳು ಗೆಳತಿಯಾಗಿದ್ದೀ. ನಿನಗೂ ನನ್ನ ಸ್ನೇಹ ಬೇಸರವಾದರೆ ಬೇರೆ ರೂಮಿಗೆ ಹೋಗಬಹುದು. ನಾನಿರುವುದು ಮಾತ್ರ ಹೀಗೆಯೇ.''

“ಛೇ ಛೇ ನಿನ್ನೊಂದಿಗಿನ ಸ್ನೇಹ ಬೇಸರವೆಂದು ಹೇಳಿದೆನೇ, ಮನೆಯಲ್ಲಿ ಮಲತಾಯಿ ಕಾಟದಿಂದ ನೊಂದು ಬೆಂದಿದ್ದ ನನಗೆ, ನಿನ್ನಂಥ ಸರಳ ಸುಂದರ ಹುಡುಗಿಯ ಪರಿಚಯ, ಸ್ನೇಹವಾದದ್ದು ಅಮೃತ ಸೇಂಚನೆಯಾದಂತಾಗಿದೆ. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾಗಿರುವ ನಾನು ಹಗುರ ಮನದವಳಾಗಿರುವಂತೆ ನೀನೂ ಕಹಿ ಘಟನೆಗಳನ್ನು ಮರೆತು ಹಾಯಾಗಿರು ಎಂದಷ್ಟೇ ನನ್ನ ಆಸೆ.''

ನಂದಿತಾ ಎಷ್ಟು ಹೇಳಿದರೂ ಅವಳ ಇಚ್ಛೆಯಂತೆ ನನ್ನ ಇರಸರಿಕೆಯನ್ನಾಗಲೀ, ವೇಷಭೂಷಣವನ್ನಾಗಲೀ, ಮನೋಭಾವವನ್ನಾಗಲೀ ಬದಲಿಸಿಕೊಳ್ಳುವುದು ತನ್ನಿಂದ ಸಾಧ್ಯವಾಗಲಿಲ್ಲ. ತರಗತಿಯಲ್ಲಿನ ಉಳಿದ ಗೆಳತಿಯರು ಹೇಳುತ್ತಿದ್ದರು. ಸುಮತಿಯದು ಎಷ್ಟು ಸರಳವಾದು ಉಡುಗೆ ತೊಡುಗೆ. ಸಹಜವಾಗಿಯೇ ಸುಂದರವಾಗಿರುವವರಿಗೆ ಯಾವ ಬಾಹ್ಯಾಲಂಕಾರಗಳ ಅವಶ್ಯಕತೆಯೂ ಇರುವುದಿಲ್ಲ ಎಂಬುದಕ್ಕೆ ಉತ್ತಮ ನಿದರ್ಶನ ಸುಮತಿ. ಅಷ್ಟು ಹೊಗಳಿಕೆ ಸಾಕಾಗಿತ್ತು ತನಗೆ.

ಕಾಲೇಜಿನಿಂದ ಹಾಸ್ಟಲಿಗೆ ಹಿಂದಿರುಗಿ ಬರುವ ವೇಳೆಗೆ ಸಂಜೆಯಾಗುತ್ತಿತ್ತು. ಕಾಲೇಜಿನ ಕ್ಯಾಂಟೀನಿನಲ್ಲೇ ಮಧ್ಯಾಹ್ನ ತಿಂಡಿ ಏನಾದರೂ ತಿಂದಿರುತ್ತಿದ್ದೆವು. ಸಂಜೆ ಹಾಸ್ಟಲಿಗೆ ಬಂದಮೇಲೂ ತಿಂಡಿ, ಕಾಫಿ ಸಿಗುತ್ತಿತ್ತು. ಹಾಸ್ಟಲಿನಲ್ಲಿದ್ದ ಅಡುಗೆ ಭಟ್ಟರು ಒಳ್ಳೆಯವರೇ. ರುಚಿ ರುಚಿಯಾಗಿ ಹೊತ್ತಿಗೆ ಸರಿಯಾಗಿ ಬಿಸಿ ಬಿಸಿಯಾಗಿ ಮಾಡಿ ಬಡಿಸುತ್ತಿದ್ದರು. ಆದರೆ ಹಳ್ಳಿಯಲ್ಲಿದ್ದಾಗ ಇದ್ದಷ್ಟು ಹಸಿವೆ ಇಲ್ಲಿರಲಿಲ್ಲ. ಹಳ್ಳಿಯಲ್ಲಿ ಮನೆಯಿಂದ ಶಾಲೆಗೆ ಎಂಟು ಕಿಲೋ ಮೀಟರ್ ದೂರ ನಡೆಯಬೇಕಿತ್ತು. ಅವ್ವ ಬೈದಾದರೂ ಮನೆಯಲ್ಲಿ ನನ್ನಿಂದ ಕೆಲಸ ತೆಗೆಸುತ್ತಿದ್ದಳು. ಬೆಳೆಯುವ ವಯಸ್ಸು ಬೇರೆ. ಹಾಗಾಗಿ ಹೊಟ್ಟೆಯಾವಾಗಲೂ ಚುರುಗುಟ್ಟುತ್ತಿತ್ತು. ಇಲ್ಲಿ ಕೆಲಸವೇ ಇಲ್ಲ. ಸ್ನಾನ, ಊಟ, ತಿಂಡಿ, ಬಸ್ಸಿನಲ್ಲಿ ಓಡಾಟ, ಹೀಗಾಗಿ ತೂಕ ಸ್ವಲ್ಪ ಏರಿದುದರಲ್ಲಿ ಆಶ್ಚರ್ಯವೇನಿಲ್ಲ.

ಸಂಜೆಯ ವೇಳೆ ಹಾಸ್ಟಲಿನಲ್ಲಿ ನಡೆಯುವ ಸಾಮೂಹಿಕ ಪ್ರಾರ್ಥನೆಯಲ್ಲಿ ತಾನು ತಪ್ಪದೇ ಪಾಲ್ಗೊಳ್ಳುತ್ತಿದ್ದೆ. ಬಹಳ ಆನಂದಮಯವಾದ ಸಮಯ ಅದು. ಮೊದಲಿನಿಂದಲೂ ತನಗೆ ಪ್ರಾರ್ಥನೆ ಎಂದರೆ ಬಹಳ ಇಷ್ಟ. ಈಗಂತೂ ಅದು ಮನಸ್ಸಿಗೆ ಸಮಾಧಾನವನ್ನೂ, ಸಂತೋಷವನ್ನೂ ಶಾಂತಿಯನ್ನೂ ಕೊಡುವ ಸಾಧನವಾಗಿತ್ತು. ನಂದಿತಾ ಬಂದರೂ ಸರಿ, ಬಾರದಿದ್ದರೂ ಸರಿ ಒಂದು ಪ್ರಾರ್ಥನೆಯ ತರಗತಿಗೂ ತಪ್ಪದಂತೆ ಹಾಜರಾಗುತ್ತಿದ್ದ.

ಅಪ್ಪ, ರಾಜಣ್ಣ, ರಂಗಣ್ಣ ಯಾರಾದರೊಬ್ಬರು ತಪ್ಪದೆ ತಿಂಗಳಿಗೊಮ್ಮೆ ಬಂದು ಹೋಗುತ್ತಿದ್ದರು. ಬರುವಾಗ ಅವ್ವ ಪ್ರೀತಿಯಿಂದ ಮಾಡಿ ಕಳಿಸಿದ ತಿಂಡಿಗಳನ್ನೂ ತರುತ್ತಿದ್ದರು. ಅವರು ತಂದು ಕೊಡುತ್ತಿದ್ದ ದೊಡ್ಡ ಪೊಟ್ಟಣವನ್ನು ಕಂಡು ನಾನು ದಂಗಾಗಿ ಬಿಡುತ್ತಿದ್ದೆ.

“ಅಪ್ಪ ಇಲ್ಲಿ ಹಳ್ಳಿಯಲ್ಲಿದ್ದಾಗ ಹಸಿವಾಗುತ್ತಿದ್ದಂತೆ ಹಸಿವಾಗುವುದೇ ಇಲ್ಲ ಅಪ್ಪ. ಯಾವಾಗಲೂ ಕುಳಿತಿರುವುದು, ಬಸ್ಸಿನಲ್ಲಿ ಓಡಾಡುವುದು. ಈ ತಿಂಡಿಗಳನ್ನೆಲ್ಲ ಏಕೆ ತರುತ್ತೀ?''

"ನಿನ್ನ ಅವ್ವ ಪ್ರೀತಿಯಿಂದ ಕಳಿಸಿದ್ದಾಳೆ ಮಗು."

"ಅವ್ವನಿಗೆ ಹೇಳು. ನನಗೆ ಇದನ್ನೆಲ್ಲ ತಿನ್ನಲಾಗುವುದಿಲ್ಲ. ಹಾಸ್ಟಲಿನವರಿಗೆಲ್ಲ ಹಂಚಲು ಸಾಲುವುದಿಲ್ಲ."

"ಆಯಿತು. ನೀನು ಹೇಗಿದ್ದೀ ಮಗು?"

"ನೋಡಿದರೆ ತಿಳಿಯುವುದಿಲ್ಲವೇ ಅಪ್ಪ. ಹಳ್ಳಿಯಲ್ಲಿದ್ದುದಕ್ಕಿಂತ ನಾಲ್ಕು ಪೌಂಡ್ ತೂಕ ಏರಿದೆ."

"ಇಲ್ಲಿನ ವಾತಾವರಣ ನಿನಗೆ ಹೊಂದಿದೆಯೇ?"

"ಎಲ್ಲದಕ್ಕೂ ಹೊಂದಿಕೊಂಡಿದ್ದೇನಪ್ಪ. ನನ್ನ ರೂಂ ಮೇಟ್ ಆಗಿರುವ ಹುಡುಗಿ ನಂದಿತಾ ತುಂಬ ಒಳ್ಳೆಯವಳು."

"ಅವಳದು ಯಾವ ಊರು?"

"ಇದೇ ಊರು."

"ಇದೇ ಊರಿನವರೂ ಹಾಸ್ಟಲಿಗೆ ಸೇರುತ್ತಾರೆಯೇ?"



"ನಾನು ನನ್ನ ಹೆಂಡತಿಗೂ ಹೆದರಲಾರೆ, ಅವಳ ಬಾಯಿಗೂ ಹೆದರಲಾರ ಆದರೆ..."

"ಆದರೆ?"

"ನಾನು ಹೆದರುವುದು ಅವಳ ಲಟ್ಟಣಿಗೆಗೆ ಮಾತ್ರ."

– ಶೆಟ್ಟಿ ಮೇಲ್ಪಾಲ್

"ಬೇರೆ ಬೇರೆ ಕಾರಣಗಳಿಂದ ಹಾಸ್ಟಲಿಗೆ ಸೇರಿರುತ್ತಾರೆ."

"ಕಾಲೇಜಿನ ವಿದ್ಯಾಭ್ಯಾಸ ಹೇಗಿದೆ, ಕಠಿಣವೆನಿಸುತ್ತದೆಯೇ?"

"ಬಂದ ಒಂದೆರಡು ತಿಂಗಳು ಹಾಗೆನಿಸಿದ್ದು ನಿಜ. ಆದರೆ ಈಗ ಪರವಾಗಿಲ್ಲ ಪಾಸು ಮಾಡಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿದೆ."

"ರಜ ಬಂದೊಡನೆ ಹಳ್ಳಿಗೆ ಒಮ್ಮೆ ಬಂದುಹೋಗು ಮಗು. ನಿನ್ನ ಅವ್ವ ನಿನ್ನದೇ ಚಿಂತೆಯಲ್ಲಿರುತ್ತಾಳೆ."

"ಚಿಂತೆ ಯಾತಕೆ ಅಪ್ಪ, ನನಗೆ ಇಲ್ಲಿ ಎಲ್ಲ ಅನುಕೂಲಗಳಿವೆಯೆಂದು ತಿಳಿಸು."

"ನಾನು ಹೇಳಿದರೆ ಅವಳು ಅರ್ಥಮಾಡಿಕೊಳ್ಳುತ್ತಾಳೆಯೇ ಮಗು? ಒಮ್ಮೆ ನೀನು ಬಂದು ಮುಖ ತೋರಿಸಿದರೇ ಅವಳಿಗೆ ಸಮಾಧಾನವಾಗುವುದು."

"ಹೌದೇ?"

"ಹೌದು ಸುಮತಿ, ಅದಕ್ಕೆ ನೀನು ರಜ ಬಂದೊಡನೆ ಹಳ್ಳಿಗೆ ಬಾ."

"ಆಯಿತು."

"ರಜ ಯಾವಾಗ ಬರುತ್ತದೆ?"

"ಮುಂದಿನ ತಿಂಗಳು ಅರ್ಧ ವಾರ್ಷಿಕ ಪರೀಕ್ಷೆ ಇದೆ ಅಪ್ಪ. ಅದು ಮುಗಿದೊಡನೆ ರಜ."

"ಹಾಗೇನು?"

"ಹೌದು ಅಪ್ಪ, ನನ್ನ ರೂಂಮೇಟ್ ನಂದಿತಾ ಈವರೆಗೆ ಒಂದು ಹಳ್ಳಿಯನ್ನೂ ನೋಡಲಿಲ್ಲವಂತೆ."

"ಅದಕ್ಕೇನು ನೀನು ಬರುವಾಗ ಕರೆದುಕೊಂಡು ಬಾ."

"ನಾನು ಕರೆಯುವುದಕ್ಕಿಂತ ಮುಂಚಿತವಾಗಿ ಅವಳು ಹೊರಟು ನಿಂತಿದ್ದಾಳೆ."

"ಹಾಗಿದ್ದರೆ ಸರಿ."

"ಪರೀಕ್ಷೆ ಮುಗಿದೊಡನೆ ನಾನು, ನಂದಿತಾ ಹಳ್ಳಿಗೆ ಬರುತ್ತಿದ್ದೇವೆ ಎಂದು ಅವ್ವನಿಗೆ ತಿಳಿಸಿಬಿಡಪ್ಪ."

"ಆಯಿತು ಮಗು, ಎಷ್ಟು ದಿನ ರಜೆ ಇದೆ?"

"ಸರಿ ಸುಮಾರು ಒಂದು ತಿಂಗಳು."

"ಆಯಿತು ನಾನಿನ್ನು ಹೊರಡುತ್ತೇನೆ. ಮುಂದಿನ ತಿಂಗಳು ನಾನು ಬರುವುದಿಲ್ಲ, ನಿಮ್ಮಿಬ್ಬರ ಬರವನ್ನು ನಿರೀಕ್ಷಿಸುತ್ತ ಇರುತ್ತೇನೆ."

ಅಪ್ಪ ಹಳ್ಳಿಗೆ ಹಿಂದಿರುಗಿದರು. ಪರೀಕ್ಷೆಯ ತಯಾರಿ ನಡೆಸಿದೆವು ನಂದಿತಾ ಹಾಗೂ ನಾನು. ಈ ನಡುವೆ ನಂದಿತಾ ಕಾಲೇಜಿನ ಟ್ಯಾಲೆಂಟ್ಸ್ ಡೇ ಕಾರ್ಯಕ್ರಮದಲ್ಲಿ ಭಾಗವಹಿಸಿ ಚಿಕ್ಕದೊಂದು ಕಾರ್ಯಕ್ರಮ ನೀಡಿದಳು. ಅದು ಎಲ್ಲರ ಮೆಚ್ಚಿಗೆ ಗಳಿಸಿತು. ನಾನೂ ಮನಸಾರೆ ಅವಳನ್ನು ಹೊರಳಿದೆ.

"ನೀನು ಈದಿನ ಮಾಡಿದ ಏಕಪಾತ್ರಾಭಿನಯ ಬಹಳ ಸೊಗಸಾಗಿತ್ತು ನಂದಿತಾ."

"ನಿನ್ನ ಹೊಗಳಿಕೆ ನನಗೆ ಬೇಕಿಲ್ಲ."

"ಯಾಕೆ."

"ನೀನೂ ಟ್ಯಾಲೆಂಟ್ಸ್ ಡೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರೆ ನಾನೂ ನೀನೂ ಸೇರಿ ದ್ವಿಪಾತ್ರಾಭಿನಯ ಮಾಡಬಹುದಿತ್ತು."

"ಅದಾಗಲಿಲ್ಲವಲ್ಲ."

"ಅದಾಗಲಿಲ್ಲವಲ್ಲ ಅಲ್ಲ, ಅದಕ್ಕಾಗಿ ನೀನು ಪ್ರಯತ್ನಿಸಲೇ ಇಲ್ಲ."

"ನನ್ನ ಮನಸ್ಥಿತಿ ನಿನಗೆ ಈ ಮೊದಲೇ ತಿಳಿಸಿದ್ದೇನೆ."

"ಗೆಳತಿಯಾಗಿ ನಿನ್ನ ಮನಸ್ಥಿತಿ ಬದಲಾಯಿಸಲಿಲ್ಲವೆಂದ ಮೇಲೆ ನಾನೆಂತಾ ಗೆಳತಿ ಹೇಳು?"

"ಹಾಗೆಲ್ಲ ಹೇಳಬೇಡ ನಂದಿತಾ. ನಿನ್ನ ಉಪಕಾರವನ್ನು ನಾನು ಮರೆಯುವಂತೆಯೇ ಇಲ್ಲ."

"ಸ್ನೇಹಿತೆಯ ಸ್ನೇಹ ಎಂದುಕೊಳ್ಳದೆ, ಉಪಕಾರ ಎಂಬ ದೊಡ್ಡ ಪದವನ್ನುಪಯೋಗಿಸು ತ್ತೀಯಲ್ಲ."

"ಹೇಗೆ ಹೇಳಿದರೂ ಒಂದೇ ನನ್ನ ತಂದೆ ಬಂದಿದ್ದರು. ಮುಂದಿನ ತಿಂಗಳು ನಮ್ಮಿಬ್ಬರನ್ನೂ ಹಳ್ಳಿಗೆ ಬರಲು ಹೇಳಿದ್ದಾರೆ."

"ನಾನು ಬರುವುದಿಲ್ಲ."

"ಯಾಕೆ?"

"ಮುಂದಿನ ಕಾಲೇಜಿನ ಕಾರ್ಯಕ್ರಮದಲ್ಲಿ ಸ್ಟೇಜಿನ ಮೇಲೆ ನಿಂತು ಕೊನೆಯ ಪಕ್ಷ ಹಾಡನ್ನಾದರೂ ಹಾಡುತ್ತೀ ಎಂದರೆ ಮಾತ್ರ ನಾನು ಬರುತ್ತೇನೆ."

"ಆಯಿತು ಮಹರಾಯಿತಿ. ನೀನು ಜೊತೆಗಿದ್ದ ಮೇಲೆ ನನಗೆಲ್ಲಿಯ ಅಂಜಿಕೆ ಅಳುಕು, ಖಂಡಿತ ಹಾಡುತ್ತೇನೆ."

"ಹಾಗೆ ಬಾ ದಾರಿಗೆ."

"ಸದ್ಯಕ್ಕೆ ಕಾಲೇಜಿನ ಕಾರ್ಯಕ್ರಮ ಮುಗಿಯಿತಲ್ಲ. ಇನ್ನು ನಾವಿಬ್ಬರೂ ಪರೀಕ್ಷೆಯ ತಯಾರಿಯಲ್ಲಿ ತೊಡಗಬಹುದಲ್ಲ."

"ನಾಳೆ ಶನಿವಾರ, ನಾಡಿದ್ದು ಭಾನುವಾರ ನಾನು ಮನೆಗೆ ಹೋಗಿ ಬರುತ್ತೇನೆ ಅನಂತರ ಪರೀಕ್ಷೆಗೆ ಓದಲು ಪ್ರಾರಂಭಿಸೋಣ."

"ನೀನು ಹೋಗಿ ಬಾ. ಆ ವೇಳೆಗೆ ನಾನು ಮೆಲ್ಲಗೆ ಓದಲು ತೊಡಗಿರುತ್ತೇನೆ."

"ಹಾಗಾಗುವುದಿಲ್ಲ."

"ಆಯಿತು, ನೀನು ಬಂದಮೇಲೆ ಓದಲು ಪ್ರಾರಂಭಿಸೋಣ."

"ಅಲ್ಲಲ್ಲ, ಈ ಬಾರಿ ನೀನೂ ನನ್ನೊಂದಿಗೆ ಬರಬೇಕು?"

"ನಾನೇ, ದಯವಿಟ್ಟು ಬೇಡ."



ಜೀವಂತ

ಜೀವಂತ
ವಿದ್ದಾಗ
ಕುಡಿಯುವವು
ಎಳನೀರು
ಸತ್ತಮೇಲೆ
ಮಕ್ಕಳು
ಬಿಡುವರು
ಎಳ್ಳುನೀರು.

— ಕೆ. ಸುಬ್ರಹ್ಮಣ್ಯ ಭಟ್

"ನೋಡು ಮತ್ತೆ ಅದೇ ಕೀಳರಿಮೆ. ಅದನ್ನೇ ನಾನು ಬೇಡವೆನ್ನುವುದು."

"ಯಾಕೆ ಎಲ್ಲದಕ್ಕೂ ನನ್ನನ್ನು ಒತ್ತಾಯಿಸುತ್ತ ನಂದಿತಾ?"

"ನೀನೂ ನನ್ನ ಜೊತೆಗೊಮ್ಮೆ ಬಂದುನೋಡು. ನನ್ನ ತಂದೆ ಹೇಗಿದ್ದಾರೆ, ಮಲತಾಯಿ ಹೇಗಿದ್ದಾರೆ? ನನ್ನ ತಮ್ಮ ತಂಗಿ ಹೇಗಿದ್ದಾರೆ ಎಂದು? ಆಮೇಲೆ ನಿನಗೇ ಅರ್ಥವಾಗುತ್ತದೆ. ನಾನು ಮನೆ ಬಿಟ್ಟು ಹಾಸ್ಟಲಿಗೆ ಯಾಕೆ ಬಂದು ಸೇರಿದೆ ಎಂದು."

"ಬರಲೇಬೇಕೆ ಹಾಗಿದ್ದರೆ?"

"ನಾನು ನಿನ್ನ ಚೆಲುವಿನಹಳ್ಳಿಗೆ ಬರಬೇಕೋ ಬೇಡವೋ ಎಂದು ಹೇಳು."

"ಬರಬೇಕು."

"ಹಾಗಿದ್ದ ಮೇಲೆ ನೀನೂ ನನ್ನೊಂದಿಗೆ ಬರಬೇಕು."

"ಒಂದುವೇಳೆ ನಾನು ನಿಮ್ಮ ಮನೆಗೆ ಬಂದು ನನ್ನನ್ನು ಹುಡುಕಿಕೊಂಡು ಯಾರಾದರೂ ಬಂದರೆ ಹಳ್ಳಿಯಿಂದ."

"ವಾರ್ಡನ್ ಬಳಿ ನಮ್ಮ ಮನೆಯ ಅಡ್ರೆಸ್, ಫೋನ್ ನಂಬರ್ ಎಲ್ಲ ಇದೆ. ಯಾರಾದರೂ ಬಂದಲ್ಲಿ ಫೋನ್ ಮಾಡಿ ತಿಳಿಸುತ್ತಾರೆ ಬಂದುಬಿಡೋಣ ಆಯಿತಲ್ಲ.''

"ಸರಿ.''

ನಂದಿತಾಳೊಂದಿಗೆ ಅವಳ ಮನೆಗೆ ಬಂದಾಯಿತು. ನಂದಿತಾಳ ತಂದೆ ಹಾಗೂ ಚಿಕ್ಕಮ್ಮ ಆದರದಿಂದಲೇ ಸ್ವಾಗತಿಸಿದರು. "ನಿನ್ನಂಥ ಸರಳ ಸುಂದರ ಹುಡುಗಿಯ ಸ್ನೇಹ ನಂದಿತಾಳಿಗಾದುದು ನಮ್ಮ ಪುಣ್ಯ'' ಎಂದರು ನಂದಿತಾಳ ಚಿಕ್ಕಮ್ಮ. ನಾವು ಅಲ್ಲಿದ್ದ ಎರಡು ದಿನವೂ ಬಗೆಬಗೆಯ, ರುಚಿರುಚಿಯಾದ ತಿಂಡಿ, ಅಡುಗೆ ಮಾಡಿ ಬಡಿಸಿದರು ನಂದಿತಾಳ ಚಿಕ್ಕಮ್ಮ. ಇವಳ ತಮ್ಮ ತಂಗಿ ಕೂಡ ಹತ್ತಿರ ಕುಳಿತು ಸ್ನೇಹದಿಂದ ಮಾತುಕತೆಯಾಡಿದರು. ನಂದಿತಾಳ ತಂದೆಯಂತೂ ಸರಳ ಜೀವಿ. ಏನೊಂದೂ ಆಡಂಬರವಿಲ್ಲದ ಆತನದು ಉದಾತ್ತ ದೃಷ್ಟಿ. ಮನೆಯ ಸ್ಥಿತಿಗತಿ ಚೆನ್ನಾಗಿತ್ತು. ನೋಡಿದೊಡನೆ ಅನುಕೂಲಸ್ಥರ ಕುಟುಂಬ ಎಂದು ಯಾರಾದರೂ ಹೇಳಬಹುದಿತ್ತು. ನಂದಿತಾಳ ಮನೆಯವರದ್ದು ನೆಮ್ಮದಿಯ ಜೀವನ ಹೊಂದಿರುವ ಸುಂದರ ಕುಟುಂಬ ಎಂಬುದರಲ್ಲಿ ಸಂಶಯವೇ ಇರಲಿಲ್ಲ. ಹೀಗಿದ್ದೂ ನಂದಿತಾ ಹಾಸ್ಟಲಿಗೆ ಸೇರಿದುದೇಕೆ?

ನಂದಿತಾ ಸ್ನಾನಕ್ಕೆ ಹೋಗಿದ್ದಳು. ನನ್ನ ಮುಖದಲ್ಲಿದ್ದ ಪ್ರಶ್ನಾರ್ಥಕ ಚಿನ್ಹೆಯನ್ನು ಅರ್ಥ ಮಾಡಿಕೊಂಡ ಅವಳ ಚಿಕ್ಕಮ್ಮ ನುಡಿದರು. "ಅವಳು ಮನೆಯಲ್ಲಿದ್ದು ಓದಲು ಯಾವ ತೊಂದರೆಯೂ ಇಲ್ಲಮ್ಮ. ಆದರೆ ಅವಳದ್ದು ಚಿಕ್ಕಂದಿನಿಂದ ಸ್ವಲ್ಪ ಹಟದ ಸ್ವಭಾವ. ಅವಳ ತಂದೆ ಅವಳನ್ನು ಮಾತ್ರ ಪ್ರೀತಿಸಬೇಕು, ನನ್ನನ್ನು ಹಾಗೂ ನನ್ನ ಮಕ್ಕಳನ್ನು ಪ್ರೀತಿಸಬಾರದು ಎಂದವಳು ಅಪೇಕ್ಷಿಸುತ್ತಾಳೆ. ಇದರಿಂದಾಗಿ ಮನೆಯಲ್ಲಿ ಸದಾ ಕಲಹ, ಯಾರಿಗೂ ಮನಶಾಂತಿ ಇರಲಿಲ್ಲ. ಹಾಗಾಗಿ ಹಾಸ್ಟಲಿಗೆ ಸೇರುತ್ತೇನೆ ಎಂದಳು ಹಾಗೇ ಮಾಡು ಎಂದೆವು.''

"ಆದರೆ ನನಗೆ ಮಾತ್ರ ಅವಳು ತುಂಬ ಒಳ್ಳೆಯ ಗೆಳತಿಯಾಗಿದ್ದಾಳೆ, ಎಲ್ಲ ವಿಚಾರದಲ್ಲೂ ನನಗೆ ಸಹಾಯ ಮಾಡಿದ್ದಾಳೆ, ಅವಳು ಒಳ್ಳೆಯವಳೇ.''

"ಇರಬಹುದು, ಯಾಕೆಂದರೆ ನೀನು ಅವಳ ತಂದೆಯ ಪ್ರೇಮದಲ್ಲಿ ಪಾಲುದಾರಿಣಿಯಾಗಿಲ್ಲವಲ್ಲ.''

ಆದಿನ ರಾತ್ರಿ ಕೋಣೆಯಲ್ಲಿ ಮಲಗಿದಾಗ ನಂದಿತಾ ನುಡಿದಳು. "ನನ್ನ ತಾಯಿ ತೀರಿಕೊಂಡಾಗ ನಾನು ಏಳು, ಎಂಟು ವರುಷದ ಹುಡುಗಿಯಷ್ಟೆ. ಅದೂ ಅಲ್ಲದೆ ಮದುವೆಯಾಗಿ ಹಲವಾರು ದಿನಗಳು ಮಕ್ಕಳಿಲ್ಲದೆ ಹುಟ್ಟಿದವಳು ನಾನು. ಹಾಗಾಗಿ ಬಲು ಅಕ್ಕರೆಯಿಂದಲೇ ನನ್ನನ್ನು ಬೆಳೆಸಿದರು. ಆದರೆ ಹಠಾತ್ತನೆ ಟೈಫಾಯಿಡ್ ಜ್ವರದಿಂದ ಅಮ್ಮ ತೀರಿಕೊಂಡಾಗ ನಾನು, ಅಪ್ಪ ದಿಕ್ಕೆಟ್ಟೆವು. ಸ್ವಲ್ಪ ಕಾಲದನಂತರ ಅಪ್ಪ ಮರುಮದುವೆಯಾಗಿ ತಮ್ಮ ಹೆಂಡತಿಯ ಸ್ಥಾನವನ್ನು ಭರ್ತಿ ಮಾಡಿಕೊಂಡರು. ಆದರೆ ನನ್ನ ಮಾತೃಸ್ಥಾನ ಮಾತ್ರ ಬರಿದಾಗಿಯೇ ಉಳಿಯಿತು.''

"ಯಾಕೆ ನೀನು ಚಿಕ್ಕಮ್ಮನನ್ನೂ ತಾಯಿ ಎಂದೇ ಪ್ರೀತಿಸಬಾರದಿತ್ತೇ?''

"ಅದು ಹೇಗೆ ಸಾಧ್ಯ?''

"ಯಾಕೆ ಸಾಧ್ಯವಿಲ್ಲ?''

"ತಾಯಿ ತೀರಿಕೊಂಡಮೇಲೆ ತಂದೆಯ ಪರಿಪೂರ್ಣ ವಾತ್ಸಲ್ಯ ನನ್ನದಾಗಿತ್ತು. ಆದರೆ ಮಲತಾಯಿ ಬಂದಮೇಲೆ ಅದು ಕವಲೊಡೆಯಿತಲ್ಲವೇ?''

"ಹೌದು.''

"ಆದ್ದರಿಂದ ನಾನು ಮೊದಲಿನಿಂದಲೇ ದ್ವೇಷಿಸತೊಡಗಿದೆ.''

"ಅದೇ ನೀನು ಮಾಡಿದ ತಪ್ಪು. ನಿನ್ನ ತಾಯಿ ಇದ್ದಾಗ ನಿನ್ನ ತಂದೆ ನಿನ್ನ ತಾಯಿಯನ್ನು ಪ್ರೀತಿಸುತ್ತಿರಲಿಲ್ಲವೇ?''

"ಪ್ರೀತಿಸುತ್ತಿದ್ದರು. ಹಾಗೆಯೇ ನನ್ನನ್ನು ಕೂಡ ನೋಡಿಕೊಳ್ಳುತ್ತಿರಲಿಲ್ಲವೇ?''

"ಹಾಗೆಯೇ ನಿನ್ನ ಚಿಕ್ಕಮ್ಮನನ್ನು ಮದುವೆಯಾದ ಮೇಲೂ ನಿನ್ನನ್ನು ಕೂಡ ನೋಡಿಕೊಳ್ಳುತ್ತಿದ್ದಾರೆ.''

"ಚಿಕ್ಕಮ್ಮ ತಾಯಿ ಹೇಗಾದಳು ಸುಮತಿ?''

"ಚಿಕ್ಕಮ್ಮನೋ, ಅಮ್ಮನೋ ಮನೆಗೆ ಬಂದರೆ ಬಾ ಮಗು ಎಂದು ಕರೆದು ಆದರಿಸುವ ಒಂದು ವ್ಯಕ್ತಿ ಮನೆಯಲ್ಲಿದ್ದಾರಲ್ಲ. ಅದಕ್ಕೆ ಸಂತೋಷಪಡು.''



ನೋಡಿದ್ದರಿಂದಾಗಲಿ, ಮುಟ್ಟಿದ್ದರಿಂದಾಗಲಿ, ಕೇಳಿದ್ದರಿಂದಾಗಲಿ, ಮಾತನಾಡಿದ್ದರಿಂದಾಗಲಿ ಹೃದಯವು ಕರಗಿದರೆ ಅದೇ ಸ್ನೇಹ.
—ಮಹಾಭಾರತ

ಕಳೆದು ಹೋದ ವಿಷಯಕ್ಕೆ ಚಿಂತಿಸಬಾರದು, ಮುಂದೆ ಆಗಲಿರುವ ವಿಷಯಗಳ ಬಗ್ಗೆ ಚಿಂತಿಸಬಾರದು. ಬುದ್ಧಿವಂತರಾದವರು ಎದುರಿಗಿರುವ ವರ್ತಮಾನದಂತೆಯೇ ಕೆಲಸ ಮಾಡುತ್ತಾರೆ. —ಚಾಣಕ್ಯ

ಸಂಗ್ರಹ : ಎಂ. ಶಂಕರ ಮೂಲಿಮನಿ

"ಅದೇನೋ ನಿಜ.''

"ಒಂದು ವೇಳೆ ನಿನ್ನ ಅಪ್ಪ ಮರುಮದುವೆಯಾಗಲಿಲ್ಲ ಎಂದಿಟ್ಟುಕೋ. ಆಗ ನಿನ್ನ ಪಾಡೇನಾಗುತ್ತಿತ್ತು, ನಿನ್ನ ಅಪ್ಪನ ಪಾಡೇನಾಗುತ್ತಿತ್ತು ಯೋಚಿಸಿದ್ದೀಯಾ?''

"ಇಲ್ಲ.''

"ನಿನ್ನ ತಂದೆಯನ್ನು ಈ ಇಳಿವಯಸ್ಸಿನಲ್ಲಿ ನೋಡಿಕೊಳ್ಳುವವರ್‍ಯಾರಿದ್ದರು? ಒಂದು ವೇಳೆ ನೀನೇ ನೋಡಿಕೊಳ್ಳುತ್ತಿದ್ದೆ ಎಂದಿಟ್ಟುಕೋ. ಆಗ ನಿನ್ನ ವಿದ್ಯಾಭ್ಯಾಸ ಸುಲಲಿತವಾಗಿ ಸಾಗುತ್ತಿತ್ತೇ?''

"ಇಲ್ಲ.''

"ವಿದ್ಯಾಭ್ಯಾಸ ಮುಗಿಸಿ, ನೀನು ಮದುವೆಯಾಗಿ ಗಂಡನ ಮನೆಗೆ ಹೊರಟೆಯೆಂದರೆ ನಿನ್ನ ತಂದೆಯ ಸ್ಥಿತಿ ಏನಾಗುತ್ತಿತ್ತು?''

"ಹೌದಲ್ಲವೇ?''

"ಇಳಿಯ ವಯಸ್ಸಿನಲ್ಲಿ ನಿನ್ನ ತಂದೆಯ ಹೊಣೆಗಾರಿಕೆ ನಿನ್ನ ಮೇಲಿರುತ್ತಿತ್ತು.''

"ಒಂದು ವೇಳೆ ಆ ವ್ಯವಸ್ಥೆ ನಿನ್ನ ಗಂಡನಿಗೆ ಇಷ್ಟವಿಲ್ಲ ಎಂದಾದರೆ ನಿನ್ನ ಸಂಸಾರದಲ್ಲಿ ಬಿರುಕು.

"ಅದರ ಬದಲಿಗೆ ಅವರು ಈಗಿರುವಂತೆ ಹಾಯಾಗಿದ್ದಾರೆ. ನಿನ್ನನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೋ ಇಲ್ಲವೋ?''

"ನೋಡಿಕೊಳ್ಳುತ್ತಾರೆ.''

"ಅಂದಮೇಲೆ ನೀನವರನ್ನು ದ್ವೇಷಿಸಬಾರದು ಕೃತಜ್ಞಳಾಗಿರಬೇಕು.''

"ನೀನು ಇಷ್ಟೆಲ್ಲ ತಿಳಿವಳಿಕೆ ಹೊಂದಿರಬಹುದೆಂದು ನನಗನಿಸಿರಲೇ ಇಲ್ಲ ನೋಡು.''

"ನೀನೂ ಒಳ್ಳೆಯವಳೇ, ನಿನ್ನ ಚಿಕ್ಕಮ್ಮನೂ ಒಳ್ಳೆಯವಳೇ. ನಿಮ್ಮಿಬ್ಬರ ನಡುವೆ ಇರುವ ಮನೋ ಕಂದಕವನ್ನು ಪ್ರೇಮವೆಂಬ ಮಣ್ಣಿನಿಂದ ಮುಚ್ಚಿದರೆ ಇಬ್ಬರ ಮನಸ್ಸೂ ಹಗುರವಾಗುತ್ತದೆ. ನಿನ್ನ ಚಿಕ್ಕಮ್ಮ ನಿನಗೆ ಒಳ್ಳೆಯ ತಾಯಿಯಾಗುತ್ತಾಳೆ, ನೀನು ಅವಳಿಗೆ ಒಳ್ಳೆಯ ಮಗಳಾಗುತ್ತಿ.''

"ನೀನು ಬಂದು ನನ್ನ ಮನಸ್ಸಿನ ಕೆಸರನ್ನು ತೆಗೆದು ಹಾಕಿದೆ ಸುಮತಿ. ನಿನಗೆ ನಾನೆಷ್ಟು ಕೃತಜ್ಞಳಾಗಿದ್ದರೂ ಸಾಲದು.''

"ಇರಲಿ ಬಿಡು, ನಾಳೆ ಬೆಳಗ್ಗೆ ಹಾಸ್ಟಲಿಗೆ ಹಿಂದಿರುಗುವುದು ತಾನೇ?''

"ಹೌದು.''

ಹಾಸ್ಟಲಿಗೆ ಹಿಂದಿರುಗಿದ ಮೇಲೆ ಪರೀಕ್ಷೆಗಾಗಿ ಹೆಚ್ಚಿನ ಅಧ್ಯಯನ ನಡೆಸುವುದರಲ್ಲಿ ನಿರತಳಾದೆ ನಾನು.

"ಇದು ಅರ್ಧ ವಾರ್ಷಿಕ ಪರೀಕ್ಷೆ ತಾನೆ, ಇದಕ್ಕೇಕೆ ಹೆಚ್ಚಿನ ತಯಾರಿ?'' ಎಂದಳು ನಂದಿತಾ.

"ಹಾಗೆಂದರೆ ಹೇಗೆ, ಅರ್ಧ ವಾರ್ಷಿಕವೋ ಏನೋ ಅದೆಲ್ಲ ನನಗೆ ತಿಳಿಯದು. ಪರೀಕ್ಷೆಗಾಗಿ ಪೂರ್ಣ ಪ್ರಮಾಣದ ಅಧ್ಯಯನ ನಡೆಸುವುದೇ ನನ್ನ ಧ್ಯೇಯ.''

"ಎಷ್ಟೋ ಹುಡುಗರು ಈ ಅರ್ಧ ವಾರ್ಷಿಕ ಪರೀಕ್ಷೆಗೆ ಬರುವುದೇ ಇಲ್ಲ ಗೊತ್ತೇ?''

"ಬೇರೆಯವರ ವಿಷಯ ನಮಗೆ ಬೇಡ. ಈ ಹಾಸ್ಟಲಿನಲ್ಲಿ ಕುಳಿತು ಓದುವುದರ ಹೊರತು ನಮಗೆ ಬೇರಾವ ಕೆಲಸವಿದೆ?''

"ಎಲ್ಲರೂ ನಿನ್ನ ಹಾಗೆ ಯೋಚಿಸುವುದಿಲ್ಲ ಸುಮತಿ.''

"ಅಂದರೆ?''

"ಬಿಟ್ಟ ಬಾಣದ ಹಾಗೆ ಓದುವುದೊಂದೇ ಗುರಿ ಧ್ಯೇಯವಲ್ಲ.''

"ಮತ್ತೇನು ಮಾಡುತ್ತಾರೆ?''

"ಟೀವಿ ನೋಡುತ್ತಾರೆ, ಕಥೆ ಪುಸ್ತಕ ಓದುತ್ತಾರೆ, ಹೊರಗಡೆ ಸುತ್ತಾಡುತ್ತಾರೆ.''

"ಮತ್ತೆ ನೀನೇಕೆ ಹಾಗಿಲ್ಲ?''

"ಸಹವಾಸ ದೋಷ.''

"ಅಂದರೆ?''

"ನಿನ್ನಿಂದ ನಾನೂ ಈ ರೀತಿ ಸನ್ಯಾಸಿನಿಯ ಹಾಗಿದ್ದೇನೆ.''

"ಹಾಗಿದ್ದರೆ ನೀನು ವಾರ್ಡನ್‌ಗೆ ಹೇಳಿ ಬೇರೆ ರೂಮಿಗೆ ಹೋಗಬಹುದಲ್ಲ.''

"ಹೋಗಬಹುದು, ಆದರೆ..."

"ಆದರೆ ಏನು?"

"ಕಟ್ಟುವುದು ಕಷ್ಟ, ಉರುಳಿಸುವುದು ಸುಲಭ. ನಿನ್ನಿಂದ ನನಗೆ ಎಷ್ಟೋ ವಿಷಯಗಳಲ್ಲಿ ತರಬೇತಿಯಾಗಿದೆ. ಲಾಭವಾಗಿದೆ. ಬೇರೆ ರೂಮಿಗೆ ಹೋಗಿ ಜೋರು ಸ್ವಭಾವದ ಹುಡುಗಿಯರಿಂದ ಜಬರಿಸಿಕೊಂಡಿರುವುದಕ್ಕಿಂತ, ಇಲ್ಲ ನಿನ್ನ ಮೇಲೆ ಜೋರು ಮಾಡಿಕೊಂಡಿರುವುದೇ ಹಿತವಾಗಿದೆ."

"ಹಾಗಿದ್ದರೆ ಸಂತೋಷ."

"ನಂದಿತಾ ನಿನಗೂ ಹೊರಗೆ ಸುತ್ತುವ ಬಯಕೆ ಇದ್ದರೆ ಒಂದು ಕೆಲಸ ಮಾಡೋಣ."

"ಏನದು, ಈಗ ಹೇಗೂ ಸ್ಟಡಿ ಹಾಲಿಡೇಸ್ ಇದೆಯಲ್ಲ. ಬೆಳಗಿನಿಂದ ಸಂಜೆ ನಾಲ್ಕರವರೆಗೆ ಓದಿಕೊಳ್ಳೋಣ. ನಾಲ್ಕರಿಂದ ಏಳರವರೆಗೆ ಹೊರಗಡೆ ಸುತ್ತಾಡೋಣ. ನಾನು ಅಪ್ಪಟ ಹಳ್ಳಿಯ ಹುಡುಗಿ. ಬೆಂಗಳೂರಿನಲ್ಲಿ ಎಲ್ಲೆಲ್ಲಿ ಏನೇನಿದೆ ಎಂಬುದು ನನಗೆ ತಿಳಿಯದು. ಲಾಲ್‌ಬಾಗ್, ಕಬ್ಬನ್‌ಪಾರ್ಕ್, ವಿಧಾನಸೌಧ ಹೀಗೆ ಒಂದೊಂದು ದಿನ ಒಂದೊಂದು ಜಾಗ ನನಗೆ ತೋರಿಸು."



"ಚಲಿಸ್ತಿರೋ ಬಸ್ಸಿಂದ ಯಾವಾಗ ಕೆಳಗಿಳೀಬೇಕ್ರೀ?"

"ಆಸ್ಪತ್ರೆ ಕಣ್ಣಿಗೆ ಕಾಣಿಸೋಷ್ಟು ಹತ್ರ ಬಂದಾಗ್ರಿ."

— ಎಸ್. ಎಸ್. ರಘುಪತಿ

"ಪರವಾಗಿಲ್ಲವೇ, ಈ ಜೀವನಾಸಕ್ತಿ ನಿನಗೆಲ್ಲಿಂದ ಬಂತು?"

"ನೀನೇ ಹೇಳಿದೆಯಲ್ಲ ಸಹವಾಸದೋಷ ಎಂದು" ಎಂದಳು ಸುಮತಿ.

ಒಂದೆಡೆ ಪರೀಕ್ಷೆಗೆ ತಯಾರಿ ನಡೆಸಿದರೆ ಮತ್ತೊಂದೆಡೆ ಊರನ್ನೆಲ್ಲ ಸುತ್ತಿ ಸಂತೋಷಿಸಿದರು ಸುಮತಿ, ನಂದಿತಾ. ನಂದಿತಾಳಿಗೆ ಬೆಂಗಳೂರು ಹೊಸದೇನೂ ಅಲ್ಲ. ಅವಳು ಹುಟ್ಟಿ ಬೆಳೆದುದೆಲ್ಲ ಇಲ್ಲಿಯೇ ಆದುದರಿಂದ ಬೆಂಗಳೂರಿನಲ್ಲಿ ಅವಳು ನೋಡಿರದ ಜಾಗವೇ ಇಲ್ಲವೆನ್ನಬಹುದು. ಆದರೆ ಸುಮತಿಗೆ ಹಾಗಲ್ಲ. ಅವಳು ಹಳ್ಳಿಯಿಂದ ಪಟ್ಟಣಕ್ಕೆ ಬಂದುದು ಇದೇ ಮೊದಲು. ಬಂದಮೇಲು ಕಾಲೇಜಾಯಿತು, ಹಾಸ್ಟಲಾಯಿತು ಎಂಬಂತಿದ್ದಾಳೆ. ಈಗ ಲಾಲ್‌ಬಾಗ್, ಕಬ್ಬನ್ ಪಾರ್ಕ್, ವಿಧಾನಸೌಧ, ಎಂ. ಜಿ. ರೋಡ್, ಬ್ರಿಗೇಡ್ ರೋಡ್ ಎಲ್ಲವನ್ನು ಕಂಡುಬಂದಿದ್ದಾಳೆ ನಂದಿತಾಳೊಂದಿಗೆ. ಬೆಂಗಳೂರಿನ ಬೃಹತ್ತು, ಮಹತ್ತು ಎರಡೂ ಅರ್ಥವಾಗಿದೆ ಅವಳಿಗೀಗ.

ಸುಮತಿಗೆ ನಂದಿತಾಳೊಬ್ಬಳೇ ಗೆಳತಿ ಎಂದೇನೂ ಇಲ್ಲ. ಹಾಸ್ಟಲಿಗೆ ಕಾಲೇಜಿಗೆ ಎಂದು ಸೇರಿದ ಮೇಲೆ ಹಲವಾರು ಮಂದಿ ಗೆಳತಿಯರಿದ್ದಾರೆ. ಆದರೆ ಎಲ್ಲರೊಂದಿಗೆ ಅಂತರಂಗ ಬಿಚ್ಚಿ ಹರಟುವುದು ಸಾಧ್ಯವೇ? ಗೆಳತಿಯರೆಲ್ಲ ಆತ್ಮೀಯರಾಗಲೂ ಸಾಧ್ಯವೇ? ಎದುರಿಗೆ ಕಂಡಾಗ ಮೆಲುಮಾತು, ಹೂನಗೆ ಅಷ್ಟೆ. ಅದಕ್ಕಿಂತ ಹೆಚ್ಚಿನ ಸ್ನೇಹ ಬೆಳೆಸಲು ಸುಮತಿ ಮುಂದಾಗಿಲ್ಲ.

ಅದು ಅವಳಿಗೆ ಬೇಕೂ ಇಲ್ಲ. "ನೀನಾದರೋ ಏನೂ ಅರಿಯದ ಅಮಾಯಕಳು. ಹಾಸ್ಟಲಿನಲ್ಲಿ ಎಂತೆಂತಾ ಹುಡುಗಿಯರಿರುತ್ತಾರೆಂದು ನಿನಗೆ ಗೊತ್ತಿಲ್ಲ. ಈ ಮ್ಯಾಗ್‌ಸೈನ್‌ಗೆ ಚಂದದಾರಳಾಗು, ಆ ಸಂಘಕ್ಕೆ ಡೊನೇಶನ್ ಕೊಡು ಎಂದು ಕಾಡಿಸಿ, ಪೀಡಿಸುವವರಿಗೇನೂ ಕಡಿಮೆಯಿಲ್ಲ'' ಎಂದು ಮೊದಲೇ ಎಚ್ಚರಿಕೆ ಇತ್ತಿದ್ದಾಳೆ ನಂದಿತಾ. ಹಾಗಾಗಿ ಕಾಲೇಜಿನ ಹಾಸ್ಟಲಿನ ಇತರ ಹುಡುಗಿಯರೊಂದಿಗೆ ಮೂರಕ್ಕೆ ಹೆಚ್ಚಿಲ್ಲ, ಆರಕ್ಕೆ ಕಡಿಮೆಯಿಲ್ಲ ಎಂಬಂತೆ ಸ್ನೇಹದಿಂದ ಇದ್ದಾಳೆ ಸುಮತಿ.

ಪರೀಕ್ಷೆ ಮುಗಿದೊಡನೆ ಗೆಳತಿಯರಿಬ್ಬರೂ ಚೆಲುವಿನಹಳ್ಳಿಗೆ ಪ್ರಯಾಣ ಬೆಳೆಸಿದರು. ಸಿಟಿ ಬಸ್ಸಿನಲ್ಲಿ ಓಡಾಡಿದ್ದನೇ ಹೊರತು ಊರಿಂದೂರಿಗೆ ಬಸ್ಸಿನಲ್ಲಿ ಪ್ರಯಾಣ ಬೆಳೆಸುತ್ತಿರುವುದು ಇದೇ ಮೊದಲು ಎಂದಳು ನಂದಿತಾ.

ಬಸ್ಸಿನಿಂದ ಇಳಿದೊಡನೆ ಗಾಡಿ ಸಿದ್ಧವಾಗಿ ನಿಂತಿತ್ತು. ಇಂತಾ ದಿನ ಗೆಳತಿಯೊಂದಿಗೆ ಬರುತ್ತಿದ್ದೇನೆ ಎಂದು ಪತ್ರ ಬರೆದು ತಿಳಿಸಿದ್ದಳಷ್ಟೆ. ಎತ್ತಿನ ಗಾಡಿಯ ಪ್ರಯಾಣವನ್ನೂ, ಸುತ್ತಲ ಪ್ರಾಕೃತಿಕ ಚೆಲುವನ್ನೂ ಆಸ್ವಾದಿಸುತ್ತ ಬಹಳ ಸಂತೋಷಪಟ್ಟಳು ನಂದಿತಾ.

ಶಿವಮ್ಮ ಮಗಳ ಹಾದಿಯನ್ನು ಕಾಯುತ್ತ ಮುಂಬಾಗಿಲಲ್ಲಿ ನಿಂತಿದ್ದಳು. ನಂದಿತಾಳೊಂದಿಗೆ ಇಳಿದ ಸುಮತಿಯನ್ನು ಕಂಡ ಶಿವಮ್ಮ ಸಂತಸಪಟ್ಟಳು. ರಂಗಣ್ಣ, ರಾಜಣ್ಣ ಶಂಕರಪ್ಪ ಕೂಡ ಮನೆಯಲ್ಲಿಯೇ ಇದ್ದರು. ನಂದಿತಾಳನ್ನು ಮನೆಮಂದಿ ಎಲ್ಲರಿಗೂ ಪರಿಚಯಿಸಿದಳು ಸುಮತಿ. ಹಳ್ಳಿಮನೆ, ಅಂಗಳ, ದೊಡ್ಡ ಹಂಡೆ, ಬಚ್ಚಲು ಎಲ್ಲವನ್ನು ಕಂಡು ದಿಗ್ಭ್ರಮೆಗೊಂಡಳು ನಂದಿತಾ. ಹಳ್ಳಿಮನೆಯ ಹಿಂದೆ ಮುಂದಿದ್ದ ವಿಸ್ತಾರವಾದ ಜಾಗ, ಹೂ, ಹಣ್ಣು, ಕಾಯಿ ಸುರಿಸುವ ಗಿಡಮರಗಳು, ಬೇಕೆಂದರೂ ಎಲ್ಲಿ ಸಿಗಬೇಕು ಇಂತಾ ನೋಟ ಪಟ್ಟಣದಲ್ಲಿ? ತೋಟ, ಹೊಲ, ಗದ್ದೆಗಳ ಹಸಿರನ್ನೂ ಚೆಲುವನ್ನೂ ಕಂಡಂತೂ ದಂಗಾದಳು ನಂದಿತಾ. "ಮತ್ತೊಮ್ಮೆ ಯಾವಾಗಾದರೂ ನನ್ನ ತಂದೆ, ಚಿಕ್ಕಮ್ಮ ತಮ್ಮ ತಂಗಿಯನ್ನೂ ಕರೆತರುತ್ತೇನೆ'' ಎಂದಳು ನಂದಿತಾ.

"ಧಾರಾಳವಾಗಿ ಕರೆದುಕೊಂಡು ಬಾ ಮಗು'' ಎಂದರು ಶಂಕರಪ್ಪ.

ರಜ ಇನ್ನೂ ತಿಂಗಳದಿನ ಇದ್ದರೂ ಒಂದು ವಾರದ ದಿನ ಹಳ್ಳಿಯಲ್ಲಿದ್ದು ಹೊರಟು ನಿಂತಳು ನಂದಿತಾ. "ಈಗಲೇ ಯಾಕೆ ಹೋಗುತ್ತೀಯವ್ವಾ. ರಜ ಮುಗಿದ ಮೇಲೆ ಇಬ್ಬರೂ ಒಟ್ಟಿಗೆ ಹೊರಡುವಿರಂತೆ'' ಎಂದರು ಶಂಕರಪ್ಪ.

"ಹೌದು ನಂದಿತಾ, ಇಬ್ಬರೂ ಒಟ್ಟಿಗೆ ಬಂದಿದ್ದೇವೆ. ಒಟ್ಟಿಗೆ ಹೋಗೋಣ ಇಲ್ಲೇ ಇದ್ದು ಬಿಡು'' ಎಂದಳು ಸುಮತಿ.

"ಇಲ್ಲಿರಲು ನನಗೇನೋ ಆಸೆಯಿದೆ. ಅಷ್ಟು ದಿನ ನಾನಿಲ್ಲುಳಿದರೆ ನನ್ನ ತಂದೆ ಹಾಗೂ ಚಿಕ್ಕಮ್ಮ ತಪ್ಪು ತಿಳಿಯುತ್ತಾರೆ. ಅದಕ್ಕೇಕೆ ಆಸ್ಪದ ಕೊಡಬೇಕು. ಇನ್ನೂ ಒಂದು ವಾರ ನಾನಿಲ್ಲಿದ್ದು ಮನೆಗೆ ಹೋಗುತ್ತೇನೆ. ನೀನೂ ರಜ ಮುಗಿಸಿಕೊಂಡು ಬಾ. ಅನಂತರ ನಾವಿಬ್ಬರು ಹಾಸ್ಟಲಿನಲ್ಲಿ ನಮ್ಮ ವಿದ್ಯಾರ್ಥಿ ಜೀವನ ಮುಂದುವರಿಸೋಣ'' ಎಂದಳು ನಂದಿತಾ.

"ಹಾಗೇ ಮಾಡು. ನೀನು ರಜೆಯಲ್ಲಿ ಕೆಲವು ದಿನಗಳ ಮಟ್ಟಿಗಾದರೂ ನಿನ್ನ

ಮನೆಯವರೊಂದಿಗೆ ಕಾಲ ಕಳೆಯುತ್ತೇನೆ ಎಂದರೆ ಅದಕ್ಕೇಕೆ ಅಡ್ಡಿಪಡಿಸಲಿ ನಾನು.''

ನಂದಿತಾ ತಮ್ಮ ತಂಗಿಯರೊಂದಿಗೆ ಸ್ವಲ್ಪವಾದರೂ ಹೊಂದಿಕೊಂಡು ಬಾಳಲಿ ಎಂಬುದು ಸುಮತಿಯ ಉದ್ದೇಶವಾಗಿತ್ತು.

ಶಿವಮ್ಮ ಮಗಳು ಹಾಗೂ ಅವಳ ಗೆಳತಿಗಾಗಿ ವಿಶೇಷ ತಿಂಡಿ ತಿನಿಸುಗಳನ್ನು ತಯಾರಿಸಿದಳು. ಹಾಲುಬಾಯಿ, ಕಾಯಿ ಕಡುಬು, ಉದ್ದಿನ ಕಡುಬುಗಳ ರುಚಿಯನ್ನು ಬಹುವಾಗಿ ಮೆಚ್ಚಿಕೊಂಡಳು ನಂದಿತಾ. ಹಳ್ಳಿಗರಂತೆ ರಾಗಿ ಮುದ್ದೆ ತಿನ್ನುವುದನ್ನೂ ಅಭ್ಯಾಸ ಮಾಡಿಕೊಂಡಳು.



ವಿರಹ

ಕಥಾ ಕಾಲಕ್ಷೇಪದಲ್ಲಿ ದಾಸರು
ರಾಮನ ವಿರಹದಲ್ಲೇ
ವೃಥಾ ಕಾಲಕ್ಷೇಪ ಮಾಡುತ್ತಿದ್ದುದು
ಬೇಸರವಾಗಿ
ಮುದ್ದು ಮಡದಿಯಿಲ್ಲದ
ಮಂಚದಲ್ಲಿ
ಮಲಗಿದಾಗಲೇ
ಅರ್ಥವಾದದ್ದು ರಾಮನ ವಿರಹ.

– ಬಿ. ಕೆ. ಸಂಪತ್‌ಕುಮಾರ್

ವಾರ ಕಳೆದು ನಂದಿತಾ ಹೊರಟು ನಿಂತಾಗ ಶಂಕರಪ್ಪ ಕಿತ್ತಲೆಹಣ್ಣು, ಸಪೋಟ ಹಣ್ಣು, ಕಾಫಿ ಬೀಜ, ಅಕ್ಕಿ, ತೆಂಗಿನಕಾಯಿ ಎಲ್ಲವನ್ನೂ ತುಂಬಿ ಕಳುಹಿಸಿದರು. ''ಆಗಾಗ ಮಗಳೊಂದಿಗೆ ಬರುತ್ತಿರಮ್ಮ. ಬೆಂಗಳೂರಿನಲ್ಲಿ ಅವಳ ಯೋಗಕ್ಷೇಮದ ಹೊಣೆಯನ್ನೆಲ್ಲ ನೀನೇ ಹೊತ್ತಿದ್ದೀಯಂತೆ'' ಎಂದರು.

''ನನ್ನ ಯೋಗಕ್ಷೇಮದ ಹೊಣೆಯನ್ನು ಅವಳು ಹೊತ್ತಿದ್ದಾಳೆ. ಅವಳ ಯೋಗಕ್ಷೇಮದ ಹೊಣೆಯನ್ನು ನಾನು ಹೊತ್ತಿದ್ದೇನೆ.''

''ಪರಸ್ಪರರು ಹಾಗೇ ಹೊಂದಿಕೊಂಡು ಚೆನ್ನಾಗಿರಿ'' ಎಂದು ಹರಸಿದಳು ಹಾರೈಸಿದಳು ಶಿವಮ್ಮ.

ನಂದಿತಾಳನ್ನು ಬಸ್ಸಿಗೆ ಹತ್ತಿಸಿ, ಶಂಕರಪ್ಪ ಮಗಳೊಂದಿಗೆ ಮನೆಗೆ ಹಿಂದಿರುಗಿದರು. ಶಿವಮ್ಮ ಮಗಳನ್ನು ದಿಟ್ಟಿಸಿ ನೋಡಿದರು. ಸುಮತಿ ತಂದೆಯ ಮಗ್ಗುಲಲ್ಲಿ ಕುಳಿತು ಊಟ ಮಾಡುತ್ತಿದ್ದಳು. ಹಾಸ್ಟಲಿಗೆ ಸೇರಿ ಮಗಳು ಎಷ್ಟು ಬಡವಾಗಿದ್ದಾಳೋ ಎಂಬ ಚಿಂತೆ ಅವರನ್ನು ಕಾಡಿಸುತ್ತಿತ್ತು. ಈಗ ಮಗಳ ಮುಖ ಕಂಡಮೇಲೆ ಹಾಯೆನಿಸಿತು. ಸುಮತಿ ಮೈಕೈ ತುಂಬಿಕೊಂಡು ಇಲ್ಲಿದ್ದುದಕ್ಕಿಂತಲೂ ಅಂದವಾಗಿದ್ದಾಳೆ. ಅವಳೇ ಹೇಳುವ ಹಾಗೆ ಅಲ್ಲಿ ಕೆಲಸ, ಕಾರ್ಯ ಏನಿಲ್ಲವಲ್ಲ. ಮುಖದಲ್ಲಿ ಚಿಂತೆಯ ಲವಲೇಶವೂ ಇಲ್ಲ. ಕಣ್ಣುಗಳು ವಿದ್ಯಾಕಾಂತಿಯಿಂದ ಹೊಳೆಯುತ್ತಿದೆ. ತುಂಬ ಓದಬೇಕು ಎಂದು ಚಿಕ್ಕಂದಿನಿಂದಲೂ ಆಸೆಪಡುತ್ತಿದ್ದಳು. ನನ್ನೊಡನೆ ವಾಗ್ವಾದ ಹೂಡುತ್ತಿದ್ದಳು. ಮದುವೆ, ಸಂಸಾರ ಸುಖದ ಯೋಗ ಅವಳ ಹಣೆಯಲ್ಲಿ ಬರೆದಿಲ್ಲ. ಹೀಗಾದರೂ ಓದಿಕೊಂಡಿರಲಿ, ದುರದೃಷ್ಟದ ಹುಡುಗಿ ಎಂದುಕೊಂಡಳು ಶಿವಮ್ಮ.

ಸುಮತಿ ಹಳ್ಳಿಗೆ ಬಂದು ತಿಂಗಳ ದಿನವಾಗುತ್ತ ಬಂತು. ಈಗವಳು ತಾಯಿಯ ಕೈಯಲ್ಲಿ ಹೇಳಿಸಿಕೊಳ್ಳದೆಯೇ ಮನೆಗೆಲಸದಲ್ಲಿ ಅವರಿಗೆ ನೆರವು ನೀಡುತ್ತಿದ್ದಾಳೆ. ಬಿಡುವಿನ ವೇಳೆಯಲ್ಲಿ ಸ್ವಲ್ಪ ಓದಿಕೊಳ್ಳುತ್ತಾಳೆ. ತಂದೆಯ ಜೊತೆ ಹೊಲ, ತೋಟ, ಗದ್ದೆಯಲ್ಲಿ ತಿರುಗಾಡಿಕೊಂಡು ಬರುತ್ತಾಳೆ. ಆದಿನ ಸುಮತಿ ತೋಟಕ್ಕೆ ಬಂದಾಗ ರಾಜಣ್ಣ, ಶಂಕರಪ್ಪ ಕಾಫಿಯ ಗಿಡಗಳಿಗೆ ಔಷಧಿ ಹೊಡೆಸುತ್ತಿದ್ದರು. "ಆದಿನ ಕಾಫಿಯ ಗಿಡಗಳಿಗೆ ಔಷಧಿ ಹೊಡೆಸುವ ವಿಚಾರ ನಿನಗೆ ಹೇಳುವುದೇ ಮರೆತು ಹೋಯಿತು. ನೀನೇಕೆ ಈ ದಿನ ಇಲ್ಲಿಗೆ ಬಂದೆ ಮಗು?''

"ನಾನೀಗಲೇ ಹೊರಟು ಬಿಡುತ್ತೇನಪ್ಪ.''

"ಹಾಗೇ ಮಾಡು, ಹೆಣ್ಣಾಳನ್ನೇನಾದರೂ ಜೊತೆಗೆ ಕಳುಹಿಸಲೇ?''

"ಬೇಡ ನಾನು ಹೋಗುತ್ತೇನೆ, ಎಷ್ಟು ಮಹಾ ದೂರ?'' ಎಂದವಳು ಹಾದಿಯಲ್ಲಿ ಬರುತ್ತ ಶಾಲಾ ಮಾಸ್ತರನ್ನೇಕೆ ಒಮ್ಮೆ ಕಂಡು ಹೋಗಬಾರದು ಎನಿಸಿತು. ಅವರ ಮನೆಯತ್ತ ಹೆಜ್ಜೆ ಹಾಕಿದೆ.

"ನಮಸ್ಕಾರ ಸಾರ್'' ಎಂದೆ.

"ಯಾರು ಸುಮತಿಯೇ?''

"ಹೌದು ಸಾರ್.''

"ಬಾಮ್ಮ ಕುಳಿತುಕೋ ಯಾವಾಗ ಬಂದೆ?''

"ನಾನು ಬೆಂಗಳೂರಿನಿಂದ ಬಂದು ತಿಂಗಳ ದಿನವಾಯಿತು ಸಾರ್.''

"ಹೇಗೆ ಸಾಗಿದೆ ನಿನ್ನ ವಿದ್ಯಾಭ್ಯಾಸ?''

"ಯಾವೊಂದು ಅಡಚಣೆ ಇಲ್ಲದೆ ಮುಂದುವರಿದಿದೆ ಸಾರ್.''

"ನಾನೇ ನಿನ್ನ ತಂದೆಗೆ ಹೇಳಿದ್ದು, ಮಗಳು ಬುದ್ಧಿವಂತೆ ಮುಂದಕ್ಕೆ ಓದಿಸಿ ಎಂದು.''

"ನನಗೆ ಎಲ್ಲ ವಿಚಾರ ತಿಳಿಯಿತು ಸಾರ್. ನನ್ನ ಭಾಗಕ್ಕೆ ನೀವು ದೇವರಾಗಿ ಬಂದಿರಿ. ಕತ್ತಲಾಗಿದ್ದ ನನ್ನ ಬಾಳಿಗೆ ಬೆಳಕಾಗಿ ಬಂದಿರಿ. ಅದಕ್ಕೆ ನಿಮಗೆ ಕೃತಜ್ಞತೆ ಸಲ್ಲಿಸಲೆಂದೇ ಬಂದೆ ನಾನು.''

"ಈಗ ನೀನು ಪಿ.ಯು.ಸಿ. ಅಲ್ಲವೇ ಓದುತ್ತಿರುವುದು. ಅದು ಒಂದು ವರ್ಷವೋ ಎರಡು ವರ್ಷವೋ?''

"ಮೊದಲೆಲ್ಲ ಒಂದೇ ವರ್ಷದ ಕೋರ್ಸ್ ಆಗಿತ್ತಂತೆ ಸಾರ್, ಈಗ ಎರಡು ವರ್ಷ ಮಾಡಿದ್ದಾರೆ.''

"ಅಂದರೆ ಈ ವರ್ಷ ಕಳೆದ ಮೇಲೆ ಮತ್ತೊಂದು ವರ್ಷ ಪಿ.ಯು.ಸಿ ಓದಬೇಕು.''

"ಹೌದು, ಸಾರ್.''

"ಆಮೇಲೆ ಏನು ಓದಬೇಕೆಂದು ಮಾಡಿದ್ದೀಯಾ?''

"ಅದಿನ್ನೂ ತಿಳಿದಿಲ್ಲ ಸಾರ್.''

"ಈಗಲೇ ನಿರ್ಧರಿಸಬೇಕು. ಮುಂದೆ ಏನು ಓದಬೇಕೆಂದು ನಿರ್ಧರಿಸಿದರೆ ಈಗಿನ ಓದಿಗೆ ಹೆಚ್ಚಿನ ಬಲ ಬರುವುದು.''

"ಯೋಚಿಸುತ್ತೇನೆ ಸಾರ್."

"ಯೋಚಿಸುವುದೇನಿದೆ, ನೀನು ಒಳ್ಳೆಯ ಡಾಕ್ಟರಾಗು."

"ಅದು ಸಾಧ್ಯವೇ?"

"ಯಾಕೆ ಸಾಧ್ಯವಿಲ್ಲ, ಪ್ರಯತ್ನಪಟ್ಟರೆ ಸಾಧ್ಯವಿಲ್ಲ ಎಂಬುದು ಯಾವುದೂ ಇಲ್ಲ. ಅದಕ್ಕೆಲ್ಲ ಈಗಿನಿಂದಲೇ ಮಾನಸಿಕ ತಯಾರಿ ಮಾಡಿಕೊಳ್ಳಬೇಕು. ಪಿ.ಯು.ಸಿ.ನಲ್ಲಿ ಒಳ್ಳೆಯ ನಂಬರ್ ಬಂದರೆ ಮಾತ್ರ ಮೆಡಿಕಲ್‌ಗೆ ಸೀಟು ದೊರಕುತ್ತದೆ."

"ಪ್ರಯತ್ನಿಸುತ್ತೇನೆ ಸಾರ್."

"ಬರಿಯ ಪ್ರಯತ್ನವಲ್ಲ. ಇದನ್ನು ಸಾಧಿಸಿಯೇ ಸಾಧಿಸುತ್ತೇನೆ ಎಂದು ಮನದಲ್ಲಿ ಸಂಕಲ್ಪ ಮಾಡು, ಅನಂತರ ಪ್ರಯತ್ನ ಮಾಡು. ಒಳ್ಳೆಯ ಡಾಕ್ಟರನಾಗು. ಅಷ್ಟೇ ಅಲ್ಲ ಡಾಕ್ಟರಳಾಗಿ ಈ ಹಳ್ಳಿ ಎಂದೇ ನಾನು ಹೇಳುವುದಿಲ್ಲ, ಯಾವುದಾದರೊಂದು ಹಳ್ಳಿಯಲ್ಲಿ ಡಾಕ್ಟರಾಗಿ ಸೇವೆ ಮಾಡು. ಪಟ್ಟಣಗಳಲ್ಲಿ ಬೀದಿಗೊಬ್ಬರು ಡಾಕ್ಟರು . ಸಿಗುತ್ತಾರೆ. ಆದರೆ ಹಳ್ಳಿಗಳಿಗೆ ವೈದ್ಯಕೀಯ ಸೌಕರ್ಯವೇ ದುರ್ಲಭ. ಈಗ ನಮ್ಮ ಹಳ್ಳಿಯನ್ನೇ ತೆಗೆದುಕೋ. ಇಲ್ಲಿ ಡಾಕ್ಟರು ಇದ್ದಾರೆಯೇ? ಅನಾರೋಗ್ಯ ಎಂದರೆ ಪಟ್ಟಣಕ್ಕೆ ಓಡಬೇಕು. ನಿನ್ನ ಗಂಡ ನಂಜಪ್ಪ ಸತ್ತದ್ದು ಸಮಯಕ್ಕೆ ಸರಿಯಾಗಿ ವೈದ್ಯಕೀಯ ಉಪಚಾರವಿಲ್ಲದೆ ತಾನೆ? ಒಳ್ಳೆಯ ಡಾಕ್ಟರಾಗು, ನಿನ್ನ ವಿದ್ಯೆ, ಬದುಕು ಸಾರ್ಥಕವಾಗುತ್ತದೆ."



ಯಾವ ಮನುಷ್ಯ ಎಂದೂ ಸೋತಿಲ್ಲವೋ ಎಂದೂ ಕಷ್ಟವನ್ನು ಕಂಡಿಲ್ಲವೋ ಅವನನ್ನು ನಂಬಬೇಡ, ಅವನ ಭಾಗ್ಯವನ್ನು ಅನುಸರಿಸಬೇಡ, ಅವನ ಬಾವುಟದ ಕೆಳಗೆ ಎಂದೂ ಹೋರಾಡಲು ಹೋಗಬೇಡ.

– ಶ್ರೀ ಅರವಿಂದ

ಗುರುವಾದವನು ಇನ್ನೂ ಕಲಿಯುತ್ತಲೇ ಇರುತ್ತಾನೆ, ಸ್ವತಾ ಉರಿಯುತ್ತಿದ್ದರೇನೇ ದೀಪ ಇನ್ನೊಂದನ್ನು ಹೊತ್ತಿಸುತ್ತದೆ.

– ರವೀಂದ್ರನಾಥ ಠಾಕೂರ

ಸಂಗ್ರಹ : ರಾಮು ಡಿ. ಮೂಲಿಮನಿ

"ಹೌದು ಸಾರ್ ನಿಮ್ಮ ಮಾತು ನಿಜ" ಎಂದು ಹೇಳಿವಾಗ ಕಣ್ಣುತುಂಬಿ ಬಂತು.

"ಹೋಗಿ ಬಾಮ್ಮ ನಮ್ಮೆಲ್ಲರ ಆಶೀರ್ವಾದ ನಿನಗೆ ಇದೆ" ಎಂದರು ಮಾಸ್ತರು. ಮಾಸ್ತರರ ಹೆಂಡತಿ ಕೊಟ್ಟ ಬೇಲದ ಹಣ್ಣಿನ ಪಾನಕ ಕುಡಿದು ಅವರ ಮನೆಯಿಂದ ಹೊರಬಿದ್ದೆ. ಮನೆಗೆ ಹಿಂದಿರುಗುವಾಗ ಅವರಾಡಿದ ಮಾತುಗಳು ತಲೆಯಲ್ಲಿ ರಿಂಗುಣಿಸುತ್ತಿದ್ದವು. ಹೌದು ಮಾಸ್ತರು ಹೇಳಿದ ಹಾಗೆ ತಾನು ಡಾಕ್ಟರೇ ಆಗಬೇಕು. ಪ್ರಯತ್ನದಿಂದ ಯಾವುದು ತಾನೆ ಸಿದ್ಧಿಸುವುದಿಲ್ಲ. ತನಗಾದರೂ ಬೇರೇನು ಕೆಲಸವಿದೆ? ಚೆನ್ನಾಗಿ ಓದಿ ಒಳ್ಳೆಯ ಡಾಕ್ಟರಾಗಬೇಕು. ಮಾಸ್ತರರು ಹೇಳಿದ ಹಾಗೆ ನನ್ನ ವಿದ್ಯೆ, ಬದುಕು ಎರಡನ್ನೂ ಸಾರ್ಥಕಪಡಿಸಿಕೊಳ್ಳಬೇಕು."

ಮನೆಯ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಮನದ ನಿರ್ಧಾರ ಗಟ್ಟಿಯಾಗುತ್ತ ಹೋಯಿತು.

ಇನ್ನೇನು ರಜ ಮುಗಿಯುತ್ತ ಬಂತು ಎನ್ನುವಾಗ ನನ್ನ ಮನಸ್ಸಿಗೆ ಮತ್ತಷ್ಟು ಹುಮ್ಮಸ್ಸು ಬಂತು. "ಅಪ್ಪ ನನ್ನನ್ನು ಬಿಟ್ಟು ಬರಲೆಂದೇನೂ ನೀವು ಹಾಸ್ಟಲವರೆಗೆ ಬರಬೇಕಿಲ್ಲ. ಇಲ್ಲಿ ಬಸ್ಸು ಹತ್ತಿಸಿದರೆ ಸಾಕು, ನಾನಲ್ಲಿ ಬಸ್‌ಸ್ಟಾಂಡಿನಲ್ಲಿಳಿದು ಹಾಸ್ಟಲಿಗೆ ಹೋಗುತ್ತೇನೆ.''

"ನೀನು ಒಬ್ಬಳೇ ಹೋಗಬೇಕಲ್ಲ ಮಗು?''

"ಹೋಗುತ್ತೇನೆ ಅಪ್ಪ, ಈಗ ನಂದಿತಾ ಹೋಗಲಿಲ್ಲವೇ ಒಬ್ಬಳೇ?''

"ಆ ಹುಡುಗಿಗೆ ಚೆನ್ನಾಗಿ ಅಭ್ಯಾಸವಿದೆ ಓಡಾಡಿ.''

"ನನಗೂ ಬೆಂಗಳೂರೆಲ್ಲ ತೋರಿಸಿದ್ದಾಳೆ. ಅಪ್ಪ, ನೀವೇನೂ ಗಾಬರಿ ಬೀಳಬೇಡಿ. ಹಾಸ್ಟಲಿಗೆ ಹೋದೊಡನೆ ಪತ್ರ ಬರೆಯುತ್ತೇನೆ. ವಿದ್ಯಾಭ್ಯಾಸಕ್ಕೆಂದು ನಾನು ಪರಸ್ಥಳದಲ್ಲಿ ನಿಂತ ಮೇಲೆ ನಾನು ಆಗಾಗ ಹೋಗಿ ಬರುತ್ತಿರಬೇಕಾಗುತ್ತದೆ. ಎಷ್ಟು ಬಾರಿ ನೀವು ನನ್ನನ್ನು ಬಿಟ್ಟು ಬಂದು ಕರೆತಂದು ಮಾಡುತ್ತೀರಿ?''

"ಆಯಿತು ಮಗು, ನಿನಗೆ ಧೈರ್ಯವಿದ್ದರೆ ಸರಿ'' ಎಂದರು ಶಂಕರಪ್ಪ.

ಸುಮತಿ ಹಾಸ್ಟಲಿಗೆ ಬಂದಳು. ಅವಳು ಹಾಸ್ಟಲಿಗೆ ಹಿಂದಿರುಗುವುದಕ್ಕೆ ಒಂದುದಿನ ಮುಂಚಿತವಾಗಿಯೇ ನಂದಿತಾ ಬಂದಿದ್ದಳು. "ಒಂದು ದಿನ ಮುಂಚಿತವಾಗಿ ನೀನು ಬರುತ್ತೀ ಎಂದು ತಿಳಿದಿದ್ದರೆ ನಾನೂ ಒಂದು ದಿನ ಮುಂಚಿತವಾಗೇ ಬರುತ್ತಿದ್ದೆ ನಂದಿತಾ.''

"ಇರಲಿ ಬಿಡು, ನಾನಾದರೆ ಇದೇ ಊರಿನವಳು. ನೀನು ಹಳ್ಳಿಯಿಂದ ಬರಬೇಕು. ತಿಂಗಳಿಂದ ಕೋಣೆಯ ಕಿಟಕಿ ಬಾಗಿಲು ಮುಚ್ಚಿ ಒಂದು ರೀತಿ ಗಪ್ ಎನ್ನುತ್ತಿತ್ತು. ಕಿಟಕಿ, ಬಾಗಿಲು ತೆರೆದು ಧೂಳು ಹೊಡೆದು ಸ್ವಚ್ಛಗೊಳಿಸಿದ್ದೇನೆ.''

"ರಜೆ ಹೇಗೆ ಕಳೆಯಿತು ಮನೆಯಲ್ಲಿ?''

"ತುಂಬಾ ಚೆನ್ನಾಗಿ ದಿನಗಳು ಸರಿದವು ಸುಮತಿ. ಚಿಕ್ಕಮ್ಮನ ಬಗೆಗೆ ನನ್ನ ಮನದಲ್ಲಿದ್ದ ಕಲ್ಮಶವನ್ನೆಲ್ಲ ನೀನು ತೊಳೆದುಬಿಟ್ಟೆ. ಹಾಗಾಗಿ ಅವರು ಮಾಡಿದ ಅಡುಗೆ, ತಿಂಡಿ, ಮಾತು ಎಲ್ಲ ನನಗೆ ಹಿಡಿಸಿತು. ಈ ಬಾರಿ ಎಲ್ಲರೊಂದಿಗೂ ಹೊಂದಿಕೊಂಡು ದಿನಕಳೆದೆ. ಹಾಗಾಗಿ ದಿನಗಳು ಕ್ಷಣಗಳಾಗಿ ಉರುಳಿ ಹೋದವು.''

"ನನ್ನದೂ ಹಾಗೆಯೇ.''

"ನಿಮ್ಮ ಹಳ್ಳಿಯಲ್ಲಿ ಬಿಡು, ಪ್ರಕೃತಿಯ ತೊಟ್ಟಿಲಲ್ಲಿ ಮಲಗಿದ ಹಾಗೆ.''

"ಆದರೂ ಅಲ್ಲಿಯೂ ಒಮ್ಮೊಮ್ಮೆ ಬೇಸರವಾಗುತ್ತದೆ ನಂದಿತಾ.''

"ಬೇಸರವೇಕೆ?''

"ಅಲ್ಲಿಯೇನು ಇಲ್ಲಿಯ ಹಾಗೆ ದಿನನಿತ್ಯ ಪೇಪರ್ ಮ್ಯಾಗಸೈನ್ ಯಾವುದೂ ಇಲ್ಲ. ವಿದ್ಯುಚ್ಛಕ್ತಿ ಇಲ್ಲ. ಕತ್ತಲಾದ ಮೇಲೆ ಕಾರ್ಗತ್ತಲು, ಏನೂ ಮಾಡುವಂತಿಲ್ಲ. ಪಟ್ಟಣದ ಸುಖ ಸೌಲಭ್ಯಗಳನ್ನು ಅನುಭವಿಸಿದ ಮೇಲೆ ಅಲ್ಲಿಯ ಕುಂದುಕೊರತೆಗಳು ಎದ್ದು ಕಾಣುತ್ತವೆ. ಅಲ್ಲಿರುವವರೆಗೆ ಅಲ್ಲಿಯ ಲೋಪದೋಷಗಳೇನೂ ದೊಡ್ಡದೆನಿಸುತ್ತಿರಲಿಲ್ಲ.''

"ಮತ್ತೇನು ವಿಶೇಷ?''

"ಈ ಬಾರಿ ಹಳ್ಳಿಯ ಮಾಸ್ತರರನ್ನು ಕಂಡುದೊಂದು ವಿಶೇಷ ಸಂಗತಿ ಅಷ್ಟೆ.''

"ನಮ್ಮ ಮನೆಯಲ್ಲೂ ಒಂದು ವಿಶೇಷವಿದೆ.''

"ಏನದು?"

"ನಮ್ಮ ತಂದೆ ಮಹಡಿಯ ಮೇಲೆ ಮೂರು ಕೋಣೆಗಳನ್ನು ಕಟ್ಟಿಸುತ್ತಿದ್ದಾರೆ."

"ಹೌದೇ?"

"ಹೌದು, ಒಂದು ನನಗಾಗಿ, ಒಂದು ನನ್ನ ತಮ್ಮನಿಗಾಗಿ ಮತ್ತೊಂದು ನನ್ನ ತಂಗಿಗಾಗಿ."

"ಆದರೆ ನೀನೀಗ ಇಲ್ಲಿದ್ದೀಯಲ್ಲ."

"ಈಗ ಸದ್ಯಕ್ಕೆ ಇದ್ದೇನೆ. ಮುಂದೆ ನೋಡೋಣ."

"ಅಂತೂ ನಿನ್ನ ಮನಸ್ಸು ಸ್ವಲ್ಪ ಪರಿವರ್ತನೆಯಾಗಿರುವುದು ಸಂತೋಷದ ಸಮಾಚಾರ."

"ಆಗದೇ ಇರುತ್ತದೆಯೇ, ನೀನು ಅಷ್ಟೊಂದು ಪ್ರಯತ್ನಪಟ್ಟಮೇಲೆ."

"ನನ್ನಿಂದ ನಿನಗೆ ಅಷ್ಟಾದರೂ ಉಪಕಾರವಾಗಿದ್ದರೆ ನಾನು ಧನ್ಯೆ."



"ನೀವು ಬಹಳ ಮೂರ್ಖರು. ಒಂದು ಕಿವಿಯಲ್ಲೇ ಕೇಳಿ ಮತ್ತೊಂದರಲ್ಲಿ ಹೊರಗೆ ಬಿಡುತ್ತೀರಿ."

"ಅಷ್ಟೇ ತಾನೆ, ನೀವು ನಮಗಿಂತ ಮೂರ್ಖರು. ಎರಡು ಕಿವಿಯಲ್ಲಿ ಕೇಳಿ, ಬಾಯಲ್ಲಿ ಹೊರಗೆ ಬಿಡುತ್ತೀರಿ."

— ಎಸ್. ಎಸ್. ಅತುಲಾ

ಮತ್ತೆ ಕಾಲೇಜಿನ ದಿನಗಳು ಪ್ರಾರಂಭವಾಯಿತು. ಕಾಲೇಜು ಪ್ರಾರಂಭವಾಯಿತು ಎಂದೊಡನೆ ಹಿಂದೆಯೇ ಪ್ರಾಕ್ಟಿಕಲ್ ತರಗತಿಗಳೂ ಟೆಸ್ಟುಗಳೂ ಪ್ರಾರಂಭವಾಯಿತು. ಮತ್ತೆ ಸುಮತಿ, ನಂದಿತಾ ಓದಿನಲ್ಲಿ ಎಂದಿನಂತೆ ಮಗ್ನರಾದರು. ಕಾಲೇಜಿನ ವಾರ್ಷಿಕ ಪಠ್ಯೇತರ ಚಟುವಟಿಕೆಗಳೂ ಪ್ರಾರಂಭವಾಯಿತು. ನಂದಿತಾಳ ಬಲವಂತಕ್ಕೆ ಕಟ್ಟು ಬಿದ್ದು ಸುಮತಿ ಸ್ಟೇಜಿನ ಮೇಲೆ ಹಾಡೊಂದನ್ನು ಹಾಡಿದಳು. ಹಾಗೆಯೇ ಕಾಲೇಜಿನವರು ಏರ್ಪಡಿಸಿದ್ದ ಒಂದು ದಿನದ ಪ್ರವಾಸ ಮೇಕೇದಾಟಿಗೂ ಹೋಗಿ ಬಂದಳು. ಪರೀಕ್ಷೆಗಳು ಮತ್ತೆ ಹತ್ತಿರ ಬಂದಿತು. ವರ್ಷದ ಮೊದಲಿನಿಂದಲೂ ಚೆನ್ನಾಗಿ ಅಭ್ಯಾಸ ನಡೆಸಿದ್ದ ಸುಮತಿ ಲೀಲಾಜಾಲವಾಗಿ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಿದಳು. ಬೇಸಿಗೆ ರಜೆಯನ್ನು ಚೆಲುವಿನಹಳ್ಳಿಯಲ್ಲಿ ಕಳೆದಳು.

ಎರಡನೆ ವರ್ಷದ ಪಿ.ಯು.ಸಿ. ವಿದ್ಯಾರ್ಥಿ ಜೀವನದ ಅತಿ ಮುಖ್ಯವಾದ ಅಂಗ. ಒಬ್ಬ ವಿದ್ಯಾರ್ಥಿ ಇಂಜಿನಿಯರಾಗುತ್ತನೋ, ಡಾಕ್ಟರಾಗುತ್ತಾನೋ, ಕಲಾವಿದನಾಗುತ್ತಾನೋ, ಉಪಾಧ್ಯಾಯನಾಗುತ್ತಾನೋ ಎಂದು ನಿರ್ಧರಿಸುವುದು ಈ ವರ್ಷವೇ. ಈ ತರಗತಿಗೆ ಬರುವ ವೇಳೆಗೆ ವಿದ್ಯಾರ್ಥಿಗಳು ಮುಂದೆ ತಾವೇನಾಗಬೇಕೆಂದು ನಿರ್ಧರಿಸಿರುತ್ತಾರೆ. ಅಂತೆಯೇ ಸುಮತಿ ನಂದಿತಾ ಕೂಡ ಈ ವಿಚಾರದಲ್ಲಿ ನಿರ್ಧರಿತರಾಗಿದುದರಿಂದ ಈ ವರ್ಷ ಗುರಿಯತ್ತವಲ್ಲದೆ ಬೇರೆತ್ತಲೂ ಗಮನಹರಿಸಬಾರದು ಎಂದು ತೀರ್ಮಾನಿಸಿದ್ದರು.

"ಮುಂದೆ ನೀನು ಏನು ಓದಬೇಕೆಂದಿರುವೆ ನಂದಿತಾ?"

"ನಾನು ಇಂಜಿನಿಯರೇ ಆಗಬೇಕು."

"ನಾನು ಡಾಕ್ಟರಾಗಬೇಕೆಂದಿದ್ದೇನೆ."

"ಆದರೆ ಡಾಕ್ಟರ್ ಕೆಲಸ ಕಷ್ಟವಲ್ಲವೇ?"

"ಕಷ್ಟ ಸುಖದ ಪ್ರಶ್ನೆಯಲ್ಲ, ಅದು ನನ್ನ ಬಾಳಿನ ಗುರಿ."

"ಗುರಿಯೇನೋ ಚೆನ್ನಾಗಿದೆ. ಆದರೆ ಸಾಧಿಸುವುದು ಕಷ್ಟ ಸುಮತಿ."

"ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆಯಲ್ಲವೇ?"

"ಅದೇನೋ ಸರಿ."

"ನೀನು ಇಂಜಿನಿಯರಿಂಗ್ ಕೋರ್ಸ್‌ಗೆ ಸೇರುವಿಯಾದರೆ ನನ್ನ ನಿನ್ನ ದಾರಿಗಳು ಕವಲೊಡೆಯುತ್ತದೆಯಲ್ಲವೇ?"

"ಹೌದು ಸುಮತಿ."

"ಆದರೆ ನೀನು ಇದೇ ಹಾಸ್ಟಲಿನಲ್ಲಿರುತ್ತೀ ತಾನೆ?"

"ಇಲ್ಲ."

"ಮತ್ತೆ."

"ನಾನು ಈ ವರ್ಷದ ಓದು ಮುಗಿದೊಡನೆ ಹಾಸ್ಟಲು ಬಿಟ್ಟು ಮನೆಗೆ ಹೋಗುತ್ತೇನೆ."

"ತುಂಬ ಸಂತೋಷದ ಸುದ್ದಿ."

"ಆದರೆ ನೀನಿಲ್ಲವೆಂಬುದೊಂದೇ ದುಃಖದ ಸಂಗತಿ."

"ನಮ್ಮ ದಾರಿ, ಗುರಿಗಳು ಬೇರೆಯಾದ ಮೇಲೆ ನಾವಿಬ್ಬರೂ ಒಟ್ಟಿಗಿದ್ದರೇನು? ಬೇರೆ ಇದ್ದರೇನು ಅದಷ್ಟು ಮುಖ್ಯವಲ್ಲ. ನಾವಿಬ್ಬರು ಎಂದೆಂದಿಗೂ ಸ್ನೇಹಿತರು ಎಂಬುದೊಂದೇ ಸತ್ಯ. ನೀನು ದೊಡ್ಡ ಇಂಜಿನಿಯರಾಗಿ ಖ್ಯಾತಿ ಪಡೆಯಲು ಯತ್ನಿಸು. ನಾನು ನನ್ನ ಗುರಿಸಾಧನೆಯತ್ತ ಮನಸ್ಸು ಹರಿಸುತ್ತೇನೆ."

"ಅದೆಲ್ಲ ಭವಿಷ್ಯದ ಮಾತಾಯಿತು. ಈಗ ನಾವಿಬ್ಬರೂ ಈ ದ್ವಿತೀಯ ಪಿ.ಯು.ಸಿ. ಪರೀಕ್ಷೆಯನ್ನು ಹೆಚ್ಚಿನ ಅಂಕಗಳೊಂದಿಗೆ ಪಾಸು ಮಾಡೋಣ."

ಭವಿಷ್ಯವನ್ನು ನೆನೆಸುತ್ತ ಪ್ರಸ್ತುತವನ್ನೇ ಮರೆತೆವೆಂದು ಗೆಳತಿಯರಿಬ್ಬರೂ ಮನದಣಿಯೆ ನಕ್ಕರು.

ಅಂತೂ ಕೊನೆಗೊಮ್ಮೆ ದ್ವಿತೀಯ ವರ್ಷದ ಪಿ.ಯು.ಸಿ. ಪರೀಕ್ಷೆ ಮುಗಿಯಿತು. ಪರೀಕ್ಷೆಯಲ್ಲಿ ಚೆನ್ನಾಗಿಯೇ ಬರೆದಿದ್ದ ಸುಮತಿಯಲ್ಲಿ ಆತ್ಮ ವಿಶ್ವಾಸ ತುಂಬಿ ತುಳುಕುತ್ತಿತ್ತು.

ಪರೀಕ್ಷೆ ಮುಗಿದೊಡನೆ ನಂದಿತಾಳ ಇಚ್ಛೆಯಂತೆ ಕೆಲವು ದಿನ ಅವಳ ಮನೆಯಲ್ಲಿ ಕಾಲ ಕಳೆದು ಚೆಲುವನಹಳ್ಳಿಗೆ ಹಿಂದಿರುಗಿದಳು ಸುಮತಿ. ಈ ಬಾರಿ ರಜದಲ್ಲಿ ಅವಳ ಮನ ಆತಂಕದಿಂದ ತುಂಬಿತ್ತು. ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿದ್ದಳು. ಚೆನ್ನಾಗಿ ನಂಬರ್ ಬರುವುದೂ ಖಾತ್ರಿಯಿತ್ತು. ಆದರೂ ಮೆಡಿಕಲ್ ಕಾಲೇಜಿಗೆ ಸೇರಲು ಆಗತ್ಯವಿರುವಷ್ಟು ಅಂಕಗಳು ಬಾರದೇ ಹೋದರೆ ಏನು ಮಾಡುವುದು ಎಂದವಳ ಮನ ಚಿಂತಿಸುತ್ತಿತ್ತು.

ರಾಜಣ್ಣ ಎಸ್.ಎಸ್.ಎಲ್.ಸಿ.ಗೆ ವಿದ್ಯಾಭ್ಯಾಸ ನಿಲ್ಲಿಸಿ ತಂದೆಗೆ ಕೆಲಸ ಕಾರ್ಯಗಳಲ್ಲಿ



ಬಲಭುಜನೆನಿಸಿದ್ದ. ತೋಟದ ಹೊಲ, ಗದ್ದೆಯ ಉಸ್ತುವಾರಿಯೆಲ್ಲ ಅವನದೇ. ರಂಗಣ್ಣ ಪಿ.ಯು.ಸಿ. ಪರೀಕ್ಷೆ ಮುಗಿಸಿದ. ಪಕ್ಕದ ಸಣ್ಣ ಹಳ್ಳಿಯೊಂದರಲ್ಲಿ ಅವನಿಗೆ ಗ್ರಾಮೀಣ ಬ್ಯಾಂಕೊಂದರಲ್ಲಿ ಕೆಲಸ ಸಿಕ್ಕಿದೆ. ಪ್ರೈವೇಟನಲ್ಲಿ ಬಿ. ಎ. ಪರೀಕ್ಷೆಗೂ ಕಟ್ಟಿದ್ದಾನೆ. ಅಪ್ಪನಿಗೆ ಮೊದಲು ಇದ್ದಷ್ಟು ಉತ್ಸಾಹ, ಚೈತನ್ಯ ಈಗಿಲ್ಲ. ತನ್ನ ಮದುವೆ ಘಟನೆಗಳನ್ನು ನೆನಸಿಕೊಂಡೇ ಇರಬೇಕು. ಅವರು ಈ ನಡುವೆ ಸ್ವಲ್ಪ ಕುಗ್ಗಿದ್ದಾರೆ. ಬೇಗ ಆಯಾಸ ಅವರನ್ನು ಆವರಿಸಿಕೊಳ್ಳುತ್ತದೆ. ಒಂದು ವಿಧದಲ್ಲಿ ರಾಜಣ್ಣ ಓದು ನಿಲ್ಲಿಸಿ, ಅಪ್ಪನ ಯೋಗಕ್ಷೇಮದ ಹೊಣೆಯನ್ನು ಹೊತ್ತುದು ಒಳ್ಳೆಯದೆ ಆಯಿತು ಎನಿಸುತ್ತದೆ. ಅಪ್ಪನಿಗೂ ತುಸು ವಿಶ್ರಾಂತಿ ದೊರೆತ ಹಾಗಾಯಿತು. ಅವನೂ ಓದಿ ಬೇರೆಲ್ಲಾದರೂ ನೌಕರಿ ಹಿಡಿದಿರುತ್ತಿದ್ದರೆ ಅಪ್ಪನನ್ನು ನೋಡಿಕೊಳ್ಳುವವರು ಯಾರಿದ್ದರು? ಅದಕ್ಕೇ ಅಲ್ಲವೇ ಹೇಳುವುದು ಆದದ್ದೆಲ್ಲ ಒಳ್ಳೆಯದಕ್ಕೇ ಎಂದು.

ಆ ದಿನ ಊಟ ಮಾಡುವಾಗ ಅಪ್ಪ ಕೇಳಿದರು. "ಇನ್ನು ಎಷ್ಟು ವರುಷ ಓದಬೇಕು ಮಗು ನೀನು? ಒಂದು ವರುಷವೋ, ಎರಡು ವರುಷವೋ?"

"ಒಂದೆರಡು ವರುಷಗಳಲ್ಲಪ್ಪ. ಇನ್ನೂ ಐದು ವರುಷಗಳು ಓದಬೇಕಾಗುತ್ತದೆ."

"ಇನ್ನೂ ಐದು ವರ್ಷವೇ, ಈಗಾಗಲೇ ಎರಡು ವರ್ಷ ಓದಿದ್ದೀಯಲ್ಲ. ಆ ಪಾಟ ಏನು ಓದುತ್ತೀ ಮಗು?"

"ಡಾಕ್ಟರ್ ಪರೀಕ್ಷೆಗೆ ಓದಬೇಕೆಂದಿದ್ದೇನಪ್ಪಾ."

"ಡಾಕ್ಟರ್ ಪರೀಕ್ಷೆಗೆ?"

"ನೀನು ಡಾಕ್ಟನಾಗುತ್ತೀಯೋ?" ಶಿವಮ್ಮ ಕೇಳಿದಳು.

"ಹೌದು ಅವ್ವ, ಡಾಕ್ಟನಾಗಬೇಕು ಎಂದಿದ್ದೇನೆ. ನೋಡೋಣ ನನ್ನ ಅದೃಷ್ಟದಲ್ಲಿ ಏನು ಬರೆದಿದೆಯೋ ಯಾರು ಬಲ್ಲರು?"

"ಅಷ್ಟು ದೊಡ್ಡ ಓದನ್ನು ಓದುವುದು ನಿನ್ನಿಂದ ಸಾಧ್ಯವೇ ಮಗು?"

"ಪ್ರಯತ್ನಪಟ್ಟರೆ ಯಾವುದು ತಾನೆ ಅಸಾಧ್ಯ ಅಪ್ಪ. ಈಗ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿದ್ದೇನೆ. ಒಳ್ಳೆಯ ಅಂಕಗಳು ಬರುವ ಭರವಸೆ ಇದೆ. ಸೀಟು ಸಿಕ್ಕರೆ ಮಾತ್ರ ಮೆಡಿಕಲ್ ಕಾಲೇಜಿಗೆ ಸೇರುತ್ತೇನೆ."

"ಬಲೇ ಬುದ್ಧಿವಂತೆ ಬಿಡಮ್ಮ ನೀನು. ನಮ್ಮ ವಂಶದಲ್ಲೇ ಯಾರೂ ಡಾಕ್ಟನಾಗಿರಲಿಲ್ಲ. ನೀನು ಡಾಕ್ಟ್ರಾದರೆ ಹೆತ್ತವರ ಕೋಡಿಗೆ ಗರಿ ಮೂಡಿದ ಹಾಗೆ. ನನಗೆ ಬಹಳ ಸಂತೋಷವಾಗುತ್ತದೆ."

"ಡಾಕ್ಟರ್ ಪರೀಕ್ಷೆ ಮಾಡುವುದು ಸುಲಭವೇ? ಹಣ ವಿಪರೀತ ಖರ್ಚಾಗುತ್ತದೆ." ಶಿವಮ್ಮ ನುಡಿದಳು.

"ಹಣ ಎಷ್ಟಾದರೂ ಖರ್ಚಾಗಲಿ ಮಗು. ಅದರ ಚಿಂತೆ ಬೇಡ. ನೀನು ಓದಬೇಕೆಂದಿದ್ದರೆ ಓದು" ಎಂದರು ಶಂಕರಪ್ಪ.

ರಜೆಯು ಕಳೆಯಿತು. ಸುಮತಿಗೆ ಚೆನ್ನಾಗಿಯೇ ಅಂಕಗಳು ಬಂದಿದ್ದವು. ಅದು ಅವಳ ಪ್ರಯತ್ನದ ಫಲವಾಗಿತ್ತು. ಅವಳು ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಿತು. ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿಯೇ ಸೀಟು ದೊರೆತುದರಿಂದ ಹಾಸ್ಟಲ್ ಬದಲಾಯಿಸುವ, ಊರು ಬದಲಾಯಿಸುವ ಪ್ರಮೇಯ ಬರಲಿಲ್ಲ. ಮೆಡಿಕಲ್ ಕಾಲೇಜಿಗೆ ಸೇರಿದ ಸುಮತಿ ಒಮ್ಮೆ

ನಂದಿತಾಳ ಮನೆಗೆ ಹೋಗಿ ಬಂದಳು. ನಂದಿತಾ ಇಂಜಿನಿಯರಿಂಗ್ ಕಾಲೇಜಿಗೆ ಸೇರಿದ್ದಳು. ಆವಳೀಗ ಚಿಕ್ಕಮ್ಮ, ತಮ್ಮ ತಂಗಿಯರೊಡನೆ ಹೊಂದಿಕೊಂಡು ಬಾಳುತ್ತಿದ್ದಳು. ಮನಸ್ಸಿನ ಕಲ್ಮಶ ತೊಳೆದು ಹೋದುದರಿಂದ ಬದುಕು ಸಂತಸಭರಿತವಾಗಿತ್ತು.

"ನಿನ್ನಿಂದಾದ ಉಪಕಾರವನ್ನು ನಾನೆಂದೂ ಮರೆಯುವುದಿಲ್ಲ."

"ಆದರೆ ನಿನ್ನಿಂದಾದ ಅಪಕಾರವನ್ನೂ ನಾನೂ ಮರೆಯುವುದಿಲ್ಲ."

"ಅಪಕಾರವೇ ನನ್ನಿಂದ?"

"ಹೌದು."

"ಏನು?"

"ಎರಡು ವರ್ಷ ನನ್ನ ಜೊತೆಗಿದ್ದು ಈಗ ರೂಮು ಕಾಲಿಮಾಡಿ ಬಂದು ಬಿಟ್ಟಿದ್ದೀಯಲ್ಲ, ರೂಮಿಗೆ ಹೋದರೆ ಬಿಕೋ ಎನ್ನುತ್ತದೆ. ನಾನು ಹೇಗಿರಬೇಕು ಅಲ್ಲಿ?"

"ಅಷ್ಟೇ ತಾನೆ?"

"ನಿನಗೆ ಅದು ಸಣ್ಣ ವಿಷಯ, ನನಗೆ ಅದು ದೊಡ್ಡ ವಿಷಯ."



ಸಮಸ್ಯೆ

ಸಮಸ್ಯೆ
ತಂದಿಹಳು
ಎನ್ನುವಳು
ಪರಿ
ಹಾರ ಬೇಕೆಂದು.

— ಗಣೇಶ ಕೆ.

"ನಾನು ಅಲ್ಲಿರದಿದ್ದರೇನಾಯ್ತು, ವಾರ್ಡನ್ ಅಲ್ಲಿಗೆ ಬೇರೆ ಯಾರನ್ನಾದರೂ ಕಳಿಸುತ್ತಾರೆ."

"ಬೇರೆ ಹುಡುಗಿ ಬರಬಹುದು. ಆದರೆ ಅವಳು ನಿನ್ನಂತೆ ನನ್ನ ಅಂತರಂಗದ ಗೆಳತಿಯಾಗಲು ಸಾಧ್ಯವೇ?"

"ನೋಡು ಸುಮತಿ ಈಗ ನಮ್ಮಿಬ್ಬರ ಕೋರ್ಸ್‌ಗಳು ಬೇರೆಯಾದುದರಿಂದ ನಾವಿಬ್ಬರೂ ಸದಾಕಾಲ ಜೊತೆಗಿರುವುದಂತೂ ಅಸಾಧ್ಯವಾದ ಮಾತು. ಹಾಗಿದ್ದಮೇಲೆ ಬೇರೆ ಬೇರೆ ಇದ್ದರೆ ಏನೀಗ? ನನಗೆ ನಿನ್ನನ್ನು ನೋಡಬೇಕೆನಿಸಿದಾಗ ನಾನು ಹಾಸ್ಟಲಿಗೆ ಬರುತ್ತೇನೆ, ನಿನಗೆ ನನ್ನನ್ನು ನೋಡಬೇಕೆನಿಸಿದಾಗ ಮನೆಗೆ ಬಾ."

"ಈಗ ಉಳಿದಿರುವುದು ಅದೊಂದೇ ದಾರಿ" ಎಂದು ಹೇಳಿ ಹಾಸ್ಟಲಿಗೆ ಹಿಂದಿರುಗಿ ಬಂದಳು ಸುಮತಿ.

ವೈದ್ಯಕೀಯ ಕಾಲೇಜಿಗೆ ದಾಖಲಾದ ಸುಮತಿಗೆ ಹೊಸದೊಂದೇ ಪ್ರಪಂಚವನ್ನು ಹೊಕ್ಕಂತಾಯಿತು. ಮನುಷ್ಯ ದೇಹದ ಪ್ರತಿಯೊಂದು ಅಂಗ ಪ್ರತ್ಯಂಗಗಳ ಸುದೀರ್ಘ ಅಧ್ಯಯನ. ದಪ್ಪ ದಪ್ಪದ ದೊಡ್ಡ ದೊಡ್ಡ ಪುಸ್ತಕಗಳ ಅಧ್ಯಯನ. ಓದಿದಷ್ಟೂ ಸಾಲದು, ದಿನದ ಇಪ್ಪತ್ನಾಲ್ಕು ಗಂಟೆಗಳು ಈಗ ಸಾಲದೇ ಸಾಲದು. ನಿದ್ದೆಗೆಡದೆ ವಿದಿಯಿಲ್ಲ.

ಇದುವರೆಗೆ ತಾನೇನೋ ಬಹಳ ಓದುತ್ತಿದ್ದೇನೆ ಸುಮತಿ. ಆದರೆ ಈಗ ಜ್ಞಾನ ಎಂಬುದೊಂದು ಸಾಗರ ಇದ್ದ ಹಾಗೆ. ಇದರಲ್ಲಿ ತಾನು ಓದುತ್ತಿರುವುದು ಒಂದು ಹನಿ ಮಾತ್ರ ಎಂಬುದು ಅವಳ ಅರಿವಿಗೆ ಬಂತು. ಜೊತೆಗೆ ತನ್ನ ಹಳ್ಳಿ, ಹಳ್ಳಿಯಲ್ಲಿನ ಜನ, ಎಷ್ಟೊಂದು ಅಜ್ಞಾನ ಅಂಧಕಾರದಲ್ಲಿದ್ದಾರೆ ಎಂದೂ ತರ್ಕಿಸಿತು ಅವಳ ಮನ.

ವಿನುತಾ ಈಗ ಸುಮತಿಯ ರೂಂಮೇಟ್ ಆಗಿದ್ದಾಳೆ. ಅವಳು ಹಾಸ್ಟಲ್ ಸಮೀಪದ ಮಹಿಳಾ ಕಾಲೇಜೊಂದರಲ್ಲಿ ಬಿ. ಎ. ಓದುತ್ತಿದ್ದಾಳೆ. ನಂದಿತಾಳಷ್ಟು ಮನಬಿಚ್ಚಿ ಮಾತನಾಡುವವಳಲ್ಲ ಅವಳು. ಅವಳು ಆ ರೀತಿ ಇದ್ದಾಳೆಂದು ಸುಮತಿಗೆ ಬೇಸರವೇನೂ ಇಲ್ಲ. ಲೋಕೋಭಿನ್ನರುಚಿ, ಒಬ್ಬರ ಹಾಗೆ ಮತ್ತೊಬ್ಬರು ಇರಬೇಕೆಂದು ಬಯಸಿದರೆ ಹೇಗೆ ಸಾಧ್ಯ? ಐದು ಬೆರಳೂ ಒಂದೇ ಸಮನಾಗಿರುತ್ತದೆಯೇ? ಕೆಲವರು ಮಾತಿನಲ್ಲಿ ಸುಖ, ನೆಮ್ಮದಿಯನ್ನು ಕಂಡುಕೊಂಡರೆ ಮತ್ತೆ ಕೆಲವರು ಮೌನದಲ್ಲಿ ಸುಖ, ನೆಮ್ಮದಿಯನ್ನು ಕಂಡುಕೊಳ್ಳುತ್ತಾರೆ. ಅಲ್ಲದೆ ಸುಮತಿ ಕೂಡ ಈಗ ಸಾಕಷ್ಟು ಬಿಜಿಯಾಗಿರುತ್ತಾಳೆ. ಹಾಸ್ಟಲಿನಿಂದ ಕಾಲೇಜು ಬಹಳಷ್ಟೇ ದೂರವಿದೆ. ಕಾಲೇಜಿನಿಂದ ಬಂದಮೇಲೂ ಕೋಣೆಯಲ್ಲಿ ಕುಳಿತು ಓದುವುದು ಬರೆಯುವುದು ಸಾಕಷ್ಟಿರುತ್ತದೆ. ಹಾಗಾಗಿ ವಿನುತಾ ಮೌನಿ ಎಂದು ಅವಳಿಗೆ ಬೇಸರವೇನೂ ಇಲ್ಲ. ಆದರೆ ಒಂದಂಶವನ್ನು ಗಮನಿಸಿ ಸುಮತಿ ಅಚ್ಚರಿಗೊಂಡಿದ್ದಾಳೆ. ಅದೆಂದರೆ ವಿನುತಾ ಪಾಠದ ಪುಸ್ತಕಗಳಿಗಿಂತ ಹೆಚ್ಚಾಗಿ ಕತೆ ಪುಸ್ತಕಗಳನ್ನು ಓದುತ್ತಿದ್ದಳು. ಅವಳು ಏನಾದರೂ ಮಾಡಿಕೊಳ್ಳಲಿ ನನಗೇಕೆ ಎಂದುಕೊಂಡರೂ ಸುಮತಿಯ ಮನ ತಡೆಯಲಿಲ್ಲ. ಒಮ್ಮೆ ಕೇಳಿಯೇ ಬಿಟ್ಟಳು.

ಆದಿನ ಸುಮತಿ "ಊಟಕ್ಕೆ ಹೋಗೋಣವೇ ವಿನುತಾ'' ಎಂದಾಗ "ನನಗೆ ಹಸಿವೆಯಿಲ್ಲ. ನೀವು ಊಟ ಮುಗಿಸಿ ಬನ್ನಿ'' ಎಂದಳು ವಿನುತಾ.

ಸುಮತಿ ಊಟ ಮುಗಿಸಿ ಬಂದಾಗಲೂ ವಿನುತ ಮಂಚದ ಮೇಲೆ ಬೋರಲು ಮಲಗಿಕೊಂಡು ಕತೆ ಪುಸ್ತಕ ಓದುತ್ತಲೇ ಇದ್ದಾಳೆ.

ಸುಮತಿ ಕೇಳಿದಳು "ಒಂದು ವಿಷಯ ನಿನ್ನನ್ನು ಕೇಳಬೇಕೆಂದುಕೊಂಡಿದ್ದೇನೆ ವಿನುತಾ.''

"ಐದೇ ಐದು ನಿಮಿಷ ತಾಳಿ. ತುಂಬ ಇಂಟರೆಸ್ಟಿಂಗ್ ಆಗಿದೆ ಈ ಪುಸ್ತಕ ಮುಗಿಸಿ ಬಿಡುತ್ತೇನೆ.''

ಸುಮತಿ ಸೀರೆ ಬದಲಾಯಿಸಿ ನೈಟ್‌ಗೌನ್ ತೊಟ್ಟಳು. ಪಿ.ಯು.ಸಿ.ಯಲ್ಲಿ ಅವಳಿಗೆ ಕಾಲೇಜಿಗೆ ಸೀರೆ ಉಟ್ಟುಕೊಂಡು ಹೋಗಲು ಅವಳಿಗೆ ಒಂದು ಬಗೆಯ ಅಳುಕು. ಕಾರಣ ಎಲ್ಲರೂ ಚೂಡೀದಾರ್, ಮಿಡಿ, ಮಿನಿಸ್ಕರ್ಟ್‌ನಲ್ಲಿರುವಾಗ ಸೀರೆ ಉಟ್ಟು ಹೋಗಬೇಕಲ್ಲ ಎಂದು. ಈಗ ಹಾಗಿಲ್ಲ ಎಲ್ಲರೂ ಕಾಲೇಜಿಗೆ ಸೀರೆ ಉಟ್ಟೇ ಹೋಗಬೇಕು. ಅದು ನಿಯಮ. ಸೀರೆ, ಸೀರೆಯ ಮೇಲೆ ಬಿಳಿಯ ಕೋಟು, ಕೊರಳಿಗೆ ಸ್ಟೆತಾಸ್ಕೋಪಿನ ಹಾರ. ಹಾಗೊಮ್ಮೆ ಬೆಳಿಗ್ಗೆ ಕಾಲೇಜಿಗೆ ಹೊರಟಳೆಂದರೆ, ರಾತ್ರಿಯೇ ಉಡುಪು ಬದಲಾಯಿಸುವುದು, ಅದೂ ಊಟ ಮುಗಿದ ಬಳಿಕ.

"ಈಗ ಕೇಳಿ ನನ್ನಲ್ಲಿ ಏನೋ ಪ್ರಶ್ನೆ ಕೇಳುತ್ತಿದ್ದೀರಲ್ಲ?'' ಎಂದಳು ವಿನುತಾ ಸುಮತಿಯತ್ತ ತಿರುಗಿ.

"ನೀನೇನೂ ತಿಳಿದುಕೊಳ್ಳುವುದಿಲ್ಲ ಎಂದರೆ ಒಂದು ಮಾತು ಕೇಳುತ್ತೇನೆ.''

"ಕೇಳಿ ಧಾರಾಳವಾಗಿ, ಸಂಕೋಚಬೇಡ."

"ನೀನು ಈ ರೂಂಗೆ ಬಂದಾಗಿನಿಂದ ನೋಡುತ್ತಿದ್ದೇನೆ. ನೀನು ಯಾವಾಗಲೂ ಕತೆ ಪುಸ್ತಕವನ್ನೇ ಓದುತ್ತಿರುತ್ತೀಯಲ್ಲ. ಪಾಠದ ಪುಸ್ತಕ ಓದುವುದೇ ಇಲ್ಲವೇ?"

"ಇಲ್ಲ ನನಗೆ ಓದಿನಲ್ಲಿ ಆಸಕ್ತಿಯಿಲ್ಲ."

"ಮತ್ತೆ ಓದಲೆಂದು ಇಲ್ಲಿ ಬಂದಿರುವುದೇಕೆ?"

"ಅದಕ್ಕೆ ಬೇರೆಯೇ ಕಾರಣವಿದೆ."

"ಏನದು?"

"ಮನೆಯಲ್ಲಿ ನನ್ನ ಸೋದರಮಾವನ ಮಗ ಒಬ್ಬನಿದ್ದಾನೆ. ಅವನೊಂದಿಗೆ ನನ್ನ ಮದುವೆ ಮಾಡಬೇಕೆಂದು ಅಪ್ಪ, ಅಮ್ಮನ ಇಚ್ಛೆ. ನನಗದು ಇಷ್ಟವಿಲ್ಲ. ಆದ್ದರಿಂದ ಓದುವ ನೆಪದಲ್ಲಿ ಇಲ್ಲಿದ್ದೇನೆ."

"ಹಾಗೆಂದು ಎಷ್ಟು ದಿನ ಇಲ್ಲಿರಲು ಸಾಧ್ಯ?"

"ನಾನು ಪ್ರೀತಿಸಿರುವ ಹುಡುಗ ಎಂ.ಎಸ್ಸಿ. ಓದುತ್ತಿದ್ದಾನೆ. ಅವನು ಓದು ಮುಗಿಸಿ ಕೆಲಸಕ್ಕೆ ಸೇರುವವರೆಗೆ ನಾನಿಲ್ಲಿರುತ್ತೇನೆ. ಅನಂತರ ಅವನೊಂದಿಗೆ ಮದುವೆಯಾಗುತ್ತೇನೆ."



ಆಲಸ್ಯ ಅರ್ಥಾತ್ ಸೋಮಾರಿತನವು ಮನುಷ್ಯನ ಶರೀರದಲ್ಲಿ ನೆಲೆಸಿದ ಮಹಾ ಶತ್ರುವು. ಉದ್ಯೋಗ ಪ್ರವೃತ್ತಿಯಂತಹ ಬಂಧುವು ಇನ್ನೊಬ್ಬನಿಲ್ಲ. ಉದ್ಯೋಗಶೀಲನಾದ ಜೀವಿಗೆ ಸಾವಿಲ್ಲ.

—ಭರ್ತೃಹರಿ

ಸಂಗ್ರಹ : ವಿ. ನೀಲಮ್ಮ

"ಓ ಹಾಗೋ ಸಮಾಚಾರ" ಎಂದಂದು ಸುಮ್ಮನಾದಳು ಸುಮತಿ. ಮತ್ತೆ ಅವಳನ್ನು ಕೆದಕಿ ಬೆದಕಿ ಪ್ರಶ್ನೆ ಕೇಳುವ ಗೊಡವೆಗೆ ಅವಳು ಹೋಗಲಿಲ್ಲ.

ಕಾಲೇಜು, ಹಾಸ್ಟಲು ಎಂದು ಸೇರಿದವರಿಗೆ ಓದುವುದೊಂದೇ ಗುರಿ ಎಂದು ತಿಳಿದಿದ್ದಳು ಅವಳು. ಆದರೆ ಬೇರೆ ಬೇರೆ ಉದ್ದೇಶಗಳಿಂದಲೂ ಕಾಲೇಜಿಗೆ ಸೇರುವವರಿದ್ದಾರೆ ಎಂಬುದೂ ಅವಳ ಅರಿವಿಗೆ ಬಂತು.

ಚಿಕ್ಕಂದಿನಿಂದ ಮಹಾ ಧೈರ್ಯಸ್ಥೆ ಸುಮತಿ. ಮನೆಯ ಹಿತ್ತಲಲ್ಲಿ ಹಾವೇ ಹರಿಯಲಿ ಚೇಳೇ ಹರಿಯಲಿ ಬೇಸರಗೊಂಡುದಿಲ್ಲ ಅವಳು. ದಿಗಿಲು ಬಿದ್ದವಳೂ ಇಲ್ಲ. ಕತ್ತಲಲ್ಲೂ ಒಬ್ಬೊಬ್ಬಳೇ ಓಡಾಡಲೂ ಭೀತಿ ಎಂಬುದಿಲ್ಲ ಅವಳಿಗೆ. ಹಾಗಾಗಿ ಮೆಡಿಕಲ್ ಕಾಲೇಜಿನ ಲ್ಯಾಬಿನಲ್ಲಿ ಪ್ರಾಣಿಗಳ ಡಿಸೆಕ್ಷನ್ ಇದ್ದ ದಿನವಾಗಲೀ, ಹೆಣ ಕುಯ್ಯುವುದನ್ನು ಕಂಡಾಗಾಗಲೀ, ಅಸ್ಥಿ ಪಂಜರವನ್ನು ಕಂಡಾಗಾಗಲೀ ದಿಗಿಲು ಬಿದ್ದುದಿಲ್ಲ, ಅವಳು. ಕಾಯಿಲೆಗಳ ಪಟ್ಟಿ ವಿವರಗಳನ್ನು ಓದುತ್ತಾ ಹೋದಂತೆ ಮಾತ್ರ ಎಲ್ಲ ಕಾಯಿಲೆಗಳೂ ತನಗೇ ಬಂದುಬಿಟ್ಟಿದೆಯೇನೋ ಎಂಬಂತೆ ಆತಂಕಗೊಳ್ಳುತ್ತಿದ್ದಳು. ಈ ವಿಚಾರದಲ್ಲಿ ಇವಳೊಬ್ಬಳಿಗೇ ಹೀಗೆನ್ನಿಸಿದುದಿಲ್ಲ. ಇವಳ ಸಹಪಾಠಿಗಳೂ ಅದೇ ವಿಚಾರ ವ್ಯಕ್ತಪಡಿಸಿದರು. ಪ್ರತಿನಿತ್ಯ ಹೆಚ್ಚು ಹೆಚ್ಚು ಓದುತ್ತ

ಹೋದಂತೆ, ಹೆಚ್ಚೆಚ್ಚು ಜ್ಞಾನಾರ್ಜನೆ ಮಾಡಿದಂತೆ ತಿಳಿವಳಿಕೆಯ ಪ್ರಪಂಚ ವಿಸ್ತಾರವಾಯಿತು. ತಿಳುವಳಿಕೆ ಬೆಳೆದಂತೆ ಒಂದು ರೀತಿಯ ಗಾಂಭೀರ್ಯ ಸುಮತಿಯಲ್ಲಿ ಮನೆ ಮಾಡಿತು.

ದಿನಗಳು ಹೀಗೆಂದ ಹಾಗೆ ಉರುಳಿಹೋದವು. ರಜಾ ದಿನಗಳಲ್ಲಿ ಸುಮತಿ ಚೆಲುವಿನಹಳ್ಳಿಗೆ ಹೋಗುವುದು, ರಾಜಣ್ಣ, ರಂಗಣ್ಣ ಬೆಂಗಳೂರಿಗೆ ಬರುವುದು ನಡೆದೇ ಇತ್ತು. ಹಾಗೂ ಹೀಗೂ ಸುಮತಿ ಕೊನೆಯ ವರ್ಷದ ಮೆಡಿಕಲ್‌ಗೆ ತರಗತಿಗೆ ಬಂದು ತಲುಪಿದಳು. ಆ ಬಾರಿ ಶಂಕರಪ್ಪ ಬೆಂಗಳೂರಿಗೆ ಬಂದಾಗ ನುಡಿದರು. "ಓದಿ ಓದಿ, ಯಾಪಾಟ ಸಣ್ಣಗಾಗಿದ್ದೀ ಮಗು. ಯಾಕಿಷ್ಟು ಒದ್ದಾಡುತ್ತೀ? ನಿನ್ನ ಗಂಡನ ಭಾಗ ಆಸ್ತಿ ನಿನಗೇ ಬರಬೇಕೆಂದು ಪಟ್ಟಣದ ಕೋರ್ಟ್‌ನಲ್ಲಿ ದಾವಾ ಹೂಡಿದ್ದೆ. ಕೇಸೀಗ ನಮ್ಮ ಪರವಾಗೇ ಆಗಿದೆ. ಬೇಕಾದ ಹಾಗೆ ಆಸ್ತಿ ಅಥವಾ ಹಣ ಬರುತ್ತದೆ. ಅದನ್ನನುಭವಿಸಿಕೊಂಡು ಹಾಯಾಗಿರಬಾರದೆ? ಎಷ್ಟು ಎಂದು ಓದಿ ಒದ್ದಾಡುತ್ತೀಯ?"

"ಅಪ್ಪ ಹಾಗನ್ನಬೇಡ, ಇದೊಂದು ವರ್ಷ ಓದಿ ಮುಗಿಸಿದೆನೆಂದರೆ ನನ್ನ ಓದು ಒಂದು ಹಂತಕ್ಕೆ ಬರುತ್ತದೆ. ಅಲ್ಲದೆ ಕಳೆದ ಘಟನೆಗಳನ್ನು ನೆನಪಿಸುವ ಆಸ್ತಿಯಾಗಲೀ, ಹಣವಾಗಲೀ ನನಗೆ ಬೇಡ. ವಿದ್ಯೆಯೇ ನನಗೀಗ ನಿಜವಾದ ಆಸ್ತಿ, ಭವಿಷ್ಯದ ಆಸರೆ."

"ಹಾಗೆಲ್ಲ ಎಲ್ಲರ ಮುಂದು ಹೇಳಬೇಡ ಸುಮತಿ. ನಿನ್ನ ಗಂಡನ ಭಾಗದ ಆಸ್ತಿ ನಿನಗೆ ಬರಬೇಕೆಂದು ನಾನೆಷ್ಟು ಹೊಡೆದಾಡಿದ್ದೇನೆ ಕೋರ್ಟಿನಲ್ಲಿ. ಬರುವ ಹಣ ಬರಲಿ. ಬೇಡ ಎಂದರೆ ಹೇಗೆ. ನಿನ್ನನ್ನು ಹಾಸ್ಟಲಿನಲ್ಲಿಟ್ಟು ಮೆಡಿಕಲ್ ಕಾಲೇಜಿನಲ್ಲಿ ಓದಿಸಲು ನಾನೇನು ಕಡಿಮೆ ಖರ್ಚು ಮಾಡಿದ್ದೇನೆಯೇ?"

"ಹಾಗಿದ್ದರೆ ಆ ಆಸ್ತಿಯನ್ನು ನೀನೇ ಅನುಭವಿಸು, ನನಗೆ ಬೇಡ" ಎಂದು ಹೇಳಿ ಮೌನದ ಮೊರೆಹೊಕ್ಕಳು ಸುಮತಿ.

ಕೊನೆಯ ವರ್ಷದ ಮೆಡಿಕಲ್ ಕಾಲೇಜಿನಲ್ಲಿನ ಪರೀಕ್ಷೆಯನ್ನು ಬರೆದು ಹಳ್ಳಿಗೆ ಬಂದಾಗ, ಹಳ್ಳಿ ಮನೆಯಲ್ಲಿ ಮದುವೆಯ ಸಂಭ್ರಮ. ರಾಜಣ್ಣ, ರಂಗಣ್ಣ ಇಬ್ಬರಿಗೂ ಮದುವೆ ನಿಶ್ಚಯವಾಗಿತ್ತು. ಪರೀಕ್ಷೆ ಹೇಗೂ ಮುಗಿದು ಹೋಗಿದ್ದುದರಿಂದ ಸುಮತಿ ಕೂಡ ಈ ಸಂಭ್ರಮದಲ್ಲಿ ಪಾಲ್ಗೊಂಡಳು.

"ಅಂತೂ ಡಾಕ್ಟರಾಗಬೇಕೆಂಬ ನಿನ್ನ ಗುರಿಯನ್ನು ಸಾಧಿಯೇ ಬಿಟ್ಟೆ" ಎಂದ ರಾಜಣ್ಣ. "ಇನ್ನೂ ಒಂದು ವರ್ಷ ಹೌಸ್ ಸರ್ಜನ್ಸಿ ಇದೆಯಲ್ಲೋ" ಎಂದಳು ಇವಳು. "ಆಗುತ್ತದೆ, ಇಷ್ಟು ಆದದ್ದು ಅಷ್ಟಾಗದೆ ಹೋಗುತ್ತದೆಯೇ?"

"ಆಗುತ್ತದೆ ಎಂಬ ಭರವಸೆ ನನಗೂ ಇದೆ ರಾಜಣ್ಣ."

"ಮುಂದೇನು ಮಾಡಬೇಕೆಂದಿದ್ದೀಯಾ?"

"ಇನ್ನೂ ಒಂದು ವರ್ಷವಿದೆಯಲ್ಲ, ಅದು ಮುಗಿಯಲಿ ಆನಂತರ ಮುಂದಿನದನ್ನು ಯೋಚಿಸೋಣ."

"ಹಾಗಲ್ಲ ನಾನು ಹೇಳಿದ್ದು. ಇನ್ನೂ ಮುಂದಕ್ಕೆ ಓದಬೇಕೆಂಬ ಆಸೆ ಇದೆಯೋ ಹೇಗೆ?"

"ಓದುವುದಕ್ಕೇನು ಕೊನೆ ಮೊದಲೆಂಬುದಿದೆಯೇ? ಆದಿ ಅಂತ್ಯವೆಂಬುದೇ ಇಲ್ಲ. ಆದರ

ನಾನು ಹೌಸ್ ಸರ್ಜನ್ಸಿ ಮುಗಿದ ಮೇಲೆ ಆ ಘಟ್ಟಕ್ಕೆ ನಿಲ್ಲಿಸುತ್ತೇನೆ. ಆಮೇಲೆ ಮೆಡಿಕಲ್ ಜರ್ನಲ್‌ಗಳನ್ನು ತರಿಸಿ ಓದಿಕೊಂಡು ಜ್ಞಾನ ಹೆಚ್ಚಿಸಿಕೊಳ್ಳುತ್ತೇನೆಯೇ ವಿನಾ. ಮತ್ತೆ ಕಾಲೇಜಿಗೆ ಸೇರಿಕೊಳ್ಳುವುದಿಲ್ಲ.''

"ಡಾಕ್ಟರಾಗಿ ಎಲ್ಲಿ ಕೆಲಸ ಮಾಡಬೇಕೆಂದಿದ್ದೀಯ?''

"ಹಳ್ಳಿಯೊಂದರಲ್ಲಿ ಕ್ಲಿನಿಕ್ ತೆರೆದು ಸೇವೆ ಸಲ್ಲಿಸುವುದೇ ನನ್ನ ಉದ್ದೇಶ. ಆದರೆ ಮೊದಲಿಗೇ ನನಗೆ ಯಾವ ಅನುಭವವಿದೆ? ಮೊದಲು ನಾಲ್ಕಾರು ವರ್ಷ ಅನುಭವಿ ಡಾಕ್ಟರ್‌ರ ಕೈ ಕೆಳಗೆ ಕೆಲಸ ಮಾಡಿ ಅನಂತರ ಸ್ವಂತವಾಗಿ ಕ್ಲಿನಿಕ್ ನಡೆಸಬೇಕೆಂಬುದು ನನ್ನ ಉದ್ದೇಶ.''

"ನಿನ್ನೆಲ್ಲ ಉದ್ದೇಶ ಯೋಜನೆಗಳಿಗೆ ಮನೆಯಲ್ಲಿ ನಮ್ಮೆಲ್ಲರ ಸಹಕಾರ, ಬೆಂಬಲ ಇದ್ದೇ ಇದೆ ಸುಮತಿ.''

"ಅದಿರುವುದರಿಂದಲೇ ನಾನಿವತ್ತು ಇಷ್ಟನ್ನಾದರೂ ಸಾಧಿಸಲು ಸಾಧ್ಯವಾಯಿತು. ಇಲ್ಲದೇ ಹೋದಲ್ಲಿ ನನ್ನ ಆಸೆಗಳೆಲ್ಲ ಕನಸಾಗೇ ಉಳಿಯುತ್ತಿತ್ತು'' ಎಂದಳು ಸುಮತಿ.



"ನಿಮ್ಮನ್ನು ನೋಡಿದಾಗಿನಿಂದ ನಮ್ಮ ಮಗನಿಗ ನೀವೇ ಆದರ್ಶವ್ಯಕ್ತಿ ಆಗಿಬಿಟ್ಟಿದ್ದೀರಿ. ಅವನು ನಿಮ್ಮನ್ನೇ ಅನುಸರಿಸುತ್ತಿದ್ದಾನೆ.''

"ಹೌದೆ, ಯಾವುದರಲ್ಲಿ?''

"ಅದೇ, ಸುಳ್ಳು ಹೇಳೋದ್ರಲ್ಲಿ.''

— ಅತುಲಾ ಎಸ್. ಎಸ್.

ಒಂದು ವಾರದ ಅಂತರದಲ್ಲಿ ರಾಜಣ್ಣ, ರಂಗಣ್ಣರ ಮದುವೆ ನಡೆಯಿತು. ರಮ್ಯ, ರಾಧ ಸೊಸೆಯರಾಗಿ ಮನೆ ತುಂಬಿದರು. ಶಂಕರಪ್ಪ, ಶಿವಮ್ಮನಿಗೆ ಎಲ್ಲಿಲ್ಲದ ದುಡಿಮೆ. ಹಳ್ಳಿಗೆಲ್ಲ ಊಟ ಏರ್ಪಾಡಾಯಿತು. ಮನೆತುಂಬ ಬೀಗರು, ನೆಂಟರಿಷ್ಟರು ತುಂಬಿದರು. ಸುಮತಿ ಕೂಡ ದೊಡ್ಡ ಜರಿಯಂಚಿನ ಸೀರೆ ಉಟ್ಟು ಸಡಗರದಿಂದ ಓಡಾಡುತ್ತಿದ್ದಳು. ಎಲ್ಲ ಏರ್ಪಾಡು ಅಚ್ಚುಕಟ್ಟಾಗಿದೆಯೇ. ಕಾರ್ಯಕ್ರಮ ಶಿಸ್ತಿನಿಂದ ನಡೆಯುತ್ತಿದೆಯೇ ಎಂದು ಅವಲೋಕಿಸುವಳು. ಮದುವೆಯ ಗದ್ದಲವೆಲ್ಲ ಮುಗಿದ ಮೇಲೆ ಮನೆಯಲ್ಲಿ ಶಂಕರಪ್ಪ, ಶಿವಮ್ಮನೊಂದಿಗೆ ಗಂಡುಮಕ್ಕಳು, ಸೊಸೆಯರು, ಸುಮತಿ ಉಳಿದರು. ಬೀಗರು ಊಟ ಮುಗಿಸಿ ಉಡುಗೊರೆಯೊಂದಿಗೆ ಹೊರಟರು. ಆ ಹುಣ್ಣಿಮೆಯ ರಾತ್ರಿಯಂದು ಮದುಮಕ್ಕಳು ಕೋಣೆ ಸೇರಿದ್ದರು. ಸುಮತಿ ಕೂಡ ತನ್ನ ಕೋಣೆಯಲ್ಲಿ ಮಲಗಿದ್ದಳು. ಶಂಕರಪ್ಪ, ಶಿವಮ್ಮ ಮನೆಯ ಮುಂದಿನ ಜಗುಲಿಯಲ್ಲಿ ಕುಳಿತು ಮಾತನಾಡುತ್ತಿದ್ದರು. ಜಗುಲಿಯ ಪಕ್ಕದ ಕೋಣೆಯಲ್ಲಿ ಮಲಗಿದ್ದ ತನಗೆ ಅವರಾಡುವ ಮಾತುಗಳೆಲ್ಲ ಕೇಳಿಸುತ್ತಿತ್ತು.

"ಎಲ್ಲ ಚೆನ್ನಾಯಿತು. ಗಂಡು ಮಕ್ಕಳಿಗೆ ಮದುವೆಯಾಗಿ ಸೊಸೆಯರು ಮನೆಗೆ ಬಂದರು. ನಮ್ಮ ಸುಮತಿಯ ಬಾಳೊಂದು ನೇರ್ಪಾಗಿದ್ದಿದ್ದರೆ ಎಷ್ಟು ಚೆನ್ನಾಗಿತ್ತು?''

"ಎಲ್ಲ ಚೆನ್ನಾಗಿದ್ದರೆ ನಮ್ಮನ್ನು ಹಿಡಿಯುವವರು ಯಾರಿದ್ದಾರೆ ಶಿವಮ್ಮ. ಅದಕ್ಕೆಂದೇ

ಪ್ರತಿಯೊಬ್ಬರಿಗೂ ಏನಾದರೊಂದು ಕಷ್ಟ, ಕಾರ್ಪಣ್ಯ ಎಂದು ಇಟ್ಟೇ ಇರುತ್ತಾನೆ. ಇರುವು)ದರಲ್ಲೇ ಸುಖ, ನೆಮ್ಮದಿ ಕಂಡುಕೊಳ್ಳಲು ಪ್ರಯತ್ನಿಸಬೇಕು, ಬೇರೆ ದಾರಿಯಿಲ್ಲ.''

"ಅದೇನೋ ಸಾರ್, ಕೊನೆಗೆ ಡಾಕ್ಟರ್ ಪರೀಕ್ಷೆಗಾದರೂ ಓದಿದಾಳಲ್ಲ ಅದೇ ಸಮಾಧಾನ.''

"ಅವಳು ಒಳ್ಳೆಯ ಹೆಸರುವಾಸಿ ಡಾಕ್ಟರಾಗುತ್ತಾಳೆ ನೋಡುತ್ತಿರು.''

ನಾನು ಮನದಲ್ಲೇ ತರ್ಕಿಸಿದೆ. ಆಡುವ ಹುಡುಗಿಗೆ ಅಪ್ರಾಪ್ತ ವಯಸ್ಸಿನ ಹುಡುಗನೊಬ್ಬನಿಂದ ತಾಳಿ ಕಟ್ಟಿಸಿಬಿಟ್ಟರೆ ಮುಗಿಯಿತೆ. ಅದಕ್ಕೆ ಯಾವ ಅರ್ಥವಿದೆ? ಹಳ್ಳಿಯಲ್ಲಿರುವ ಎಷ್ಟೋ ಹೆಣ್ಣು ಮಕ್ಕಳ ಬಾಳು ಹಾಳಾಗುವುದು ಹೀಗೆ. ಇನ್ನೂ ಪೂರಾ ತಿಳುವಳಿಕೆ ಕೂಡ ಮೂಡದೆ, ಅಜ್ಞಾನ ಅಂಧಕಾರದಲ್ಲಿರುವಾಗಲೇ ಮದುವೆಯ ಬಂಧನ ಎಷ್ಟೋ ಹುಡುಗಿಯರಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿ ಬೇಗ ಬೇಗ ಮಕ್ಕಳೂ ಆಗಿ, ಇಡೀ ಬಾಳೆಂಬುದು ಕೊರಳಿಗೆ ಉರುಳಾಗಿ ಪರಿಣಮಿಸುತ್ತದೆ. ಅದನ್ನು ಪ್ರತಿಭಟಿಸದೆ ಇಡೀ ಜೀವನ ನೋವನ್ನನುಭವಿಸುತ್ತ ಇದು ವಿಧಿ, ಹಣೆಬರಹ ಎಂದು ಕೊರಗುತ್ತ ಜೀವನ ಕಳೆಯುವ ಹೆಣ್ಣುಮಕ್ಕಳು ಎಷ್ಟಿಲ್ಲ?

ಹಾಗೆ ನೋಡಿದರೆ ತನಗೀಗ ಮದುವೆಯ ವಯಸ್ಸು ಎಂದರೆ ತಪ್ಪಿಲ್ಲ. ದೇಹದ ಅಂಗಾಂಗಗಳು ಹೂವಿನಂತೆ ಸಂಪೂರ್ಣವಾಗಿ ವಿಕಸಿತಗೊಂಡು ದುಂಬಿಯ ಝೇಂಕಾರಕ್ಕಾಗಿ ಕಾತರಿಸುತ್ತಿದೆ. ಇಂದು ಮಾಡಬೇಕಾದ ಕೆಲಸವನ್ನು ಎಂದೋ ಮಾಡಿ ಮುಗಿಸಿ, ವಿಧವೆಯೆಂಬ ಪಟ್ಟವನ್ನೂ ಕಟ್ಟಿದುದಾಗಿದೆ. ಆದರೆ ಈಗಷ್ಟೇ ಅರಳಿರುವ ಹೊಚ್ಚ ಹೊಸ ಹೂವಿನಂತೆ, ಅರಳಿರುವ ತನ್ನ ಯೌವನಕ್ಕೆ, ಯೌವನದ ಆಸೆ ಆಕಾಂಕ್ಷೆಗಳಿಗೆ ಬೆಲೆಯೇ ಇಲ್ಲವೇ, ಅರ್ಥವೇ ಇಲ್ಲವೇ?

ಅಣ್ಣಂದಿರಿಬ್ಬರ ಮದುವೆಯನ್ನು ಮುಗಿಸಿಕೊಂಡು ಬೆಂಗಳೂರಿಗೆ ಬಂದ ಸುಮತಿ ಒಂದು ವರ್ಷ ಹೌಸ್‌ಸರ್ಜನ್ಸಿ ಕೋರ್ಸ್ ಮಾಡಬೇಕಿತ್ತು. ಇಷ್ಟು ವರ್ಷಗಳು ಓದಿದ ಓದನ್ನು ಪ್ರಯೋಗಿಸಿ ನೋಡುವ ಕೆಲಸ ಈಗ. ಯಾಕೆಂದರೆ ಯಾವ ವಿದ್ಯೆಯೂ ಕೇವಲ ಪುಸ್ತಕದ ಬದನೇಕಾಯಿ ಎನಿಸಿಕೊಳ್ಳಬಾರದಷ್ಟೆ. ಅದರಲ್ಲೂ ವೈದ್ಯಕೀಯ ವಿದ್ಯೆ ಎಂಬುದಂತೂ ಅತ್ಯಂತ ನಿಖರವಾಗಿ ಅರಿತಿರಬೇಕಾದ ವಿಷಯ. ಯಾಕೆಂದರೆ ಎಷ್ಟೋ ಸಂದರ್ಭಗಳಲ್ಲಿ ವೈದ್ಯನಾದವನು ರೋಗಿಯ ಜೀವನ ಮರಣದ ಜೊತೆಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಒಂದು ವರ್ಷದ ಹೌಸ್ ಸರ್ಜನ್ಸಿ ಕೋರ್ಸ್ ಮುಗಿದೊಡನೆ ನರ್ಸಿಂಗ್ ಹೋಂವೊಂದರಲ್ಲಿ ಡ್ಯೂಟಿ ಡಾಕ್ಟರ್ ಆಗಿ ನೌಕರಿ ಹಿಡಿದಾಯಿತು. ಕೆಲಸ ಸಿಕ್ಕಮೇಲೆ ಚಿಕ್ಕದೊಂದು ಮನೆಯನ್ನೂ ಬಾಡಿಗೆಗೆ ಹಿಡಿದಾಯಿತು.

ಅಪ್ಪ ಅಮ್ಮನನ್ನು ಕರೆದುಕೊಂಡು ಬಂದಳು. ಅವರು ಬಂದು ಕೆಲವು ದಿನಗಳು ಇದ್ದರು. ಅವ್ವ ಬೆಂಗಳೂರನ್ನು ನೋಡಿ ಬೆರಗಾದಳು. "ಇಷ್ಟು ದೊಡ್ಡ ಊರಿನಲ್ಲಿ ಅಷ್ಟೊಂದು ವರ್ಷಗಳಿಂದ ಹೇಗೆ ನಿಭಾಯಿಸುತ್ತಿದ್ದೀಯ ಹುಡುಗಿ'' ಎಂದು ಅಚ್ಚರಿಪಟ್ಟಳು. ರಂಗಣ್ಣ, ರಾಜಣ್ಣ ಕೂಡ ಅವರ ಸಂಸಾರದೊಂದಿಗೆ ಬಂದು ಕೆಲವು ದಿನಗಳು ಇದ್ದು ಬೆಂಗಳೂರಿನಲ್ಲೆಲ್ಲ ಸುತ್ತಾಡಿದರು. ಇಂಜಿನಿಯರೊಬ್ಬನೊಡನೆ ನಂದಿತಾಳ ಮದುವೆ ನಿಶ್ಚಯವಾಯಿತು. ಅವಳ ಮದುವೆಯ ಸಲುವಾಗಿ ಎರಡು ದಿನ ನರ್ಸಿಂಗ್ ಹೋಂಗೆ ಹೋಗಲಾಗಲಿಲ್ಲ. ವಿನುತಾ ತನ್ನ ಪ್ರಿಯಕರನೊಂದಿಗೆ ಪ್ರೇಮವಿವಾಹ ಮಾಡಿಕೊಂಡಿದ್ದಳು. ಈ ವಿಚಾರ ತಿಳಿಸಿ ನನಗೆ ಪತ್ರ

ಕೂಡ ಬರೆದಿದ್ದಳು.

ಓದುವಾಗಿನ ಅನುಭವಗಳು ಒಂದಾದರೆ ಕೆಲಸಕ್ಕೆ ಸೇರಿದ ಮೇಲಿನ ಅನುಭವಗಳೇ ಬೇರೆ. ಅನೇಕ ತರದ ರೋಗಿಗಳು, ದೈಹಿಕ ತೊಂದರೆ ಇರುವವರು, ಮಾನಸಿಕ ತೊಂದರೆ ಇರುವವರು ನರ್ಸಿಂಗ್ ಹೋಂಗೆ ಬರುತ್ತಿದ್ದರು. ಹಲವು ಬಗೆಯ ಜನ, ಹಲವು ರೀತಿಯ ಸ್ವಭಾವಗಳು. ಇವರಲ್ಲಿ ಎರಡು ರೀತಿಗಳು ಒಳರೋಗಿಗಳು, ಹೊರ ರೋಗಿಗಳು. ಆಸ್ಪತ್ರೆಗೆ ದಾಖಲೆಯಾಗಿ ಅಲ್ಲಿಯೇ ಇರುತ್ತಿದ್ದವರು ಕೆಲವರಾದರೆ ಕಾಯಿಲೆ ಗುಣವಾಗುವವರೆಗೆ, ಔಷಧಿ ಪಡೆದುಕೊಂಡು ಹೊರಟು ಬಿಡುತ್ತಿದ್ದವರು ಮತ್ತೆ ಕೆಲವರು.



ಸುಖ

ಇದ್ದರೆ ಸಾಕು ನಮಗೊಂದು ಸೂರು
ಬರುವುದು ಬೇಡ ಆಸೆ ಮನದಿ ನೂರಾರು
ಆಸೆಯೇ ದುಃಖದ ಮೂಲ ಕೇಳಯ್ಯ
ಇದ್ದದ್ದರಲ್ಲೇ ಸುಖವ ಕಾಣುವೆವಯ್ಯ.

— ಬಸವಣ್ಣ

ರೋಗಿಯನ್ನು ತಾಳ್ಮೆಯಿಂದ, ಸೂಕ್ಷ್ಮವಾಗಿ ಪರೀಕ್ಷಿಸಿ ನಿಧಾನವಾಗಿ ಮಾತನಾಡಿಸಿ ಅವರ ನಿಜವಾದ ಕಾಯಿಲೆ ಏನು ಎಂಬುದನ್ನು ಪತ್ತೆಮಾಡಿ, ಅದಕ್ಕೆ ಸೂಕ್ತವಾದ ಔಷಧಿಯನ್ನು ಸಲಹೆ ಮಾಡುವುದು ಸುಲಭವಾದ ಕೆಲಸವೇನಲ್ಲ. ಅತಿ ಜಾಗರೂಕತೆಯಿಂದ, ಹುಶಾರಾಗಿ ಮಾಡಬೇಕಾದ ಕೆಲಸವಿದು. ಕೊಟ್ಟ ಔಷಧದಿಂದ ರೋಗಿಯ ಕಾಯಿಲೆ ಗುಣವಾಗಬೇಕು ಎಂಬುದು ಒಂದಾದರೆ, ತೆಗೆದುಕೊಂಡ ಔಷಧದಿಂದ ಕಾಯಿಲೆ ಗುಣವಾಗುವುದರ ವಿನಾ ಬೇರಾವುದೇ ಪರಿಣಾಮ ಉಂಟಾಗಬಾರದು ಎಂಬುದು ಮತ್ತೊಂದು ಮುಖ್ಯವಾದ ವಿಷಯ.

ಹೀಗೆ ಒಂದೊಂದು ಅಂಶವನ್ನೇ ಎಚ್ಚರಿಕೆಯಿಂದ ಅಭ್ಯಸಿಸುತ್ತ ವೃತ್ತಿಯಲ್ಲಿ ತಾದ್ಯಾತ್ಮವನ್ನು ಹೊಂದುತ್ತಿದ್ದಂತೆ, ಆ ಸಂದರ್ಭದಲ್ಲಿಯೇ ಅಲ್ಲವೇ ತನಗೆ ಸುಧೀರನ ಪರಿಚಯವಾದದ್ದು?

ತಾನು ಡ್ಯೂಟಿ ಡಾಕ್ಟರಳಾಗಿ ಕೆಲಸ ಮಾಡುವ ನರ್ಸಿಂಗ್ ಹೋಂನಲ್ಲಿಯೇ ಸುಧೀರ ಮಕ್ಕಳ ತಜ್ಞನಾಗಿ ಕೆಲಸ ಮಾಡುತ್ತಾನೆ. ಒಂದೇ ವೃತ್ತಿಯವರೂ ಒಂದೆಡೆಯಲ್ಲಿ ಕೆಲಸ ಮಾಡುವ ನಾವಿಬ್ಬರೂ ಪರಸ್ಪರ ಆಕರ್ಷಿತರಾದುದರಲ್ಲಿ ಅಸಹಜವಾದ ಅಂಶವೇನಿಲ್ಲ. ದಿನಗಳುರುಳಿದಂತೆ ತಮ್ಮಿಬ್ಬರ ಗಾಢವಾದ ಸ್ನೇಹ ಪ್ರೇಮಕ್ಕೆ ತಿರುಗಿತು. ಒಬ್ಬರನ್ನೊಬ್ಬರು ಅಗಲಿರದಂತಾ ಸ್ಥಿತಿ ಬಂದಿದೆ ಎನಿಸಿದಾಗ ಸುಧೀರ ಮದುವೆಯ ಮಾತು ತೆಗೆದ. ಆದರೆ ನೇರವಾಗಿ ಒಪ್ಪಿಬಿಡುವಂತಿದ್ದನೇ ತಾನು? ತನ್ನ ಹಿಂದಿನ ಘಟನೆ ಸ್ಥಿತಿ ಇವುಗಳನ್ನು ತಿಳಿಸುವುದೇ ಅವನಿಗೆ, ತಿಳಿಸದೇ ಇರುವುದೇ? ತಿಳಿಸಿದರೆ ವಿಧವೆಯಾದ ತನ್ನನ್ನು ಮರುಮದುವೆಯಾಗಲು ಒಪ್ಪುವನೇ, ಒಪ್ಪದೇ ಇರುವನೇ?

ತನ್ನ ಮೇಲಿನ ಅನುಕಂಪದಿಂದ ಒಪ್ಪಿದರೂ ಒಪ್ಪಬಹುದು. ಆದರೆ ಯಾರಿಂದ

ಯಾವುದೇ ಬಗೆಯ ಅನುಕಂಪ ಬಯಸುವವಳು ತಾನಲ್ಲ. ತನಗದು ಬೇಕಿಲ್ಲ. ಸುಧೀರನ ವಿಚಾರವಾದರೂ ಅಷ್ಟೆ. ಕೇವಲ ಪ್ರೇಮದಿಂದ ತನ್ನನ್ನು ಒಪ್ಪಿಕೊಂಡು ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳುವುದಾದರೆ ಸರಿ, ಇಲ್ಲವೇ ಅವನ ಸಹವಾಸವೂ ತನಗೆ ಬೇಡ. ಯಾವುದಕ್ಕೂ ತಾನು ಇರುವ ವಿಚಾರವನ್ನು ನೇರವಾಗಿ ಹೇಳಬೇಕು ತಾನೆ? ಹೌದು ಹೇಳಲೇಬೇಕು. ಆದರೆ ಈ ವಿಚಾರವನ್ನೆಲ್ಲ ಹೇಗೆ ಹೇಳುವುದು? ಹೇಗೆ ಪ್ರಸ್ತಾಪ ಮಾಡುವುದು ಎಂಬ ಚಿಂತೆಯಲ್ಲಿರುವಾಗಲೇ ನಿನ್ನ ವಿಚಾರವೆಲ್ಲ ನನಗೆ ಗೊತ್ತು ರಂಗಣ್ಣನಿಂದ ಎಂದ ಸುಧೀರ.

ರಂಗಣ್ಣ ನನ್ನ ಕೆಲಸವನ್ನು ಹಗುರಗೊಳಿಸಿದ್ದ. ನನ್ನ ಹಿಂದಿನ ಬಾಳ ಅಹಿತಕರ ಘಟನೆಗಳನ್ನು ಸುಧೀರನಿಗೆ ವಿವರಿಸಿ ಹೇಳಿದ್ದ. "ಎಲ್ಲ ವಿಚಾರ ತಿಳಿದೂ ನನ್ನನ್ನು ಮದುವೆಯಾಗಲು ಇಚ್ಛಿಸುತ್ತೀರಾ ಸುಧೀರ?'' ಎಂದು ಕೇಳಿದೆ ನಾನು.

"ಇಚ್ಛಿಸುವುದು ಮಾತ್ರವಲ್ಲ ನಾನು ಮದುವೆಯಾಗುವುದಾದರೆ ನಿನ್ನನ್ನು ಮಾತ್ರವೇ'' ಎಂದಿದ್ದ. ಜೊತೆಗೆ ಮತ್ತೊಂದು ಮಾತು ಸೇರಿಸಿದ.

"ನೀನೊಪ್ಪಿದರೆ ಮಾತ್ರ'' ಎಂದು.

ತನಗೇನೋ ಸುಧೀರನ ಬಾಳ ಸಂಗಾತಿಯಾಗುವುದು ಇಷ್ಟವೇ. ಆದರೆ ಮನೆಯವರೇನನ್ನುವರೋ. ಅಪ್ಪ ಸುಲಭದಲ್ಲಿ ಒಪ್ಪುವವಳಲ್ಲ, ಉಳಿದವರ ಅಭಿಪ್ರಾಯ ಹೇಗೋ, ಏನೋ?

"ಯಾವುದಕ್ಕೂ ಮನೆಯವರನ್ನೊಮ್ಮೆ ಕೇಳಿ ಬರುತ್ತೇನೆ ಸುಧೀರ್'' ಎಂದಳು. "ಧಾರಾಳವಾಗಿ ಕೇಳಿ. ಮನೆಯವರ ಅಭಿಪ್ರಾಯ ಏನೇ ಇದ್ದರೂ ನೀವು ಕೈಗೆ ನಿಲುಕದ ನಕ್ಷತ್ರವಾಗದೆ ನನ್ನ ಮನೆ, ಮನ ಬೆಳಗುವ ಬೆಳಕಾಗುತ್ತೀರಿ'' ಎಂಬುದೇ ನನ್ನ ದೃಢವಾದ ನಂಬಿಕೆ ಎಂದಿದ್ದ ಸುಧೀರ್.

ಅವನ ಮಾತಿಗೆ ಏನೊಂದೂ ಉತ್ತರ ಹೇಳದೆ ಮುಗುಳ್ನಕ್ಕು ಹೊರಟು ಬಂದಿದ್ದಳು ಸುಮತಿ. ಹಳ್ಳಿಗೆ ಬಂದಾಗಿದೆ, ಬಂದದಿನವೇ ಈ ವಿಚಾರದ ಪ್ರಸ್ತಾಪ ಹೇಗೆ ಮಾಡುವುದು ನಾಳೆ ಕೇಳಿದರಾಯಿತು ಎಂದುಕೊಂಡು ಮಲಗಿದ ಸುಮತಿಗೆ, ಕಳೆದ ಘಟನೆಗಳ ಗುಂಗಿನಿಂದ ಹೊರಬಂದು, ನಿದ್ದೆಯಂಗಳಕ್ಕೆ ಯಾವಾಗ ಜಾರಿದಳೋ ಅವಳಿಗೇ ತಿಳಿಯದು.

ಮರುದಿನ ಎಂದಿಗಿಂತ ತಡವಾಗಿಯೇ ಎದ್ದಳು ಸುಮತಿ. ಯಾಕೆ ಸುಮತಿ ಇಷ್ಟು ಹೊತ್ತಾದರೂ ಎದ್ದಿಲ್ಲ ಎಂದು ಮನೆಯಲ್ಲಿ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಯಾಕೆಂದರೆ ಆಲಸ್ಯ ಅವಳ ಜೀವನದಿಂದ ಗಾವುದ ದೂರ. ಅವಳೆಂದೂ ಸೂರ್ಯ ಹುಟ್ಟಿದ ಮೇಲೆ ಮಲಗಿದವಳೇ ಅಲ್ಲ. ಈಗ ಮೆಡಿಕಲ್ ಕಾಲೇಜಿಗೆ ಸೇರದ ಮೇಲೆ, ಡಾಕ್ಟರಾದ ಮೇಲೆ ಈ ಪರಿ ಎಂದರ್ಥವಲ್ಲ. ಚಿಕ್ಕಂದಿನಿಂದಲೂ ಹಾಗೆಯೇ. ಅಕಸ್ಮಾತ್ ಹೊತ್ತು ಮೂಡಿದ ಮೇಲೆಯೂ ಅವಳು ಮಲಗಿದ್ದರೆ, ಅದು ಅನಾರೋಗ್ಯವಿದ್ದಾಗ ಮಾತ್ರ. ಮನೆ ಮಂದಿಯೆಲ್ಲ ಶಿವಮ್ಮ ಮಾಡಿದ ರಾಗಿರೊಟ್ಟಿ ಈರುಳ್ಳಿ ಚಟ್ನಿ ತಿನ್ನುತ್ತ ಕುಳಿತರೂ ಸುಮತಿಯ ಸುಳಿವಿಲ್ಲದಾಗ ಎಲ್ಲರಿಗೂ ಸಹಜವಾಗಿಯೇ ಆತಂಕವಾಯಿತು.

"ಏನಾಯಿತು ಮಗುವಿಗೆ, ಆರೋಗ್ಯ ಚೆನ್ನಾಗಿಲ್ಲವೋ ಏನೋ ಅದಕ್ಕೆ ಇನ್ನೂ ಎದ್ದಿಲ್ಲ.'' ಶಂಕರಪ್ಪ ನುಡಿದರು.

"ಏ, ಆರೋಗ್ಯ ಎಲ್ಲ ಚೆನ್ನಾಗೇ ಇದೆ ಬಿಡಿ, ನಿನ್ನೆಯೆಲ್ಲ ಅವಳು ಚಟುವಟಿಕೆಯಿಂದಲೇ ಇರಲಿಲ್ಲವೇ? ಈ ಸಲ ಬೆಂಗಳೂರಿನಿಂದ ಬಂದಾಗ ಬಸ್ಸಿನಲ್ಲಿ ವಿಪರೀತ ಜನ ಇರಬೇಕು. ಕುಳಿತುಕೊಳ್ಳಲು ಸೀಟು ಸಿಕ್ಕಿತೋ ಇಲ್ಲವೋ, ನಿಂತುಕೊಂಡೇ ಬಂದಿರಬೇಕು. ಬಸ್ ನಿಂತಲ್ಲಿಂದ ಮನೆಯವರೆಗೆ ನಡೆದೇ ಬಂದಿದ್ದಾಳೆ. ಹಾಗಾಗಿ ಪ್ರಯಾಣದ ಆಯಾಸ ಮಲಗಿದ್ದಾಳೆ.'' ಶಿವಮ್ಮನ ವಿಚಾರಧಾರೆ ಇದು.

"ಮಲಗಿರಲಿ ಬಿಡು ಅಪ್ಪ, ಈಗೇನು ಪರೀಕ್ಷೆಯೇ, ಓದುಬರಹದ ಆತಂಕವಿದೆಯೇ ಅವಳಿಗೆ. ಬೆಂಗಳೂರಿನಲ್ಲಾದರೆ ಬೇಗ ಎದ್ದು ನರ್ಸಿಂಗ್ ಹೋಂಗೆ ಹೋಗಬೇಕೆಂಬ ಕೆಲಸವಾದರೂ ಇದೆ. ಇಲ್ಲಿ ಯಾವ ಆತಂಕವಿದೆ.'' ರಾಜಣ್ಣ ನುಡಿದ.

ಇವರೆಲ್ಲ ಇಷ್ಟು ಮಾತನಾಡಿಕೊಳ್ಳುವ ವೇಳೆಗೆ ಎದ್ದು ಬಂದಳು ಸುಮತಿ. ಎದ್ದವಳೇ ಹಿತ್ತಲಕಡೆ ಹೋಗಿ ಮುಖ ತೊಳೆದು ಬಂದಳು. ಎಲ್ಲರೂ ಒಂದೆಡೆ ಕುಳಿತು ತಿಂಡಿ ತಿನ್ನುತ್ತಿದ್ದುದನ್ನು ಕಂಡು ಅವಳೂ ತಿಂಡಿಯ ತಟ್ಟೆ ಕೈಗೆ ತೆಗೆದುಕೊಂಡಳು.

"ಯಾಕೆ ಮಗು, ಮೈಯಲ್ಲಿ ಸ್ವಸ್ಥವಿಲ್ಲವೇ? ಬಹಳ ಹೊತ್ತು ಮಲಗಿ ನಿದ್ರಿಸಿಬಿಟ್ಟೆ?'' ಕಳಕಳಿಯಿಂದ ಮಗಳನ್ನು ಕೇಳಿದರು ಶಂಕರಪ್ಪ.

"ಸ್ವಸ್ಥವಾಗಿಯೇ ಇದ್ದೇನಪ್ಪ. ರಾತ್ರಿ ಬಹಳ ಹೊತ್ತು ನಿದ್ದೆ ಬರಲಿಲ್ಲ. ಹಾಗಾಗಿ ಎದ್ದದ್ದು ತಡವಾಯಿತು.'' ಶಿವಮ್ಮ ಮಗಳಿಗೆ ರಾಗಿರೊಟ್ಟಿ ಬೆಣ್ಣೆ, ಚಟ್ನಿ ತಂದುಕೊಟ್ಟಳು.

"ಅಪ್ಪ ನಿಮ್ಮಲ್ಲಿ ಒಂದು ವಿಚಾರ ಹೇಳಬೇಕು ಎಂದಿದ್ದೇನೆ.''

"ಹೇಳು ಮಗು.''

"ಆದರೆ ಹೇಗೆ ಹೇಳುವುದು ಎಂದೇ ತೋಚುತ್ತಿಲ್ಲ.''

"ಹೇಳು ಮಗು, ಅದಕ್ಕೇಕಿಷ್ಟು ಸಂಕೋಚ?''

"ಅಪ್ಪಾ, ನಾನು ಮತ್ತೆ ಮದುವೆಯಾಗಬೇಕೆಂದಿದ್ದೇನೆ.''

"ಏನು?''

"ಹೌದು ಅಪ್ಪಾ, ನಾನು ಮತ್ತೆ ಮದುವೆಯಾಗಬೇಕೆಂದಿದ್ದೇನೆ.''

"ಮರು ಮದುವೆಯೇ?'' ರಾಜಣ್ಣ ಕೇಳಿದ.

"ಇದೇನು ಬುದ್ಧಿ ಬಂತು ಸುಮತಿ ನಿನಗೆ, ನೋಡಿದವರೇನೆಂದಾರು''

"ನೋಡಿದವರು ಏನಾದರೂ ಹೇಳಲಿ, 'ಅವರೇನು ಕಷ್ಟ ಸುಖಕ್ಕೆ ಒದಗುತ್ತಾರೆಯೇ? ನಿನಗೆ ಹೇಗೆ ಸೂಕ್ತ ಕಾಣುವುದೋ ಹಾಗೆ ಮಾಡು ಸುಮತಿ.'' ರಾಜಣ್ಣ ಹೇಳಿದ.

"ನೀನೇನೋ ಮತ್ತೆ ಮದುವೆಯಾಗಬೇಕೆಂದು ಆಸೆ ಪಡಬಹುದು. ಆದರೆ ವಿಧವೆಯನ್ನು ಮತ್ತೆ ಯಾರು ಮದುವೆಯಾಗುತ್ತಾರೆ?''

"ಅವರೂ ಒಬ್ಬರು ಡಾಕ್ಟರೇ ಅಪ್ಪ. ನಾನು ಕೆಲಸ ಮಾಡುವ ನರ್ಸಿಂಗ್ ಹೋಂನಲ್ಲೇ ಅವರೂ ಡಾಕ್ಟರಾಗಿ ಕೆಲಸ ಮಾಡುತ್ತಾರೆ.''

"ಅವರು ನಿನ್ನನ್ನು ಮದುವೆಯಾಗಲು ಒಪ್ಪಿದ್ದಾರೆಯೇ ಮಗು?''

"ಹೌದು ಅಪ್ಪ, ನನ್ನೆಲ್ಲ ವಿಚಾರವನ್ನು ತಿಳಿದೂ ನನ್ನ ಕೈ ಹಿಡಿಯಲು ಮುಂದೆ ಬಂದಿದ್ದಾರೆ.''

"ಅಪ್ಪ, ಅವಳು ಮತ್ತೆ ಮದುವೆಯಾಗಿ ನಮ್ಮ ಹಾಗೆ ಸುಖವಾಗಿರಲಿ ಬಿಡು ಅಪ್ಪ."

"ಮಗು ಅವರು ನಿನ್ನನ್ನು ಮದುವೆಯಾಗಲು ಒಪ್ಪಿದಲ್ಲಿ ನನ್ನದೇನೂ ಅಭ್ಯಂತರವಿಲ್ಲ."

"ಅಪ್ಪ ಸುಧೀರ್ ಕೂಡ ಒಳ್ಳೆಯ ಡಾಕ್ಟರು. ಮಕ್ಕಳ ತಜ್ಞರು. ಆದರ್ಶವಾದಿಗಳು. ನಾವಿಬ್ಬರೂ ಪರಸ್ಪರ ಒಪ್ಪಿ ಮದುವೆಯಾಗುತ್ತಿದ್ದೇವೆ. ನಮಗೆ ನಿಮ್ಮ ಆಶೀರ್ವಾದ ಬೇಕು."

"ಅದಕ್ಕೇಕಿಷ್ಟು ಕೊರಗುತ್ತೀ ಮಗು. ಇರುವ ಒಬ್ಬ ಮಗಳ ಪಾಡು ಹೀಗಾಯಿತಲ್ಲ ಎಂಬ ಕೊರಗು ನನ್ನನ್ನು, ಶಿವಮ್ಮನನ್ನು ಅನವರತ ಬಾಧಿಸುತ್ತಿತ್ತು. ದೇವರು ಅದಕ್ಕೆ ಈ ರೀತಿಯಲ್ಲಿ ಪರಿಹಾರ ಸೂಚಿಸುತ್ತಾನೆ ಎಂದುಕೊಂಡಿರಲಿಲ್ಲ ನಾನು. ಆ ದೇವರು ನಮ್ಮ ಭಾಗಕ್ಕೆ ಎಷ್ಟು ದಯಾಮಯಿ."

"ಅಷ್ಟೇ ಅಲ್ಲ ಅಪ್ಪ. ಅವರಿಗೂ ಪಟ್ಟಣದಲ್ಲಿಯೇ ಡಾಕ್ಟರಾಗಿ ಉಳಿಯುವುದು ಇಷ್ಟವಿಲ್ಲ ಅಪ್ಪ. ನಾವಿಬ್ಬರೂ ಈ ಚೆಲುವಿನಹಳ್ಳಿಯಲ್ಲಿಯೇ ಕ್ಲಿನಿಕ್ ತೆರೆದು ಈ ಹಳ್ಳಿಯ ಸುತ್ತ ಮುತ್ತಲಿನ ಹಳ್ಳಿಯ ಜನರ ಯೋಗಕ್ಷೇಮ ಹೊಣೆಯನ್ನು ಹೊರಬೇಕು ಎಂದುಕೊಂಡಿದ್ದೇವೆ."

"ಬಹಳ ಸಂತೋಷ ಮಗು, ಆ ಕ್ಲಿನಿಕ್ ತೆರೆಯಲು ಬೇಕಾಗುವ ಖರ್ಚನ್ನು ನಾನು ಕೊಡುತ್ತೇನೆ."

"ನಾನು ಈ ದಿನವೇ ಹೊರಡಬೇಕು ಅಪ್ಪ. ನನ್ನನ್ನು ಮದುವೆಯಾಗುತ್ತೀಯಾ ಎಂಬ ಸುಧೀರನ ಪ್ರಶ್ನೆಗೆ ನಾನಿನ್ನೂ ಯಾವ ಉತ್ತರವನ್ನೂ ಹೇಳಿಲ್ಲ. ಯಾವುದಕ್ಕೂ ಮನೆಯಲ್ಲಿ ಕೇಳಿ ತಿಳಿಸುತ್ತೇನೆ ಎಂದಿದ್ದೇನೆ."

"ಈ ಶುಭಕಾರ್ಯಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ ಮಗು. ರೇಡಿಯೋದಲ್ಲಿ ಹಾಡೊಂದು ಬರುವುದಲ್ಲ. ಬೆಳಕು ಬಂದಿದೆ ಮನೆಯ ಹೊಸ್ತಿಲಾವರೆಗೆ, ಕಿಟಕಿ ಬಾಗಿಲ ತೆರೆದು ಬರಮಾಡು ಒಳಗೆ ಎಂದು. ಆ ಪುಣ್ಯಾತ್ಮ ನಿನ್ನ ಬಾಳಿನ ಕತ್ತಲನ್ನು ಓಡಿಸಿ, ಬೆಳಕು ಸುರಿಸುತ್ತೇನೆಂದರೆ, ನಾನಾದರೂ ಏಕೆ ಬೇಡವೆನ್ನಲಿ? ನಿನ್ನೊಂದಿಗೆ ನಾನು ಬೆಂಗಳೂರಿಗೆ ಬರುತ್ತೇನೆ, ಆ ಹುಡುಗನನ್ನು ಕಂಡು ಬರುತ್ತೇನೆ."

"ಹಾಗೇ ಮಾಡಿ ಅಪ್ಪ, ಸುಧೀರ ನನ್ನ ಬಾಳಿನ ಕತ್ತಲನ್ನು ಕಳೆದು ಬರಿಯ ಬೆಳಕನ್ನು ಸುರಿಸಿಲ್ಲ. ಹೊಂಬೆಳಕನ್ನು ಚೆಲ್ಲಿದ್ದಾರೆ. ವಿಜ್ಞಾನದ ಮುನ್ನಡೆಯಿಂದ ಪಟ್ಟಣದ ಜನಜೀವನ ಮುಂದುವರಿದಿದ್ದರೂ ಹಳ್ಳಿಗಳಲ್ಲಿನ್ನೂ ಅಜ್ಞಾನ, ಅಂಧಕಾರದಲ್ಲೇ ಮುಳುಗಿದೆ. ಇಲ್ಲಿಯೇ ನೆಲೆಸಿ ಹಳ್ಳಿಯ ಜನಗಳ ದೈಹಿಕ ಮಾನಸಿಕ ಆರೋಗ್ಯದ ತಪಾಸಣೆಯೊಂದಿಗೆ, ಅಜ್ಞಾನ, ಅಂಧಕಾರವನ್ನು ಆದಷ್ಟು ಹೋಗಲಾಡಿಸಿ, ಹಳ್ಳಿಗರನ್ನು ಅಕ್ಷರಸ್ಥರನ್ನಾಗಿ ಮಾಡುವುದರ ಮೂಲಕ ಅವರ ಬದುಕಿನಲ್ಲೂ ಹೊಂಬೆಳಕನ್ನು ಚೆಲ್ಲುವ ಸಂಕಲ್ಪ ನನ್ನ ಹಾಗೂ ಸುಧೀರನದು. ಇದರಲ್ಲಿ ನಾವು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತೇವೆಯೋ ಈಗಲೇ ಹೇಳಲು ಬರುವುದಿಲ್ಲ. ಆದರೆ ಪ್ರಯತ್ನವಂತೂ ನಮ್ಮದು."

"ನಿಮ್ಮ ಮಾತು ನಿಜ ಮಗು. ನಿನ್ನಂಥ ಮಗಳನ್ನು ಪಡೆದ ನಾನು, ಶಿವಮ್ಮ ಧನ್ಯರು" ಎಂದರು ಶಂಕರಪ್ಪ.

ಮ್ಯಾಗಜಿನ್

ವಿಭಾಗ

ಸಣ್ಣ ಕಥೆ

ಮಧ್ಯಮ ವರ್ಗದವರ ಮಾಮೂಲಿ ಕತೆ

ವಿಶ್ವಾಮಿತ್ರ

ಸಿಟ ಬಸ್ಸು ಚಲಿಸುತ್ತಿತ್ತು.

ಸಾವಿತ್ರಿ ಬೆವರನ್ನು ಒರಸಿಕೊಂಡು ದುಡ್ಡು ತೆಗೆಯಲು ಹೋದಾಗ ಅವಳ ಪಕ್ಕದಲ್ಲಿ ತೂರಾಡುತ್ತ ಬಂದು ಕುಳಿತ ವ್ಯಕ್ತಿ "ಬೇಡ, ನಾನೇ ಕೊಡ್ತೀನಿ'' ಎಂದು ದುಡ್ಡು ಕೊಟ್ಟು ಟಿಕೆಟ್ ಪಡೆದುಕೊಂಡನು. ಗಪ್ ಎಂದು ಬಂದ ವಿಸ್ಕಿಯ ವಾಸನೆಯಿಂದ ಮುಖ ಸಿಂಡರಿಸಿದಳು.

"ಕೋಪಾನ ಚಿನ್ನಾ.'' ಅವಳ ಭುಜ ಸವರುತ್ತ ಕೇಳಿದ.

"ಏನದು ಬಸ್ನಲ್ಲಿ, ಸುಮ್ನೆ ಕೂರಿ.'' ಅವನ ಕೈ ಸರಿಸಿದಳು.

"ನಂಗೊತ್ತು. ಪೂರ್ತಾ ದುಡ್ಡು ಕೊಡಲಿಲ್ಲ ಅಂತ ನಿಂಗೆ ಕೋಪ. ನಾನೇನೂ ಪೂರ್ತಾ ಖರ್ಚು ಮಾಡಿಲ್ಲ ತಗೋ'' ಎಂದು ನೂರರ ನಾಲ್ಕು ನೋಟುಗಳನ್ನು ಅವಳ ಮುಂದೆ ಹಿಡಿದ.

ಅಕ್ಕಪಕ್ಕದ ಸೀಟನಲ್ಲಿದ್ದವರು ಕುತೂಹಲ ದಿಂದ ನೋಡಿದರು.

ಹಣ ಕಂಡು ಅವಳ ಮನಸ್ಸು ಸಂತಸಗೊಳ್ಳಲಿಲ್ಲ. ತಿಂಗಳ ಪೂರ್ತಾ ಈ ಹಣದಲ್ಲೇ ಕಳೆಯಬೇಕಲ್ಲ ಹೇಗಪ್ಪಾ ದೇವರೆ ಎಂದುಕೊಂಡಳು. ತಕ್ಷಣ ನೋಟುಗಳನ್ನು ಮಡಚಿ ರವಿಕೆಯೊಳಗೆ ಸೇರಿಸಿದಳು.

ಅವನು ಅವಳ ಬೆರಳುಗಳೊಂದಿಗೆ ಆಟವಾಡುತ್ತ "ನೀನು ತುಂಬ ಒಳ್ಳೆಯವಳು'' ಎಂದು ಪುನಾ ಕೆನ್ನೆ ಸವರಿದನು.

"ಸುಮ್ನಿರಿ. ಎಲ್ಲ ನಮ್ಮನ್ನೇ ನೋಡ್ತಾ ಇದ್ದಾರೆ'' ಎಂದು ರೇಗಿದಳು. ಅಂದು ಅವಳ ಮೂರು ವರ್ಷದ ಮಗುವಿನ ಹುಟ್ಟಿದ ಹಬ್ಬ. 'ಇವತ್ತು ಸಂಬಳ ಆಗುತ್ತೆ. ನೀನು ಆಫೀಸಿನ ಹತ್ತಿರ ಹನ್ನೊಂದು ಗಂಟೆಗೆ ಬಾ. ನಾನು ರಜ ಹಾಕಿ ಬರ್ತೀನಿ. ಇಬ್ಬರೂ ಹೋಗಿ ಮನೆಗೆ ಬೇಕಾಗುವ ಸಾಮಾನುಗಳು, ಮಗುವಿಗೆ ಹೊಸ ಬಟ್ಟೆತಂದು ಹುಟ್ಟಿದ ಹಬ್ಬ ಗ್ರಾಂಡಾಗಿ ಮಾಡೋಣ' ಎಂದು ಅವಳ ಗಂಡ ಅಂದಿದ್ದ. ಆಸೆಯಿಂದ ಬಂದವಳಿಗೆ ಪ್ರತೀ ಸಂಬಳದ ದಿವಸದಂತೆ ಈ ದಿವಸವೂ ನಿರಾಸೆಯಾಗಿತ್ತು.

ಕುಡಿತದ ಅಮಲು, ಪಕ್ಕದಲ್ಲಿ ಎಣ್ಣೆಗೆಂಪಿನ ತುಂಬುಪ್ರಾಯದ ಚೆಲುವೆ. ಅವನು ಮತ್ತಿನಲ್ಲಿ ಅರಿವಿಲ್ಲದೆ ಅವಳ ತೊಡೆಯನ್ನು ಜಿಗುಟದನು. ಅವಳು ನೋವಿನಿಂದ ಕಿರುಚಿದಳು.

ಯಾರೋ ಕಂಡಕ್ಟರ್‌ನ ಕಿವಿಯಲ್ಲಿ ಪಿಸು ಗುಟ್ಟಿದರು. ಅವನು "ಹೌದ?'' ಎಂದು ಕೇಳಿದ. ಕೆಲವರು "ಹೌದು. ನಾವೇ ಕಣ್ಣಾರೆ ನೋಡಿ ದೆವು'' ಎಂದರು. ಕಂಡಕ್ಟರ್ ಬಂದು ಡ್ರೈವರ್‌ಗೆ ಏನೋ ಹೇಳಿದ. ಬಸ್ಸು ಹೋಗುತ್ತಿತ್ತು.

"ಸಾಕಾಗಲಿಲ್ಲ ಅಂದ್ರೆ ಇನ್ನೂ ತಗೋ. ಕೋಪ ಮಾತ್ರ ಮಾಡ್ಕೊಬೇಡ'' ಎಂದು ಪುನಾ ಇಪ್ಪತ್ತರ ನೋಟೊಂದನ್ನು ಅವಳ ಮುಂದೆ ಹಿಡಿದ. ಕುಡುಕನ ಮನಸ್ಸು ಈಗಿದ್ದ ಹಾಗೆ ಇನ್ನೊಂದು ಕ್ಷಣ ಇರೋಲ್ಲ ಎಂದುಕೊಂಡು ದುಡ್ಡನ್ನು ಪಡೆಯಲು ಕೈ ಚಾಚಿದಳು.

"ನಾನು ಹೇಳಲಿಲ್ಲವೆ. ನೋಡಿ, ನೋಡಿ ಈಗ ನೀವೇ ನೋಡಿ ಇವಳ ವ್ಯವಹಾರ'' ಎಂದು ಯಾವನೋ ಗಬಕ್ಕನೆ ನೋಟನ್ನು ಹಿಡಿದಿದ್ದ ಅವಳ ಕೈ ಹಿಡಿದು ಎಳೆದು ಪೋಲೀಸ್ ಪೇದೆಗೆ ಒಪ್ಪಿಸಿದ್ದ. ಅದು ಯಾವಾಗ ವಿಚಾರ ವಿನಿಮಯ ಆಗಿತ್ತೋ, ಪೋಲೀಸಿನವ ಭುಜ ಹಿಡಿದು ಎಳೆಯುತ್ತ "ನಡಿಯೋ ಸ್ಟೇಶನ್ನಿಗೆ. ನಿನ್ನ ವ್ಯವಹಾರ ಬಸ್ಸಲ್ಲೂ

ಈ [illegible] ಬಂದು ಕನ್ನ ಹಾಕುವ ಮರ್ಯಾದೆಯನ್ನೇ ಹಾಳು ಮಾಡಿದ [illegible] ಅದರಿಂದ ಬಹಳ ಬೇಸರವಾಯಿತು [illegible] ಹೇಗೆ ನುಡಿಯುವುದು?

ಪ್ರಾರಂಭವಾಯ್ತಾ. ಏ ಬೇವರ್ಸಿ ಕುಡ್ದು ಇವಳನ್ನು ಬುಕ್ ಮಾಡಿ ಕರ್ಕೊಂಡು ಹೊರಟದ್ದಿಯಾ.''

"ನಾನೇನು ಮಾಡ್ದೆ. ನನ್ನ ಯಾಕೆ ಎಳೆದಾಡುತ್ತಿದ್ದೀರಾ'' ಎಂದು ಅವಳು ಗಾಬರಿ, ಭಯದಿಂದ ಕೇಳಿದಳು.

"ಅದನ್ನು ಸ್ಟೇಶನ್ನಿನಲ್ಲಿ ಹೇಳ್ತಿನಿ ನಡಿಯೇ ರಂಡೆ'' ಎಂದು ಅವಳನ್ನು ಬಸ್ಸಿನಿಂದ ಕೆಳಗೆ ನೂಕಿದ. ಆ ರಭಸಕ್ಕೆ ಕೆಳಗೆ ಬಿದ್ದಳು. ಅಡುಗೆ ಸಾಮಾನು, ತರಕಾರಿ ರಸ್ತೆಯ ಪಾಲಾಯಿತು.

"ರೀ, ಯಾರ್ರಿ ನೀವು. ಅವಳನ್ನು ಯಾಕೆ ನೂಕಿದ್ರಿ.'' ಅವನು ತೊದಲುತ್ತ ನುಡಿದ ಮರು ಕ್ಷಣವೇ ಆ ಪೋಲೀಸ್ ತನ್ನ ಬೂಟುಗಾಲಿನಿಂದ ಒದ್ದ.

ಜನ ಗುಂಪು ಗುಂಪಾಗಿ ಸೇರಿದರು.

ಅವಳು ಭಯ, ಗಾಬರಿ ಮತ್ತು ನಾಚಿಕೆ ಯಿಂದ ಎಲ್ಲರತ್ತ ನೋಡಿದಳು. ಇವರೆಲ್ಲ ಏಕೆ ಹೀಗಾಡುತ್ತಿದ್ದಾರೆ. ನಾನು, ನನ್ನ ಗಂಡ ಮಾಡಿರುವ ಅಪರಾಧವಾದರೂ ಏನು? ನನ್ನ ಗಂಡ ಕುಡಿದಿದ್ದಾನೆ ನಿಜ. ಆದರೆ ಎಷ್ಟು ಜನ ಕುಡಿದು ಪ್ರಯಾಣ ಮಾಡುವುದಿಲ್ಲ. ಆದರೆ ನನಗೇಕೆ ದಂಡನೆ.

"ಈ ಕಳ್ಳ ಲೌಡಿನಾ ಲಾಕಪ್‌ಗೆ ಹಾಕಿ. ನಾವೆಲ್ಲ ನೋಡುತ್ತಿರುವಾಗಲೇ ತನ್ನ ವ್ಯವಹಾರ ಮುಗಿಸಿಬಿಟ್ಟಳು.'' ಗುಂಪಿನಲ್ಲಿ ಯಾರೋ ಅಂದರು.

ಅವಳಿಗೀಗ ಎಲ್ಲವೂ ಅರ್ಥವಾಗಿತ್ತು. ಆದರೆ ಅವಳು ಎಷ್ಟೇ ಹೇಳಿದರೂ ಕೇಳದೆ ಪೋಲೀಸ್ ಪೇದೆ ಸ್ಟೇಶನ್ನಿಗೆ ಎಳೆದು ತಂದ. ಈ ಕುಡುಕನ ಮಾತಿಗೆ ಬೆಲೆಯೇ ಇರಲಿಲ್ಲ.

ಮಧ್ಯಾಹ್ನ ಮೂರು ಗಂಟೆ ಕಳೆಯಿತು.

ಅವಳ ಆತಂಕ ಹೆಚ್ಚಾಯಿತು. ಹೊಸ ಬಟ್ಟೆ ಮತ್ತು ಸಿಹಿ ತಿಂಡಿಯ ಆಸೆಯಿಂದ ಕಾಯುತ್ತಿರುವ ತನ್ನ ಮಗುವಿನ ನೆನಪಾಗಿ ಅತ್ತಳು.

ಸ್ವಲ್ಪ ಹೊತ್ತಿನನಂತರ ಆ ಪೇದೆ ತನ್ನ ಸಹದ್ಯೋಗಿಯೊಂದಿಗೆ ಇವಳನ್ನೇ ತೋರಿಸಿಕೊಂಡು ಏನೋ ಹೇಳುತ್ತಿದ್ದ. ಅವನು ಮೀಸೆಯೊಳಗೆ ಕೆಟ್ಟದಾಗಿ ನಕ್ಕ. ಅನಂತರ ಇಬ್ಬರೂ ಇವಳತ್ತ ಬರಲಾರಂಭಿಸಿದರು.

ಅವಳು ಹೆದರಿಕೆಯಿಂದ ನಡುಗಿದಳು. ಪೋಲೀಸ್ ಸ್ಟೇಶನ್ನಿನಲ್ಲಿ ಹೆಂಗಸರ ಮೇಲೆ ನಡೆಯುವ ಅತ್ಯಾಚಾರದ ಬಗ್ಗೆ ಸಾಕಷ್ಟು ಕೇಳಿದ್ದಳು. ಮೈ ಬೆವರಲಾರಂಭಿಸಿತು. ರಾಕ್ಷಸರಂತೆ ತನ್ನೆದುರು ನಿಂತಿದ್ದವರನ್ನು ಕಂಡು ಇಂದಿಗೆ ನನ್ನ ಶೀಲ ಮತ್ತು ಪ್ರಾಣಕ್ಕೆ ಕೊನೆಯ ಗಳಿಗೆ ಬಂದಿತು ಎಂದುಕೊಂಡಳು.

ಒಬ್ಬ ದುರುದುರು ನೋಡುತ್ತ ಅವಳ ಸೆರಗಿಗೆ ಕೈ ಹಾಕಿ ಎಳೆದ. ಮತ್ತೊಬ್ಬ ರವಿಕೆಯೊಳಗೆ ಕೈ ತೂರಿಸಿ ಎಳೆದ. ಕೈಗೆ ನೂರರ ನೋಟುಗಳು ಸಿಕ್ಕವು. ಎಳೆದಾಟದಲ್ಲಿ ರವಿಕೆಯ ಹುಕ್ ಕಿತ್ತು ಹೋಗಿತ್ತು. ನೋಟುಗಳನ್ನು ಇಬ್ಬರೂ ಹಂಚಿಕೊಂಡು ನಗುತ್ತ ಹೊರಟು ಹೋದರು. ಇವಳು 'ಸದ್ಯ ಬದುಕಿದೆ' ಎಂದುಕೊಂಡಳು.

ನಾಲ್ಕು ಗಂಟೆಯ ಸಮಯಕ್ಕೆ ಎಸ್.ಐ. ಸಾಹೇಬರು ಬಂದರು. ಸುಮಾರು ಮೂವತ್ತೈದರ ಶಾಂತ ಸ್ವಭಾವದ ಅವರು ಇವಳ ಹೇಳಿಕೆಯನ್ನು ಕೇಳಿಸಿಕೊಂಡು ಸ್ಕೂಲಿಗೆ ಫೋನ್ ಮಾಡಿ ರಾಮಕೃಷ್ಣನ ಸಹದ್ಯೋಗಿಗಳನ್ನು ಬರಲು ತಿಳಿಸಿದರು.

ಸ್ಕೂಲಿನಿಂದ ಇವನ ಜೊತೆ ಕೆಲಸ ಮಾಡುತ್ತಿದ್ದ ಇಬ್ಬರು ಬಂದು, ಎಸ್.ಐ. ಅವರ ಜೊತೆ ಮಾತನಾಡಿ ಅವರಿಬ್ಬರನ್ನು ಬಿಡಿಸಿಕೊಂಡರು.

"ನೋಡಿದ್ಯಾ ಏನಾಯಿತು ನಿನ್ನ ಕುಡಿತದಿಂದ ಅಂತ. ನಿನ್ನ ಹೆಂಡತಿ ಸಹ ಲಾಕಪ್‌ನಲ್ಲಿ ಕೊಳೆಯುವಂತಾಯಿತು. ನಿನಗೆ ಯಾವಾಗ ಬುದ್ಧಿ ಬರುತ್ತೋ.'' ಸಹದ್ಯೋಗಿಯೊಬ್ಬ ರೇಗಿದ.

ರಾಮಕೃಷ್ಣ ಮಾತಾಡದೆ ತಲೆ ತಗ್ಗಿಸಿದ್ದ. ಅವಳು ಮುಸಿಮುಸಿ ಅಳುತ್ತಿದ್ದಳು. ಮಗು ಅತ್ತೂ ಅತ್ತೂ ಮಲಗಿತ್ತು. ಎಲ್ಲರೂ ಹೋದ ಮೇಲೆ ಇವನು ಹೆಂಡತಿಯ ಕೈ ಹಿಡಿದು "ನಂದು ತಪ್ಪಾಯ್ತು ಕ್ಷಮಿಸು'' ಎಂದು ಹೊರಗೆ ಹೋಗಿ ಬಂದು "ನನ್ನಿಂದ ಇವತ್ತು ನಿಂಗೆ ಎಂತಹ ಅವಮಾನ ಆಯ್ತು. ಛೇ ನನ್ನ ತಲೆ ಕೆಟ್ಟಿದೆ. ಇನ್ನು ಮುಂದೆ ಹೀಗೆ ಆಗೋಲ್ಲ'' ಎಂದು ವಿಸ್ಕಿಯನ್ನು ನೀರು, ಸೋಡಾ ಏನನ್ನೂ ಬೆರೆಸದೆ ಗಟಗಟ ಕುಡಿಯಲಾರಂಭಿಸಿದ.

ಅವಳು ಮತ್ತೆ ಅಳುತ್ತ ತಲೆ ಚಚ್ಚಿಕೊಳ್ಳಲಾರಂಭಿಸಿದಳು.

ಧಾರಾವಾಹಿ – ೩

ಅಂತಿಮ ಅಧ್ಯಾಯ

ತೆಲುಗು ಮೂಲ :
ಕೊನಕಂಚಿ
ಲಕ್ಷ್ಮೀನರಸಿಂಹರಾವ್

ಕನ್ನಡಕ್ಕೆ :
ಎಂ. ಎಲ್.
ರಾಘವೇಂದ್ರರಾವ್

"ಸರ್ಟೆನ್ಲೀ ಸರ್, ಈ ಬಾರ್‌ನಲ್ಲಿ ಕೆಲಸ ಮಾಡೋ ನಾನು ಇಲ್ಲೇ ನಿಮಗೆ ಕಂಪನಿ ಕೊಡೋದು ಚೆನ್ನಾಗಿರೋಲ್ಲ ಸಾರ್. ನಾನು ನಿಮ್ಮ ಮನೆಗೆ ಬರ್ತೀನಿ. ಅಲ್ಲಿ ಕೂಡಿ ಕುಡಿಯೋಣ."

"ಈಸಿಟ್?" ಎರಡು ಹೆಜ್ಜೆ ಹಾಕಿ ತೂರಾಡುತ್ತ ಕೆಳಕ್ಕೆ ಬೀಳಲಿದ್ದ ಡಾಕ್ಟರ್.

ವೆಯಿಟರ್ ಆತನನ್ನು ಕೆಳಗೆ ಬೀಳದಂತೆ ಹಿಡಿದುಕೊಂಡು ಹೊರಗಿದ್ದ ಕಾರಿನವರೆಗೂ ನಡೆಸಿಕೊಳ್ಳುತ್ತ ಬಂದ. ಕಾರಿನಲ್ಲಿ ಕುಳಿತು ತೂಕಡಿಸುತ್ತಿದ್ದ ಚಾಲಕ ಯಜಮಾನನನ್ನು ಆ ಸ್ಥಿತಿಯಲ್ಲಿ ನೋಡಿದೊಡನೆ ಬೆರಗಾಗಿ ಸರಸರನೆ ಕಾರಿನಿಂದ ಇಳಿದು ಬಾಗಿಲ ತೆಗೆದ.

ವೆಯಿಟರ್ ಡಾಕ್ಟರ್‌ನ ನಿಧಾನವಾಗಿ ಕಾರು ಹತ್ತಿಸಿ, ಹಿಂದಿನ ಸೀಟನಲ್ಲಿ ಮಲಗಿಸಿ ಕಾರಿಳಿದ. "ಹುಶಾರು, ಯಾವತ್ತೂ ಇಲ್ಲದ್ದು ಇವತ್ತು ಹೆಚ್ಚು ಕುಡಿದಿದ್ದಾರೆ. ಮನೆಗೆ ಕರೆದುಕೊಂಡು ಹೋಗಿ."

ಚಾಲಕ ಕಾರು ಸ್ಟಾರ್ಟ್ ಮಾಡಿದ. ಕಾರು ಸ್ವಲ್ಪ ದೂರ ಸಾಗಿರಲು ರಾಮರಾವ್ ಮೆಲ್ಲನೆ ಆಸನದಿಂದ ಎದ್ದು ಕುಳಿತ. "ನಾವು ಎಲ್ಲಿಗೆ ಹೋಗ್ತಿದ್ದೀವಿ?" ಚಾಲಕನನ್ನು ಕೇಳಿದ.

"ಮನೆಗೆ ಹೋಗ್ತಿದ್ದೀವಿ ಸರ್."

"ನಾನು ಹೇಳಿದ್ನೆ ಮನೆಗೆ ಹೋಗಲು?"

ಚಾಲಕ ಉತ್ತರಿಸಲಿಲ್ಲ.

"ನಾನು ಹೇಳದೆ ನನ್ನ ಮನೆಗೆ ಯಾಕೆ ಕರೆದುಕೊಂಡು ಹೋಗ್ತಿದ್ದೀಯೋ ದೇಶದ್ರೋಹಿ. ಆಸ್ಪತ್ರೆಗೆ ಕರ್‍ಕೊಂಡು ಹೋಗು." ಚೀರಿದ.

ಮನೆಯ ಕಡೆ ಹೋಗುತ್ತಿದ್ದ ಕಾರು ಹಿಂದಕ್ಕೆ ತಿರುಗಿ ಹಾಸ್ಪಿಟಲ್‌ನತ್ತ ಸಾಗಿತು.

ಡಾಕ್ಟರ್ ಕದಕ್ಕೆ ಒರಗಿ ಕಣ್‌ಮುಚ್ಚಿಕೊಂಡ. ಕಾರು ವೇಗವಾಗಿ ಹೋಗುತ್ತಿದ್ದರಿಂದ ಕ್ಷಣಗಳಲ್ಲಿ ಅವನ ಕಣ್ಣೆವೆಗಳು ಬಾಗಿದವು. ಅನಂತರ ಒಳ್ಳೆಯ ನಿದ್ದೆಯ ಸೊಗಸಾದ ಅನುಭವ.

ಡಾಕ್ಟರ್ ಬಾಗಿಲಿಗೆ ಒರಗಿ ನಿದ್ರಿಸುತ್ತಿದ್ದುದನ್ನು ನೋಡಿ ಚಾಲಕ ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ, ಸದ್ದಾಗದಂತೆ ಹಿಂದಿನ ಡೋರ್ ಲಾಕ್ ಮಾಡಿದ. ಕದ ತರೆದುಕೊಳ್ಳದ ಹಾದೆ. ಮತ್ತೆ ಕಾರು ಹರಿಯಬಿಟ್ಟ

ಹತ್ತು ನಿಮಿಷದ ಬಳಿಕ ಕಾರು ಹಾಸ್ಪಿಟಲ್ ಮುಂದೆ ನಿಂತಿತು.

ಅಷ್ಟುಹೊತ್ತಿಗಾಗಲೇ ರಾಮರಾವ್ ಗಾಢ ನಿದ್ರೆಗೆ ಜಾರಿದ್ದ. ಚೆನ್ನಾಗಿ ಗೊರಕೆ ಹೊಡೆಯುತ್ತಿದ್ದ.

ಚಾಲಕ ಕೂಗಿ ಕರೆದ ಸಹಾಯಕ್ಕಾಗಿ ಸಿಸ್ಟರ್‌ಸ್‌ನ. ಎಲ್ಲರೂ ಕೂಡಿ ಡಾಕ್ಟರ್‌ರನ್ನು

ಹಿಡಿದುಕೊಂಡು ಆತನ ಕೊಟಡಿಗೆ ಸಾಗಿಸಿದರು. ಸೋಫಾದಲ್ಲಿ ಮಲಗಿಸಿ ಏ.ಸಿ. ಯಂತ್ರ ಆನ್ ಮಾಡಿದ.

ರಾಮರಾವ್ ಸ್ವಲ್ಪವೂ ಎಚ್ಚರವಾಗದೆ ಹಾಗೇ ಗೊರಕೆ ಹೊಡೆಯುತ್ತ ಗಾಢ ನಿದ್ರೆಯಲ್ಲಿದ್ದ. ಉದ್ವೇಗವೆಲ್ಲವೂ ಕಳೆದು ಹೋಗಿ ನೆಮ್ಮದಿಯಿಂದ ವಿಶ್ರಾಂತಿ ಪಡೆಯುತ್ತಿರುವಂತಿದೆ ಅವನ ಗೊರಕೆ ಯಿಡುತ್ತಿದ್ದ ರೀತಿ.

ಸರಿಯಾಗಿ ಅದೇ ಸಮಯದಲ್ಲಿ ಕುಮಾರ್, ವರ್ಷ ಕುಳಿತಿದ್ದ ಕಾರು ಆ ಆಸ್ಪತ್ರೆ ಆವರಣದೊಳಕ್ಕೆ ಪ್ರವೇಶಿಸಿತು.

ಕುಮಾರ್‌ಗೆ ರಾಮರಾವ್ ಕುರಿತು ಡಾಕ್ಟರ್‌ನಾಗಿಯಷ್ಟೇ ಗೊತ್ತು. ಆದರೆ ಆತನ ಒಳಗಿನ ಮೌಲ್ಯ ಕುರಿತು ಏನೂ ತಿಳಿಯದು. ತಾನು ತನ್ನ ಮಾತುಗಳಿಂದ ಅವನನ್ನು ಬಹಳವಾಗಿ ನೋಯಿಸಿದನೋ ಅದೆಷ್ಟು ಗಾಯಗೊಳಿಸಿದನೋ ಇನ್ನು ಮುಂದೆ ತಿಳಿದು ಬರುತ್ತದೆ.

"ಡಾಕ್ಟರ್ ರಾಮರಾವ್ ಇದ್ದಾರಾ?''

ಕುಮಾರ್‌ನ ಪ್ರಶ್ನೆಗೆ ಏನು ಉತ್ತರ ಹೇಳಬೇಕೋ ಅರ್ಥವಾಗಲಿಲ್ಲ ರಿಸೆಪ್ಷನಿಸ್ಟ್ ಉಷಾಳಿಗೆ.

"ಅಂಕಲ್, ನಾನು ಮಮ್ಮಿ ಹತ್ರಕ್ಕೆ ಹೋಗಿ ಬರ್ತೀನಿ.'' ಕುಮಾರ್‌ನಿಗೆ ಹೇಳಿ ಒಳಗೆ ಹೊರಟು ಹೋದಳು ವರ್ಷ.

"ವಾಟ್ ಬೇಬಿ, ರಾಮರಾವ್ ಇನ್ನೂ ಆಫೀಸಿಗೆ ಬರಲಿಲ್ಲವೇ.''

"ಬಂದಿದ್ದಾರೆ ಸರ್, ಆದರೆ ಅನ್‌ಕಾನ್ಷಸ್ ಆಗಿದ್ದಾರೆ. ತುಂಬ ಕುಡಿದು ಬಂದಿದ್ದಾರೆ.''

ಕುಮಾರ್ ತತ್ತರಿಸಿದ. ಅದು ಊಹಿಸದ ಘಟನೆ. "ಹೀಗೆ ಯಾವತ್ತಾದರೂ ಕುಡಿದಿದ್ದರೇ, ಇಲ್ಲ ಇದೇ ಮೊದಲ ಸಾರೀನೇ?''

"ನಾನು ಇಲ್ಲಿ ಸೇರಿ ಐದು ವರ್ಷಗಳಾದುವು ಸರ್. ಅವರನ್ನೆಂದೂ ಹೀಗೆ ನೋಡಲಿಲ್ಲ.''

"ಡಾಕ್ಟರ್, ಈಗ ಎಲ್ಲಿದ್ದಾರೆ?''

"ಅವರ ಕೊಟಡಿಯಲ್ಲಿ.''

ಸರಸರನೆ ಡಾ. ರಾಮರಾವ್ ಕೊಟಡಿಯತ್ತ ನಡೆದ ಕುಮಾರ್. ಎ.ಸಿ. ಯಂತ್ರ ಕೆಲಸ ಮಾಡುತ್ತಿರುವುದರಿಂದ ಆ ಕೊಟಡಿ ತುಂಬ ತಣ್ಣಗಿದೆ. ಸೋಫಾದಲ್ಲಿ ಹಾಯಾಗಿ ನಿದ್ರೆ ಮಾಡುತ್ತಿದ್ದಾನೆ ರಾಮರಾವ್.

ಸರಸರನೆ ಡಾಕ್ಟರನ್ನು ಸಮೀಪಿಸಿದ ಕುಮಾರ್ ಆತನ ಟೈ ಅಳಕಗೊಳಿಸಿದ. ಅಂಗಿಯ ಎರಡು ಗುಂಡಿಗಳನ್ನು ಬಿಚ್ಚಿದ. ಇನ್‌ಶರ್ಟ್ ತೆಗೆದು ಹಾಕಿದ. ಹ್ಯಾಂಡ್‌ಕಫ್ಸ್ ತೆಗೆದು ಸ್ಲೀವ್ಸ್ ಮುಂಗೈವರೆವಿಗೂ ಎಳೆದ. ಬೆಲ್ಟಿನ ಬಕಲ್ ಬಿಚ್ಚಿದ. ಶೂ ಲೇಸ್‌ಗಳನ್ನು ಬಿಚ್ಚಿ ಶೂ ಕಳಚಿ ಹಾಕಿದ.

ಡಾಕ್ಟರ್‌ನ ಬಾಯಿಂದ ಜೊಲ್ಲು ಹೊರ ಬರುತ್ತಿದೆ. ಕುಮಾರ್ ಸರಸರನೆ ನಾಪ್‌ಕಿನ್ ತಂದು, ಆತನ ಬಾಯಿ ಪಕ್ಕದಲ್ಲೆಲ್ಲ ಚೆನ್ನಾಗಿ ಒರೆಸಿದ. ಫ್ರಿಜ್ ತೆಗೆದು ಐಸ್ ನೀರಿನಲ್ಲಿ ನಾಪ್‌ಕಿನ್ ಅದ್ದಿ ಡಾಕ್ಟರ್ ರಾಮರಾವ್ ಮುಖವನ್ನೆಲ್ಲ ಶುಭ್ರವಾಗಿ ಒರೆಸಿದ.

ಸ್ತ್ರೀ ಸಹಜ ಸಿದ್ಧವಾದ ಕುತೂಹಲವನ್ನು ಹತ್ತಿಕಲಾಗದೆ ರಿಸೆಪ್ಷನ್ ಕೌಂಟರ್ ಬಿಟ್ಟು ಉಷಾ ಆಗಲೇ ರಾಮರಾವ್ ಕೊಟಡಿ ಹತ್ತಿರ ಬಂದು ಮೆಲ್ಲನೆ ಬಾಗಿಲು ತೆಗೆದು ಒಳಕ್ಕೆ ಇಣುಕಿ ನೋಡಿದಳು.

ಕುಮಾರ್ ಆಗ ಡಾ. ರಾಮರಾವ್

ಇಲ್ಲಿಯವರೆಗೆ...

ಕುಮಾರ್ ಪಡೆದ [illegible] [illegible] ಕುಟುಂಬದ ಕಾಯಿಲೆಯನ್ನು ಗುಣಪಡಿಸಲು ಡಾ. ರಾಮರಾವ್‌ರಲ್ಲಿ [illegible] ಆತನ ಮಗಳು ವರ್ಷಳನ್ನು ಕುಮಾರ್ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ತಮ್ಮ ಮಗಳಂತೆ ಬೆಳೆಸುತ್ತಿದ್ದಾರೆ.

...ಮುಂದೆ ಓದಿ

ಮುಖವನ್ನು ಒದ್ದೆ ಬಟ್ಟೆಯಿಂದ ಒರೆಸುತ್ತಿದ್ದಾನೆ. ಕದದ ಬಳಿ ಶಬ್ದವಾಗಿ ಹಿಂದಿರುಗಿ ನೋಡಿದ.

ಬಾಗಿಲ ಸಂದಿನಿಂದ ಒಳಕ್ಕೆ ಉಷ ಕಾಣಿಸಿದಳು. ಅವಳನ್ನು ಒಳಕ್ಕೆ ಬರುವಂತೆ ಸನ್ನೆ ಮಾಡಿದ.

ಉಷ ಒಳಬಂದಳು. "ಎಸ್ ಸರ್."

"ಡಾಕ್ಟರ್‌ನ ಈ ಕೊಟಡಿಗೆ ಕರೆದುತಂದವರು ಯಾರು?'' ಕಮ್ಯಾಂಡಿಂಗ್ ಆಗಿ ಕೇಳಿದ.

"ಸಿಸ್ಟರ್ ಕರ್‍ಕೊಂಡ್ಬಂದ್ರು ಸರ್."

"ಅವರ್ನ ಕರೆ."

ಅವರು ಒಳಗೆ ಬಂದ ಮೇಲೆ ಕೇಳಿದ. "ನೀವು ನರ್ಸಿಂಗ್ ಟ್ರೈನಿಂಗ್ ಮಾಡಿದ್ದೀರಾ?''

"ಎಸ್ ಸರ್."

"ಟ್ರೈನಿಂಗ್ ಎಲ್ಲಿ ಮಾಡಿದಿರಿ?''

"ಕರ್ನೂಲ್‌ನಲ್ಲಿ."

"ಚೆನ್ನಾಗಿ ಕಂಠಪೂರ್ತಿ ಕುಡಿದು, ಪ್ರಜ್ಞೆ ಇಲ್ಲದ ಸ್ಥಿತಿಯಲ್ಲಿ ಯಾರಾದರೂ ಇದ್ದರೆ ಸಿಸ್ಟರ್ ಏನ್ಮಾಡ್ಬೇಕು?''

ಕುಮಾರ್ ಏನು ಹೇಳುತ್ತಿರುವನೆಂದೇ ಅವರಿಗೆ ಅರ್ಥವಾಗಲಿಲ್ಲ.

"ಡಾಕ್ಟರ್ ರಾವ್ ಅಳತೆ ಮೀರಿ ಕುಡಿದಿದ್ದಾರೆಂದು ನಿಮಗೆ ಗೊತ್ತು. ಆತನನ್ನು ಕರೆತಂದು ಸೋಫಾದಲ್ಲಿ ಮಲಗಿಸಿ ನಿಮ್ಮ ಕರ್ತವ್ಯ ಮುಗಿದಂತೆ ಹೊರಟು ಹೋಗುವುದೇನು? ಕುಡಿದ ವ್ಯಕ್ತಿಯ ರೆಸ್ಪಿರೇಶನ್ ಬೆಳೆಯುತ್ತದೆ ಅಂತ ನಿಮಗೆ ಗೊತ್ತಲ್ಲ?''

"ಎಸ್ ಸರ್."

"ದೆನ್ ನೆಕ್ ಟೈ ಸಡಿಲ ಮಾಡಬೇಕೆಂದು, ಅಂಗಿ ಬಟನ್ಸ್ ಬಿಚ್ಚಬೇಕೆಂದು, ಇನ್‌ಶರ್ಟ್ ತೆಗೆದುಹಾಕಬೇಕೆಂದು, ಶೂಸ್ ಕಳಚಬೇಕೆಂದು, ಸಾಧ್ಯವಾದ ಮಟ್ಟಿಗೆ ಆತ ರಿಲ್ಯಾಕ್ಸ್ ಆಗುವಂತೆ ನೋಡಬೇಕೆಂದು ಗೊತ್ತಿಲ್ಲವೇ?''

"ಸಾರೀ ಸರ್'' ಎಂದಳು ನರ್ಸ್ ಒಬ್ಬಳು.

"ನೋ ಸಾರೀಸ್, ಇಂಜನಿಯರ್ ತನ್ನ ವೃತ್ತಿ ಧರ್ಮವನ್ನು ನಿರ್ವಹಿಸುವಾಗ ಅನೇಕ ಪುಸ್ತಕಗಳನ್ನು ರೆಫರ್ ಮಾಡಬಹುದು. ಲಾಯರ್ ಕೂಡ ಕೇಸ್ ಒಂದನ್ನು ವಾದಿಸುವಾಗ ಅನೇಕ ರೆಫರೆನ್ಸ್‌ಗಳನ್ನು ನೋಡಿಕೊಳ್ಳಬಹುದು. ಬಟ್ ಡಾಕ್ಟರ್ ಪ್ರೊಫೆಶನ್ ಅಂತಾದಲ್ಲ. ಸ್ಪಾಂಟೇನಿಯಸ್ ಡಿಸಿಶನ್ ಅಗತ್ಯ.''

"ಅವರ್ನ ಆ ಸ್ಥಿತಿಯಲ್ಲಿ ನೋಡುತ್ತಿದ್ದ ಹಾಗೇ ನಮಗೆ ಕೊಂಚ ಅಂಜಿಕೆ ಅನಿಸಿತು ಸರ್'' ಎಂದಳು ಮತ್ತೊಬ್ಬ ಸಿಸ್ಟರ್.

"ಇಟ್ಸ್ ಆಲ್ ರೈಟ್, ನಿಮ್ಮಲ್ಲಿ ಒಬ್ಬರು ಡಾಕ್ಟರ್ ಎದ್ದೇಳುವವರೆಗೆ ಇಲ್ಲೇ ಇರಿ. ಅವರು ಎದ್ದ ಮೇಲೆ ರಿಲ್ಯಾಕ್ಸ್ ಆದ ಬಳಿಕ ನನಗೆ ಫೋನ್ ಮಾಡಲು ಹೇಳಿರಿ.

"ಎಸ್ ಸರ್."

ಕುಮಾರ್ ಆ ಕೊಟಡಿಯಿಂದ ಗಡಿಬಿಡಿಯಿಂದ ಹೊರಬಂದ. ಸುಚರಿತಳಿದ್ದ ಕೊಟಡಿಯತ್ತ ನಡೆದ.

"ಅಮ್ಮಾ." ಮೆಲ್ಲನೆ ಕರೆದಳು ವರ್ಷ.

ಸುಚರಿತ ಮಂಚದ ಮೇಲೆ ಅತ್ತ ಕಡೆ ತಿರುಗಿ ಮಲಗಿದ್ದಾಳೆ. ಕರೆ ಕೇಳಿ ಅವಳು ಬಾಗಿಲ ಬದಿಗೆ ತಿರುಗಿದಳು. ಒಂದು ಕ್ಷಣ ವರ್ಷಳನ್ನು ನೋಡಿದೊಡನೆ ಅವಳ ನಯನಗಳು ಸಂತಸದಿಂದ ಪಟಪಟ ಎಂದಿದು. ಆ ಕೂಡಲೇ ನೋಟ ಬದಲಾಗಿಬಿಟ್ಟಿತು. ಕ್ಷಣ ಮಾತ್ರದಲ್ಲಿ ಅವಳ ಕಂಗಳಲ್ಲಿ ಉಂಟಾದ ಬದಲಾವಣೆಯನ್ನು ಬಹಳ ಜೀವಿತಾನುಭವ ಉಳ್ಳವರು ಮಾತ್ರವೇ ಗ್ರಹಿಸುತ್ತಾರೆ.

"ಯಾರು ಬೇಕು ನಿನಗೆ?''

"ನೀನೇ ಅಮ್ಮಾ, ನಾನು ನಿನ್ನ ಮಗಳು ವರ್ಷ. ಗುರ್ತು ಸಿಗಲಿಲ್ಲವೆ?''

"ಹಾ ಹಾ ಹಾ, ನನಗೆ ಇನ್ನೂ ಮದ್ವೇನೇ ಆಗಿಲ್ಲ. ಇನ್ನು ಮಗಳು ಹೇಗೆ ಹುಟ್ಟಿದಳು? ನನ್ನ ಮೋಸ ಮಾಡೋ ಉದ್ದೇಶ ನಿನ್ನದು. ನನ್ನ ಹತ್ರ ನಿನ್ನ ಬೇಳೆಕಾಳು ಬೇಯೋಲ್ಲ. ಹೋಗು, ಹೋಗು'' ಎಂದಳು.



ವರ್ಷಳ ಕಣ್ಣುಗಳಲ್ಲಿ ನೀರಾಡಿತು.

"ನಿಜವಾಗಲೂ ಅಮ್ಮಾ ಇಗೋ ನನ್ನ ಕೈ ಬೆರಳುಗಳು, ಥೇಟ್ ನಿನ್ನ ಕೈ ಬೆರಳುಗಳ ಹಾಗೇ ಇವೆ ನೋಡು. ಇಗೋ ನನ್ನ ಪಾದಗಳನ್ನು ನೋಡು, ಮೂಗು ನೋಡು, ಇದು ನಿನ್ನ ನಾಸಿಕವೇ ಅಲ್ವೇನಮ್ಮ. ನನ್ನ ಗುರ್ತು ಹಿಡಿ ಮಮ್ಮೀ, ಪ್ಲೀಜ್ ಮಮ್ಮೀ." ಉದ್ವೇಗದಿಂದ ನುಡಿದಳು ವರ್ಷ.

"ಪ್ಲೀಜ್, ಆಕೇನ ಎಕ್ಸಯಿಟ್ ಮಾಡಬೇಡಿ." ವರ್ಷಳನ್ನು ತಡೆದಳು ಅಲ್ಲೇ ಇದ್ದ ನರ್ಸ್.

ಒಂದು ಸಾರಿ ಅಲ್ಲ, ಎರಡು ಸಾರಿ ಅಲ್ಲ, ಕೆಲವು ನೂರು ಬಾರಿ, ಕೆಲವು ವರ್ಷಗಳಿಂದ ತನ್ನ ಹತ್ತನೇ ವರ್ಷದಿಂದ, ತನಗೆ ಇಪ್ಪತ್ತೊಂದನೇ ವರುಷ ನಡೆಯುತ್ತಿರುವ ಈ ದಿನದವರೆಗೂ ಆಸ್ಪತ್ರೆಗೆ ಬಂದ ಪ್ರತಿಸಾರಿ ಅಮ್ಮನ ಪರಿಸ್ಥಿತಿ ನೋಡಿ ಅಳುತ್ತಲೇ ಇದ್ದಾಳೆ. ಹಾಗೆ ಅಳ್ತಾನೇ ಅವಳು ದೊಡ್ಡವಳಾದಳು.

ವರ್ಷಳನ್ನು ಸಹಾನುಭೂತಿಯಿಂದ ನೋಡಿದಳು ನರ್ಸ್. ಸುಚರಿತಳ ಕೊಟಡಿಗೆ ಆಚೆ ಅಂತರದಲ್ಲಿರುವ ತೆಂಗಿನಮರ, ಅಶೋಕ ವೃಕ್ಷಗಳು ಕೂಡ ವರ್ಷಳನ್ನು ಅನುಕಂಪದಿಂದ ನೋಡುತ್ತಿವೆ.

ಸುಚರಿತ ಪುನಾ ಅತ್ತ ಕಡೆ ತಿರುಗಿ ಕಣ್ಣು ಮುಚ್ಚಿಕೊಂಡಳು.

ಎರಡು ನಿಮಿಷ ಅವಳತ್ತ ದಿಟ್ಟಿಸಿ ನೋಡಿ ಸರ್ರನೆ ಹಿಂದಿರುಗಿದಳು ವರ್ಷ. ಅವಳಿಗೆ ಕಾರಿಡಾರ್‌ನಲ್ಲಿ ಎದುರಾದ ಕುಮಾರ್.

"ವಾಟ್ ಬೇಬಿ, ಅಮ್ಮನಿಗೆ ಹೇಗಿದೆ?" ಕೇಳಿದ.

ಎರಡೇ ಎರಡು ಹೆಜ್ಜೆಯಲ್ಲಿ ಕುಮಾರ್‌ನನ್ನು ಸಮೀಪಿಸಿದ ವರ್ಷ ಅವನನ್ನು ಅಪ್ಪಿಕೊಂಡು ಗೊಳೋ ಎಂದಳು.

"ಪ್ಲೀಸ್ ವರ್ಷ, ಪ್ಲೀಸ್ ಅಳಬೇಡ. ಆ ದೇವರನ್ನು ಎದುರಿಸಿಯಾದರೂ ನಾನು ನಿನ್ನ ಅಮ್ಮಳನ್ನು ಮಾಮೂಲಿ ಮನುಷ್ಯಳನ್ನಾಗಿ ಮಾಡ್ತೀನಿ. ಪ್ಲೀಸ್ ಅಳ್ಬೇಡ, ಸಮಾಧಾನ ತಂದ್ಕೋ."

ವರ್ಷ ದಡದಡನೆ ಕಾರಿಡಾರ್ ಅಂಚಿನಲ್ಲಿದ್ದ ವಾಶ್‌ಬೇಸಿನ್ ಬಳಿ ಹೋಗಿ ಮುಖ ತೊಳೆದುಕೊಂಡಳು. ಪೇಪರ್ ನ್ಯಾಪ್‌ಕಿನ್‌ನಿಂದ ಮುಖ ಒರೆಸಿಕೊಂಡು ಬಂದು ಕಾರಿನಲ್ಲಿ ಕುಳಿತಳು.

"ಡಾಕ್ಟರ್ ರಾವ್‌ಗೆ ಎಚ್ಚರಾದೊಡನೆ ನನ್ನನ್ನು ಫೋನ್‌ನಲ್ಲಿ ಕಾಂಟಾಕ್ಟ್ ಮಾಡಲು ಹೇಳಿರಿ. ಇದೀಗಷ್ಟೇ ನಾನಿತ್ತ ಮೆಸೇಜ್ ಜ್ಞಾಪಕವಿದೆ ತಾನೇ?" ಕೇಳಿದ ಕುಮಾರ್, ಮನೆಗೆ ಬಂದ ಕೂಡಲೇ ಉಷಾಳನ್ನು ಸಂಪರ್ಕಿಸಿದ.

"ಎಸ್ ಸರ್."

"ನಾನಾಗಲೇ ಕೊಟ್ಟ ಮೆಸೇಜ್‌ಗೆ ಮತ್ತೊಂದಿಷ್ಟು ಮಾತುಗಳನ್ನು ಸೇರಿಸಿರಿ. ಎಕ್ಸ್‌ಟ್ರೀಮ್ಲಿ ಸಾರೀ, ಅಯಾಮ್ ವೆರಿ ಮಚ್ ರಿಗ್ರೆಟೆಡ್."

ಅತಿ ವೇಗವಾಗಿ ಹೋಗುತ್ತಿದೆ ಕಾರು.


ಡ್ರೈವಿಂಗ್ ಸೀಟಿನಲ್ಲಿದ್ದ ಕುಮಾರ್ ಜೋರಾಗಿ ಕಾರು ನಡೆಸುತ್ತಿದ್ದಾನೆ. ಅವನ ಪಕ್ಕದ ಆಸನದಲ್ಲಿ ವರ್ಷ ಕುಳಿತುಕೊಂಡಿದ್ದಾಳೆ. ಅವಳು ಕಿಟಕಿಯಿಂದ ಹೊರಕ್ಕೆ ವೇಗವಾಗಿ ಬದಲಾಗುತ್ತಿರುವ ದೃಶ್ಯಗಳನ್ನು ನೋಡುತ್ತಿದ್ದಾಳೆ.

"ಏನಮ್ಮಾ ಯೋಚನೆ ಮಾಡ್ತಿದ್ದೀಯಾ?" ಕೇಳಿದ.

ತಲೆ ಹೊರಳಿಸಿದಳು ವರ್ಷ. "ಏನೂ ಇಲ್ಲ ಅಂಕಲ್."

"ಡಿಪ್ರೆಶನ್ ಅನ್ನೋದು ಮನುಷ್ಯನನ್ನು ಮಹಾಮಾರಿಯಂತೆ ನುಂಗಿಬಿಡುವ ವ್ಯಾಧಿ. ಸಾಧ್ಯವಾದಷ್ಟು ನಾವು ಅದಕ್ಕೆ ಬಹಳ ದೂರ ಇರಬೇಕು. ಎರಡನೆಯದು ಅಸಹನೆ. ಇದನ್ನು ಸಹ ಹತ್ತಿರ ಸುಳಿಯಗೊಡಬಾರದು. ಮೂರನೆಯದು ಸುತ್ತಲೂ ಮನುಷ್ಯರ ಮಧ್ಯೆ ಇದ್ದೂ ಕೂಡ ಒಬ್ಬಂಟಿಯಾಗಿ ತೊಳಲಾಡೋದು."

(ಸಶೇಷ)



ಚುಕ್ಕೆ 13ರಿಂದ
7ರವರೆಗೆ



ಸುಲಭಾ ಆರ್. ದೇಶಪಾಂಡೆ
ಮುದ್ದೇಬಿಹಾಳ


ಪ್ರತಿಯೊಂದೂ ತಪ್ಪು [illegible]
ಬಹುಮಾನ ಪಡೆದಿದ

ಸೂಚನೆ

[illegible]

ರಂಗೋಲಿ

15 ಚುಕ್ಕೆ
15 ಸಾಲು





ಮಲ್ಲಿಕ ಕುಮಾರಿ
ನೆಲ್ಲಿಕಾರು

ಧಾರಾವಾಹಿ—೮

ಜೀವನ ಗಂಗೋತ್ರಿ

ಭಾರತಿ ಕೇಶವ್

"ನಿನ್ನ ಧೈರ್ಯವೇ ಧೈರ್ಯ."

"ಏನು ಮಾಡುವುದು, ಯಶಸ್ಸು ಗಳಿಸಬೇಕೆಂದರೆ ಯಾರಾದರೊಬ್ಬರು ಪ್ರಯತ್ನ ನಡೆಸಲೇಬೇಕಲ್ಲವೇ?"

"ಈಗಲೂ ನನಗೆ ಇದು ಸಾಧ್ಯವೇ ಎಂಬ ಅನುಮಾನ."

"ಬನ್ನಿ, ಹೋಗಿ ನೋಡೋಣ, ಪ್ರಯತ್ನಿಸೋಣ."

"ಯಾರು ನಾನೇ, ಖಂಡಿತ ಸಾಧ್ಯವಿಲ್ಲ."

"ಯಾಕೆ?"

"ಹಿರಿಯರಿಂದ ಬಂದ ಮನೆ ಇದೆ, ಭೂಮಿ ಇದೆ. ಅದು ಬಿಟ್ಟು, ಮುಪ್ಪಿನ ತಾಯಿಯನ್ನು ಬಿಟ್ಟು ಬೆಂಗಳೂರಿಗೆ ಬಂದು ನಾನೇನು ಮಾಡಲಿ?"

"ಹಾಗಿದ್ದರೆ ನಾನು, ಮಧು ಇಬ್ಬರೇ ಹೋಗುವುದು ಎನ್ನುತ್ತೀರಾ?"

"ನಿನ್ನಿಷ್ಟ."

"ಹಾಗೆಂದರೆ?"

"ನನ್ನ ತಾಯಿಯನ್ನು ಕೇಳಿ ನೋಡು."

"ಅವರು ಖಂಡಿತ ಒಪ್ಪುವುದಿಲ್ಲ ಎಂಬ ವಿಷಯ ನನಗೆ ಚೆನ್ನಾಗಿ ಗೊತ್ತು. ಆದರೂ ವಿಷಯ ಅವರಿಗೆ ತಿಳಿಸುತ್ತೇನೆ."

"ನಿನಗೆ ಹೇಗೆ ಇಷ್ಟವೋ ಹಾಗೆ ಮಾಡು ಎಂದರು ನಿನ್ನ ಅಪ್ಪ" ಅಮ್ಮನ ಮಾತುಗಳನ್ನು ಕೇಳಿ ನನಗೆ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಒಂದು ಪದ್ಯ ನೆನಪಿಗೆ ಬಂತು.

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದಕುಸಿಯೆ ನೆಲವಿಹುದು ಮಂಕುತಿಮ್ಮ.

ಅಮ್ಮ ಮುಂದಾಡಿದ ಮಾತುಗಳು ಮತ್ತೆ ಸ್ಮೃತಿ ಪಟಲದಲ್ಲಿ ಮೂಡಿದವು. ಅಮ್ಮ ವಿಚಾರವನ್ನು ಅಜ್ಜಿಯ ಮುಂದೆ ಮಂಡಿಸಿದಳು. ಅಜ್ಜಿ ಅದನ್ನು ಕೇಳಿ ದಿಗ್ಭ್ರಾಂತರಾದರಂತೆ.

"ಇದೇನೇ ಇದು, ನಿನಗೇನಾದರೂ ತಲೆ ನೆಟ್ಟಗಿದೆಯೋ ಹೇಗೆ, ಹೆಣ್ಣು ಹೆಂಗಸರು ಬೆಂಗಳೂರಿನಲ್ಲಿ ಒಂಟಿ ಉಳಿದು ಬಾಳ್ವೆ ಮಾಡುವುದು ಸಾಧ್ಯವೇ?"

"ನಾನು ನಿರ್ಧಾರ ಮಾಡಿದ್ದೇನೆ ಅತ್ತೆ. ಸಾಧ್ಯ ಮಾಡಿ ತೋರಿಸುತ್ತೇನೆ."

"ಅದೆಲ್ಲ ನಾನು ಒಪ್ಪುವುದಿಲ್ಲ, ನಿನ್ನ ಮೊಂಡಾಟ ಅತಿಯಾಯ್ತು. ಈ ಮನೆಯಲ್ಲಿ ಮನೆಕೆಲಸ ಮಾಡಿಕೊಂಡು ಹೇಳಿದ ಹಾಗೆ ಕೇಳಿಕೊಂಡಿರು."

"ಇದುವರೆಗೆ ಆಯಿತು. ಇನ್ನು ನೀನು ಮಗನನ್ನು ಆಫೀಸರ್ ಮಾಡಲು ಹೊರಟುಬಿಟ್ಟರೆ ಇಲ್ಲಿ ಮನೆ ಕೆಲಸ ಮಾಡುವವರ್‍ಯಾರು."

"ನಾನು ಅದನ್ನೇ ಮಾಡುತ್ತ ಇಲ್ಲಿ ಉಳಿದಿದ್ದರೆ ಮುಂದೆ ನನ್ನ ಮಗನೂ ಅದನ್ನೇ ಮಾಡಬೇಕಾಗುತ್ತದೆ."

"ಬಹಳ ಮಾತು ಕಲಿತಿದ್ದಿ ನೀನು. ನಾನು

ಹೇಳಿದರೆ ನೀನು ಕೇಳುವುದಿಲ್ಲ. ನಿನ್ನ ಅಪ್ಪ, ಅಮ್ಮನನ್ನೇ ಕರೆಸಿ ಹೇಳಿಸುತ್ತೇನೆ ತಾಳು'' ಎಂದ ಅಜ್ಜಿ ಅಪ್ಪನನ್ನು ತಾಯಿಯ ತವರಿಗೆ ಅಟ್ಟಿದಳಂತೆ. ಅಮ್ಮನ ಮಲತಾಯಿ, ಅಪ್ಪ ಬಂದರು.

ಮಲತಾಯಿ ಬಂದು ಅಮ್ಮನ ಮೇಲೆ ರೇಗಿದಳಂತೆ. "ಏನು ಉಸಾಬರಿ ನಡೆಸಲು ಹೊರಟಿದ್ದೀ ನೀನು. ನಿನ್ನನ್ನು ಈ ಮನೆಗೆ ಧಾರೆ ಎರೆದು ಕೊಟ್ಟಿದ್ದು ಗಂಡನೊಂದಿಗೆ ಬಾಳ್ವೆ ಮಾಡಲಿ ಎಂದು. ಗಂಡನನ್ನು ಬಿಟ್ಟು ಮಗನನ್ನು ಓದಿಸಿ ಉದ್ಧಾರ ಮಾಡು ಎಂದು ಅಲ್ಲ.''

"ಕೊಟ್ಟಿದ್ದು ಆಯಿತಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಮಾತೇ ಇದೆಯಲ್ಲ. ಇನ್ನು ನನ್ನ ಸುದ್ದಿ ನಿಮಗೆ ಬೇಡ. ನನ್ನ ಕಷ್ಟ, ನನ್ನ ಸುಖ ನನಗೇ ಇರಲಿ.''

"ಎಷ್ಟು ಮಾತು ಆಡುತ್ತೀಯೇ, ನಿನ್ನ ಗಂಡ ಸದರಕೊಟ್ಟು ತಲೆಯಮೇಲೆ ಕೂರಿಸಿಕೊಂಡಿದ್ದಾನೆ. ಅದಕ್ಕೇ ನೀನು ಹೀಗೆ ಆಡುವುದು. ನಾನಾಗಿದ್ದರೆ ನಿನ್ನ ತಲೆಯಮೇಲೆ ನಾಲ್ಕು ಮೊಟ್ಟಿ ಹೇಳುವ ಹಾಗೆ ಕೇಳುವಂತೆ ಮಾಡುತ್ತಿದ್ದೆ.''

"ಅದು ನನಗೆ ಗೊತ್ತು. ನೀನು ನನ್ನನ್ನು ಸಾಕಿದ್ದು ಹಾಗೇ ಅಲ್ಲವೇ?''

"ಹೌದೌದು. ಸವತಿಯ ಮಗಳು ಎಂದು ಭೇದ ತೋರಿಸದೆ ಅಷ್ಟು ಚೆನ್ನಾಗಿ ಸಾಕಿದೆ ನೋಡು. ಅದಕ್ಕೆ ಎಲ್ಲರ ಮುಂದೆ ಒಳ್ಳೆಯ ಬಹುಮಾನ ಕೊಟ್ಟೆ.''

ಅಮ್ಮನ ಅಪ್ಪ, ಅಮ್ಮನನ್ನು ನಯವಾಗಿ ತಿದ್ದಲು ಪ್ರಯತ್ನಿಸಿದರು ಎಂಬುದು ಅಮ್ಮನ ಅಂಬೋಣ.

"ಪಾರು ನಿನಗೆ ನಗರದ ಜೀವನ ಇಷ್ಟ ಎಂಬುದು ನನಗೂ ಗೊತ್ತು. ಆದರೆ ದೂರದಬೆಟ್ಟ ನುಣ್ಣಗೆ ಎಂಬ ಮಾತನ್ನು ಕೇಳಿಲ್ಲವೆ ನೀನು. ಚಿಕ್ಕ ಹುಡುಗನನ್ನು ಕಾಣದ ಊರಿಗೆ ಕರೆದುಕೊಂಡು ಹೋಗಿ, ನೀನೂ ದಣಿದು, ಅವನನ್ನೂ ದಣಿಸಬೇಡ. ಇದ್ದ ಕಡೆ ನೆಮ್ಮದಿಯಿಂದ ಇರುವುದನ್ನು ಅಭ್ಯಾಸ ಮಾಡಿಕೋ. ಹೊಸ ಹೊಸ ಹಂಬಲಗಳನ್ನು, ಹುಚ್ಚು ಆಸೆಗಳನ್ನು ಬೆಳೆಯುಗೊಡಬೇಡ.''

"ಅಪ್ಪಾ ನನಗೆ ಎಷ್ಟೇ ಕಷ್ಟವಾಗಲಿ, ನಷ್ಟವಾಗಲಿ ಲೆಕ್ಕಿಸದೆ ನಾನು ನನ್ನ ಮಗನನ್ನು ವಿದ್ಯಾವಂತನನ್ನಾಗಿಸುತ್ತೇನೆ.''

"ಯಾರು ಹಿಡಿಸಿದರು ನಿನಗೆ ಈ ಹುಚ್ಚನ್ನು?''

"ಯಾರು ಯಾಕೆ ಹಿಡಿಸಬೇಕು, ನನಗೇ ಚೆನ್ನಾಗಿ ಓದಿ ವಿದ್ಯಾವಂತಳಾಗಬೇಕು ಎಂಬ ಅದಮ್ಯ ಆಸೆ ಇತ್ತು. ಆದರೆ ನೀವು ಅದನ್ನು ಆಗಗೊಡಲಿಲ್ಲ. ನನ್ನ ಮಲತಾಯಿ ಅವಳ ಮಕ್ಕಳನ್ನು ಶಾಲೆಗೆ ಸೇರಿಸಿದಳು. ನನ್ನನ್ನು ಮನೆಗೆಲಸಕ್ಕೆ ಹಾಕಿದಳು. ನೀವದನ್ನು ನೋಡುತ್ತ ತಟಸ್ಥರಾಗಿದ್ದಿರಿ. ನಾನೀಗ ನನ್ನ ಮಗನಿಗೆ ಅಕ್ಷರಾಭ್ಯಾಸ ಮಾಡಿಸಲು ಹೊರಟಿದ್ದೇನೆ. ನೀವದಕ್ಕೆ ಅಡ್ಡಿ ಬರಬೇಡಿ, ಅಡ್ಡಿ ಬರಬಾರದು.''

"ನೀನೀಗ ಮೊದಲಿದ್ದ ಹಾಗೆ ಇಲ್ಲ ಪಾರು. ಬಹಳ ಬೆಳೆದುಬಿಟ್ಟಿದ್ದೀಯ. ನಿನಗೆ ನಾವು ಹೇಳುವುದೇನೂ ಇಲ್ಲ. ನಿನಗೆ ಹೇಗೆ ಸೂಕ್ತ ಎಂದು ಕಾಣುತ್ತದೋ ಹಾಗೆ ಮಾಡು. ನಾನು ನಿನ್ನ ಮಲತಾಯಿಯೊಂದಿಗೆ ಹಳ್ಳಿಗೆ ಹೊರಡುತ್ತೇನೆ.''

"ಹಾಗೇ ಆಗಲಿ ಅಪ್ಪ. ತಗ್ಗಿ ಬಗ್ಗಿದವನಿಗೇ

ಹಳ್ಳಿಯವರೆಗೆ....

'ನಾನೀಗ ಜೀವನದ ಸಂಧ್ಯೆಯಲ್ಲಿದ್ದೇನೆ. ಒಂದೇ ರೀತಿಯಲ್ಲಿ ಕ್ರಮಬದ್ಧವಾದ ಜೀವನ ನಡೆಯುತ್ತಿದೆ. ಹಿಂದಿರುಗಿ ನೋಡಿದರೆ ಸಾರ್ಥಕತೆಯ ಹೆಜ್ಜೆಗಳೇ ಎದ್ದು ಕಾಣುತ್ತಿವೆ. ನನ್ನ ಬಾಲ್ಯ ತೀರಾ ಬಡತನದ್ದು. ನನ್ನ ಅಮ್ಮ ನನಗಾಗಿ ಬಹಳ ಕಷ್ಟಪಡುತ್ತಿದ್ದಳು. ....ಮುಂದೆ ಓದಿ

ಗುದ್ದು ಜಾಸ್ತಿ ಎಂಬಂಶ ನನಗೀಗ ಸ್ಪಷ್ಟವಾಗಿ ಗೊತ್ತಾಗಿದೆ. ಆದ್ದರಿಂದ ನಾನು ನಿಲ್ಲುವುದು ನೇರವಾಗಿ ನಡೆಯುವುದು ನೇರವಾಗಿ. ನೀವು ನನ್ನನ್ನು ನಿರಕ್ಷರಕುಕ್ಷಿಯನ್ನಾಗಿಸಿರುವುದಲ್ಲದೆ, ಅವಿದ್ಯಾವಂತನೊಂದಿಗೆ ನನ್ನ ಮದುವೆ ಮಾಡಿದಿರಿ. ಈಗ ನಾನು ನಿಮ್ಮನ್ನು ಕೇಳುವುದು, ನೀವು ನನಗೆ ಹೇಳುವುದು ಏನೂ ಉಳಿದಿಲ್ಲ. ದಯವಿಟ್ಟು ನೀವು ನನ್ನ ಹಾದಿಯ ಮುಳ್ಳಾಗಬೇಡಿ. ನಿಮ್ಮ ಆಶೀರ್ವಾದ ನನ್ನ ಮೇಲೆ, ನನ್ನ ಮಗುವಿನ ಮೇಲೆ ಇದ್ದರೆ ಸಾಕು. ಅದಕ್ಕಿಂತ ಹೆಚ್ಚಿಗೆ ನಾನೇನೂ ಕೇಳುವುದಿಲ್ಲ.''

ಅಮ್ಮನ ಅಪ್ಪ ಬಂದ ಹಾದಿ ಹಿಡಿದು ಹೊರಟುನಿಂತರು ಮಡದಿಯೊಂದಿಗೆ. ಅಮ್ಮ ಆಡಿದ ಮಾತುಗಳನ್ನು ನೆನೆಸಿಕೊಳ್ಳುತ್ತ ಯಾವಾಗ ನಿದ್ರಾವಶನಾದೆನೋ ನನಗೇ ತಿಳಿಯದು.

ಮರುದಿನ ಬೆಳಗ್ಗೆ ನನಗೆ ಎಚ್ಚರವಾದಾಗ ಅಪ್ಪ ಅಮ್ಮ ಅಡುಗೆ ಒಲೆಯ ಮುಂದೆ ಸರಸದ ಮಾತುಗಳನ್ನಾಡುತ್ತ ಕುಳಿತಿದ್ದುದು ನನ್ನ ಕಣ್ಣಿಗೆ ಬಿತ್ತು. ಅಮ್ಮ ನುಡಿಯುತ್ತಿದ್ದಳು.

"ಸದ್ಯ ನನ್ನ ಮೇಲಿನ ಮುನಿಸು ಈಗಲಾದರೂ ಇಳಿಯಿತಲ್ಲ ನಿಮಗೆ?''

"ನಾನೆಂದಾದರೂ ನಿನ್ನ ಮೇಲೆ ವಿಪರೀತ ಕೋಪಗೊಂಡಿದ್ದೇನೆಯೇ ಪಾರ್ವತಿ. ನನಗೂ ಇಲ್ಲಿ ಒಬ್ಬನೇ ಬೇಸರವಾಗಿರುತ್ತದೆ. ಹಾಗಾಗಿ ನಿನ್ನ, ಮಧುವಿನ ಬರುವಿಗಾಗಿ ನಾನು ಚಾತಕ ಪಕ್ಷಿಯ ಕಾಯುತ್ತ ಇರುತ್ತೇನೆ. ನೀನು ಬರುವುದು ತಡವಾದರೆ, ಅದೂ ಬೇಕೆಂದೇ, ನನಗೆ ಬೇಸರವಾಗುತ್ತದೋ ಇಲ್ಲವೋ ನೀನೇ ಹೇಳು.''

"ಏನು ಮಾಡುವುದು, ನಿಜ ನಿಮಗೆ ಗೊತ್ತೇ ಇದೆ. ನನಗೆ ಹಳ್ಳಿಗೆ ಬರುವುದೆಂದರೇ ಬೇಸರ. ನೀವೂ ಯಾಕೆ ಬೆಂಗಳೂರಿಗೆ ಬಂದು ಏನಾದರೂ ಕೆಲಸ, ಬೊಗಸೆ ಮಾಡಿಕೊಂಡಿರ ಬಾರದು?''

"ಅದು ಮಾತ್ರ ಖಂಡಿತ ಸಾಧ್ಯವಿಲ್ಲ ಪಾರ್ವತಿ. ನನಗೆ ನನ್ನ ಹಳ್ಳಿ, ನನ್ನ ಭೂಮಿ, ನನ್ನ ಮನೆ ಬಿಟ್ಟು ಹೋಗುವುದು ಸಾಧ್ಯವಿಲ್ಲ. ಅಲ್ಲದೆ ನಿನಗೆ ಹೇಗೆ ನಿನ್ನ ಮಗನನ್ನು ಓದಿಸಿ ಮುಂದೆ ತರಬೇಕೆಂಬ ಆಸೆ ಇದೆಯೋ, ಹಾಗೆ ನನಗೆ ನನ್ನ ಮುಪ್ಪಿನ ತಾಯಿಯನ್ನು ಕಾಪಾಡಬೇಕೆಂಬ ಹೊಣೆ ಇದೆ. ಆ ಆಸೆ ಮಾತ್ರ ಬಿಟ್ಟು ಬಿಡು.''

"ಆಯಿತು, ಇಲ್ಲೇ ಇದ್ದರೂ ಸರಿಯಾಗಿ ಕೆಲಸ ಕಾರ್ಯ ಮಾಡಿಕೊಂಡು ಸ್ವಲ್ಪ ಹಣ ಸಂಪಾದನೆ ಮಾಡುವತ್ತ ಗಮನ ಹರಿಸಬಾರದೇ?''

"ನಾನೇನು ಮಾಡಲಿ ಪಾರ್ವತಿ. ಮಳೆ ಬಂದರೆ ಏನಾದರೂ ಸ್ವಲ್ಪ ಬೆಳೆ ಬೆಳೆಯಬಹುದು. ಅದಿಲ್ಲದೆ ಏನು ಮಾಡಲು ಸಾಧ್ಯ ಹೇಳು?''

"ಬರೀ ಮಳೆಯೊಂದನ್ನೇ ಯಾಕೆ ನಂಬಿ ಕುಳಿತಿದ್ದೀರಿ. ಮಳೆ ಕಡಿಮೆ ಬಿದ್ದರೆ, ನೀರು ಕಡಿಮೆ ಬೇಕಾಗುವ ಬೆಳೆಬೆಳೆಯಬಾರದೇ, ಅಲ್ಲದೆ ಬೇರೆ ಏನೊಂದೂ ಉದ್ಯೋಗವನ್ನು ಮಾಡಬಾರ ದೆಂದಿಯೇ. ನಾಲ್ಕು ಹಸು ಸಾಕಿ, ಯಾರಿಂದ ಲಾದರೂ ಸಾಲ ಮಾಡಿ ಹಾಲನ್ನು ರಾಮನಗರದ ಹೋಟೆಲಿಗೆ ಹಾಕಿ. ಮನೆಯ ಹಿಂದೆ ಮುಂದೆ ತರಕಾರಿ, ಸೊಪ್ಪು ಬೆಳೆದು ಮಾರಿ. ನಾಲ್ಕು ಕಾಸು ಸಂಪಾದಿಸಿ ನಾಲ್ಕು ಕಾಸಿನಲ್ಲಿ ಮನೆ ರಿಪೇರಿ ಮಾಡಿಸಬಾರದೇ?''

"ಆಗಲಿ ನೋಡೋಣ.''

"ಈ ನೋಡೋಣ, ಮಾಡೋಣ ಎಂಬ ಮಾತೆಲ್ಲ ಬೇಡ. ದೃಢ ನಿರ್ಧಾರ ಮಾಡಿ. ಏನನ್ನಾದರೂ ಮಾಡಬೇಕೆಂಬ ಛಲ ಹಿಡಿದು ಸಾಧಿಸಿ.''

"ಆಯಿತು, ಮತ್ತೆ ಮತ್ತೆ ಅದೇ ಮಾತನ್ನೇಕೆ ಎತ್ತುತ್ತೀಯ. ಬೇರೇ ಮಾತೇ ಇಲ್ಲವೇ?''

"ಆಗಲಿ, ಪ್ರಯತ್ನಿಸುತ್ತೇನೆ ಎಂಬ ಪದ ನಿಮ್ಮ ಬಾಯಿಂದ ಬರುವುದೇ ಇಲ್ಲವಲ್ಲ?''

"ಆಯಿತು ಮಹರಾಯಿತಿ. ಪ್ರಯತ್ನಿಸು ತ್ತೇನೆ. ಇನ್ನು ಇರುವಷ್ಟು ದಿನವಾದರೂ ನಾನು, ನೀನು ಇಲ್ಲಿ ಚೆನ್ನಾಗಿರಬಾರದೇ?''



"ಇರೋಣ ಬೇಡ ಎಂದವರ್ಯಾರು, ನೀವೇ ತಾನೇ ಮುನಿಸಿನಿಂದ ಬೇರೆಯಾದದ್ದು, ದೂರ ವಾದದ್ದು."

"ಆಯಿತಲ್ಲ ಅದೆಲ್ಲ ಮರೆತುಬಿಡು."

"ಅಷ್ಟಲ್ಲದೇ?"

"ರೇವಣ್ಣ ಅವನ ತೋಟದಲ್ಲಿ ಬೆಳೆದ ನಾಲ್ಕು ತೆಂಗಿನಕಾಯಿ ಕೊಡುತ್ತೀನಿ ಎಂದು ಹೇಳಿದ್ದಾನೆ. ಅರೆದು ಬೆಲ್ಲ ಹಾಕಿ ಕಾಯಿ ಹೋಳಿಗೆ ಮಾಡು ಮತ್ತೆ. ತಿಂದು ಬಹಳ ದಿನವಾಯಿತು. ಅಮ್ಮನಿಗೂ ಬಹಳ ಇಷ್ಟ. ನನಗೂ ಮಧುವಿಗೂ ಇಷ್ಟ."

"ಆಗಲಿ, ಹಾಗಿದ್ದರೆ ಈ ಬೆಲ್ಲದ ಕಾಫಿ ಕುಡಿದು ಹೋಗಿ, ತೆಂಗಿನಕಾಯಿ ತೆಗೆದುಕೊಂಡು ಬನ್ನಿ."

"ಇದೋ, ಬಂದೆ." ಅಪ್ಪ ಹೊರಟಾಗ ನಾನೂ ಹಾಸಿಗೆ ಬಿಟ್ಟು ಎದ್ದೆ. ಅಪ್ಪ ಅಮ್ಮನ ಸರಸದ ಮಾತುಗಳು ನನ್ನ ಮನಸ್ಸಿಗೆ ಮುದ ನೀಡಿದವು. ನನ್ನ ಮನಸ್ಸು ಗರಿಗೆದರಿತು. ನಾನು ಎದ್ದು ಮುಖ ತೊಳೆದು, ಅಮ್ಮ ಕೊಟ್ಟ ಬೆಲ್ಲದ ಕಾಫಿ ಕುಡಿದು ಹೊರಗಡೆ ಓಡಿದೆ. ಹಳ್ಳಿಯ ಮೂಲೆ ಮೂಲೆ ನನಗೆ ಚಿರಪರಿಚಿತ. ಆಂಜನೇಯನ ಗುಡಿಯ ಬಳಿ ನನ್ನ ಹಳೆಯ ಸ್ನೇಹಿತರು ಗೋಲಿ, ಗಜ್ಜುಗ ಆಡುತ್ತಿದ್ದರು. ಅವರೊಂದಿಗೆ ನಾನೂ ಸ್ವಲ್ಪ ಹೊತ್ತು ಆಟ ಆಡಿದೆ. ದೇವಸ್ಥಾನ ಪ್ರದಕ್ಷಿಣೆ ಹಾಕಿದೆ. ರೇವಣ್ಣನ ತೋಟದಲ್ಲಿ ಅಡ್ಡಾಡಿದೆ.

"ನಿನ್ನ ಅಪ್ಪನನ್ನು ಹುಡುಕಿಕೊಂಡು ಬಂದೆಯೇನೋ ಮಧು, ಅವನಾಗಲೇ ಹೋಗಿಯಾಯಿತು. ಹೇಗೂ ಬಂದಿದ್ದೀಯಲ್ಲ ಒಂದು ಎಳನೀರು ಕುಡಿದು ಹೋಗು ಎಂದವನೇ ಎಳನೀರೊಂದನ್ನು ಕೊಚ್ಚಿಕೊಟ್ಟ. ಎಳನೀರು ಕುಡಿದು ತೋಪಿನಲ್ಲಿ ನಡೆದು ಕೆರೆಯ ಏರಿಯ ಮೇಲೆ ಹೆಜ್ಜೆ ಹಾಕಿದೆ. ಬಿಸಿಲು ಆಗಲೇ ಚುರುಗುಟ್ಟುತ್ತಿತ್ತು. ಕೆರೆಯತ್ತ ತಿರುಗಿ ನೋಡಿದೆ. ಕೆರೆಯ ನೀರು ಬಹುಪಾಲು ಬತ್ತಿಹೋಗಿತ್ತು. ಇರುವ ಸ್ವಲ್ಪ ನೀರಿನಲ್ಲಿ ಎಮ್ಮೆ ಹಸುವಿಗೆ ಮೈ ತೊಳೆಸುವವರು ತೊಳೆಸುತ್ತಿದ್ದರು. ಬಟ್ಟೆ ಒಗೆಯುವವರು ಬಟ್ಟೆ ಒಗೆಯುತ್ತಿದ್ದರು.

ಹಳ್ಳಿಯ ಹುಡುಗರು ಕೆಲವರು ಈಜು ಹೊಡೆಯುತ್ತಿದ್ದರೆ ಮತ್ತೆ ಕೆಲವರು ಮೈ ತಿಕ್ಕಿ ಸ್ನಾನ ಮಾಡುತ್ತಿದ್ದರು. ಆ ದೃಶ್ಯ ನನಗೆ ಹೊಸದೇನಲ್ಲ, ಮೊದಲಾಗಿದ್ದರೆ ನಾನೂ ಅವರೊಂದಿಗೆ ಸ್ನಾನ ಮಾಡುತ್ತಿದ್ದೆ, ಈಜು ಹೊಡೆಯುತ್ತಿದ್ದೆ. ಈಗ ನನಗೆ ಆ ನೀರು ಕೊಳಕು ಎನಿಸಿತು. ಸ್ನಾನ ಮಾಡಲು, ಕುಡಿಯಲು ಅನರ್ಹ ಎನಿಸಿತು. ಹಾಗಾಗಿ ನಾನು ಕೆರೆಯ ಏರಿಯಿಂದ ಇಳಿದು ಮನೆಯತ್ತ ಹೆಜ್ಜೆ ಹಾಕಿದೆ.

ಹಾದಿಯಲ್ಲಿ ಹೂಬಿರಿದು ನಿಂತಿದ್ದ ಕಾಡುಕಣಗಲೆ, ಗಿಡ ಹಾಗೂ ಕೆಂಪುದಾಸವಾಳ ನನ್ನನ್ನು ಆಕರ್ಷಿಸಿತು. ಕೆಂಪುಕಣಗಲೆ, ದಾಸವಾಳವನ್ನು ಕೈತುಂಬ ಕಿತ್ತು ತಂದೆ. ಆದರೆ ಅದನ್ನು ತೆಗೆದುಕೊಂಡು ಹೋಗುವುದು ಹೇಗೆ ಹೊಸ ವಿಚಾರ ಹೊಳೆಯಿತು. ಪಕ್ಕದಲ್ಲೇ ಮುತ್ತುಗದ ಎಲೆಯ ಗಿಡಗಳು ಇದ್ದವು. ಎಲೆಗಳನ್ನು ಕಡ್ಡಿಯಿಂದ ಚುಚ್ಚಿ ಒಂದಕ್ಕೊಂದು ಸೇರಿಸಿದೆ. ಹೂವನ್ನೆಲ್ಲ ಅದರಲ್ಲಿ ಹಾಕಿ ಪೊಟ್ಟಣ ಕಟ್ಟಿದೆ. ಮನೆಯತ್ತ ಹೆಜ್ಜೆ ಹಾಕಿದೆ.

ಮನೆಯೊಳಗೆ ಹೆಜ್ಜೆ ಹಾಕುತ್ತಿದ್ದಂತೆ ಒಬ್ಬಟ್ಟಿನ ವಾಸನೆ ಗಮ್ಮೆಂದು ಮೂಗಿಗೆ ಹೊಡೆಯಿತು. ಒಳಗೆ ಬಂದು ನೋಡಿದೆ. ಅಮ್ಮ ಹೋಳಿಗೆ ಕಾವಲಿಯ ಮೇಲೆ ಹಾಕಿ ಸುಡುತ್ತಿದ್ದಳು. ನನಗೆ ಆನಂದವಾಯಿತು. ನಾಲಿಗೆಯಲ್ಲಿ ನೀರೂರಿತು. ಅಮ್ಮ ನಿನಗಾಗಿ ಏನು ತಂದಿದ್ದೇನೆ ನೋಡು ಎಂದೆ ಹೂವಿನ ಪೊಟ್ಟಣವನ್ನು ತೋರುತ್ತ. ಅಮ್ಮ ಆನಂದ ತುಂದಿಲಲಾದಳು. ಹೂವನ್ನು ಕಂಡ ಆನಂದಕ್ಕಿಂತ, ಮುತ್ತುಗದ ಎಲೆಯನ್ನು ಕಂಡ ಆನಂದ ಅವಳಲ್ಲಿ ಹೆಚ್ಚಾಗಿತ್ತು. "ಪೊಟ್ಟಣ ದೇವರ ಮುಂದಿಡು ಮಧು" ಎಂದಳು.

(ಸಶೇಷ)

ರಾಗಸಂಗಮ

ಲಾಟರಿ

ಬಹುಮಾನ ರೂ. 200

* ಓದುಗರಿಗಾಗಿ 'ರಾಗಸಂಗಮ' ನಡೆಸುವ ಒಂದು ನೂತನ 'ಲಾಟರಿ ಡ್ರಾ' ಇದು.

* ಈ ಲಾಟರಿಗಾಗಿ ನೀವು ಒಂದು ಪೈಸೆ ಕೂಡ ಹಣ ಕೊಡುವ ಆಗತ್ಯವಿಲ್ಲ.

* 'ರಾಗಸಂಗಮ' ಪತ್ರಿಕೆಯನ್ನು ಕೊಂಡು ಓದುವ ಪ್ರತಿಯೊಬ್ಬರೂ ಈ 'ಲಾಟರಿ ಡ್ರಾ' ನಲ್ಲಿ ಭಾಗವಹಿಸಬಹುದು.

* 'ಪದರಂಗ' 'ಚಾಣಕ್ಯ ಸ್ಪರ್ಧೆ' ಮುಂತಾದುವುಗಳನ್ನು ನಡೆಸಿದರೆ ಒಂದು ವರ್ಗದ ಓದುಗರು ಮಾತ್ರ ಅದರಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

* ಆದರೆ 'ರಾಗಸಂಗಮ' ಓದುಗರೆಲ್ಲರೂ ಆಸಕ್ತಿಯಿಂದ ಭಾಗವಹಿಸಬೇಕೆಂಬ ಉದ್ದೇಶದಿಂದ, ಅವರ ವಯಸ್ಸು, ವಿದ್ಯಾಭ್ಯಾಸ, ಬುದ್ಧಿವಂತಿಕೆ, ಇವುಗಳನ್ನು ಆಧಾರವಾಗಿಟ್ಟುಸ್ಪರ್ಧೆಯನ್ನು ನಡೆಸದೆ ಬಹಳ ಸುಲಭವಾದ ಈ 'ಲಾಟರಿ ಡ್ರಾ'ವನ್ನು ನಡೆಸುತ್ತೇವೆ.

* ನೀವು ಮಾಡಬೇಕಾದ್ದು ಬಹಳ ಸುಲಭವಾದದ್ದು ಹಾಗೂ ಶ್ರಮವಿಲ್ಲದ್ದು.

* ನಿಮಗಾಗಿ ಈ ಪುಟದಲ್ಲಿ 'ಲಾಟರಿ ಡ್ರಾ ಸಂಖ್ಯೆ'ಯೊಂದಿಗೆ ಕೂಡಿದ ನಮ್ಮ ವಿಳಾಸವನ್ನು ಮುದ್ರಿಸಿದ್ದೇವೆ. ಇದನ್ನು ಕತ್ತರಿಸಿ ತೆಗೆದು ಅಂಚೆ ಕಾರ್ಡಿನ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಿ, ಹಾಗೂ ಅದೇ ಮಗ್ಗುಲಿನ, ಬರಹಕ್ಕೆ ಮೀಸಲಾಗಿರುವ ಖಾಲಿ ಜಾಗದಲ್ಲಿ ಇದೇ ಪುಟದಲ್ಲಿ ಸೂಚಿಸಿರುವ ವಿವರಗಳನ್ನು ಬರೆದು ಕೊನೆಯ ತಾರೀಖು ಮತ್ತು ಸಮಯದೊಳಗೆ ನಮ್ಮ ಕೈ ಸೇರುವಂತೆ ಕಳುಹಿಸಿ.

ನೆನಪಿಡಿ : ನಮ್ಮ ವಿಳಾಸವನ್ನು ಮಾತ್ರ ವಿಳಾಸಕ್ಕಾಗಿ ಮೀಸಲಾದ ಸ್ಥಳದಲ್ಲಿ ಅಂಟಿಸಬಹುದೇ ವಿನಾ ಬೇರೆ ಏನನ್ನೂ ಅಂಟಿಸಬಾರದು. ಇತರ ವಿವರಗಳನ್ನೆಲ್ಲಾ ಕೈಯಲ್ಲೇ ಬರೆದು ಕಳುಹಿಸಬೇಕು.

* ಪ್ರತಿ ವಾರವೂ ಲಾಟರಿ ಟಿಕೆಟ್ಟುಗಳನ್ನು 'ಡ್ರಾ' ಪದ್ಧತಿಯಲ್ಲಿ ಆಯ್ಕೆ ಮಾಡಿ, ನಾಲ್ವರು ಅದೃಷ್ಟಶಾಲಿ ಓದುಗರಿಗೆ ತಲಾ ರೂ. 50 ರಂತೆ ರೂ. 200 ಬಹುಮಾನ ನೀಡಲಾಗುವುದು.

* 'ಡ್ರಾ'ನಲ್ಲಿ ಯಶಸ್ವಿಯಾದವರ ಹೆಸರು ಮತ್ತು ವಿಳಾಸ ಪ್ರಕಟವಾಗುವ 'ರಾಗಸಂಗಮ'ದ ಸಂಚಿಕೆ : 25–10–92.

* ನಿಮ್ಮ **'ಲಾಟರಿ ಟಿಕೇಟ್'** ಅಂಚೆ ಕಾರ್ಡುಗಳು ನಮ್ಮ ಕಚೇರಿಗೆ ಬಂದು ಸೇರಬೇಕಾದ ಕೊನೆಯ ತಾರೀಕು ಮತ್ತು ಸಮಯ : ಶುಕ್ರವಾರ

2–10–92 ಸಂಜೆ 5 ಗಂಟೆ.

ಅಂಚೆ ಕಾರ್ಡಿನ ವಿಳಾಸದ ಸ್ಥಳದಲ್ಲಿ ಇದನ್ನು ಕತ್ತರಿಸಿ ಅಂಟಿಸಿ.

ರಾಗಸಂಗಮ ಲಾಟರಿ ಡ್ರಾ – ೧೪[illegible]

ಸಂಗಮ ಪ್ರಕಾಶನ
ಅಂಚೆ ಪೆಟ್ಟಿಗೆ 6646
41, ಕೋಟೆ 'ಬಿ' ಬೀದಿ
ಬೆಂಗಳೂರು – 560 002
BANGALORE - 560 002

ಅಂಚೆ ಕಾರ್ಡಿನ ವಿಳಾಸದ ಮಗ್ಗುಲಲ್ಲಿರುವ ಖಾಲಿ ಸ್ಥಳದಲ್ಲಿ ಈ ಕೆಳಕಂಡಂತೆ ಬರೆದು ಅದರ ಕೆಳಗೆ ತಾರೀಕಿನೊಂದಿಗೆ ಕೂಡಿದ ನಿಮ್ಮ ಸಹಿಯನ್ನು ಮಾಡಬೇಕಾದದ್ದು ಅವಶ್ಯ.

ಶುಲ್ಕವೇ ಇಲ್ಲದ ಈ 'ರಾಗಸಂಗಮ ಲಾಟರಿ ಡ್ರಾ' ನಲ್ಲಿ ನಾನು ಭಾಗವಹಿಸಲು ಇಚ್ಛಿಸುತ್ತೇನೆ. ಇದರಲ್ಲಿ ಸಂಪಾದಕರ ತೀರ್ಪೇ ಅಂತಿಮ ಹಾಗೂ ಕಾನೂನುಬದ್ಧವಾದದ್ದು ಎಂದು ಅರಿತಿದ್ದೇನೆ.

ಅಂಚೆ ಕಾರ್ಡಿನ ಪೂರ್ಣ ಖಾಲಿ ಇರುವ ಮುಂಬದಿಯಲ್ಲಿ ಈ ಕೆಳಗೆ ಕೇಳಿರುವ ವಿವರಗಳನ್ನು ಓದಲು ಸಾಧ್ಯವಾಗುವಂತೆ ಸ್ಪಷ್ಟವಾಗಿ ಬರೆಯಿರಿ.

ನಿಮ್ಮ ಹೆಸರು ; ಸಂಪೂರ್ಣ ವಿಳಾಸ ; ಅಂಚೆ ; ಪಿನ್‌ಕೋಡ್ ; ಹೋಬಳಿ ; ತಾಲ್ಲೂಕ್ ; ಜಿಲ್ಲೆ ; ರಾಜ್ಯ.

ಒಂದು ಪುಟದ ಮಿನಿ ಕಥೆ

ರಿಸರ್ವೇಶನ್

ಜಿ. ವಿ. ಪ್ರಭು

ಶ್ರೀನಾಥ್ ಬಿ. ಎ. ಪಾಸ್ ಮಾಡಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಹೆಸರು ರಿಜಿಸ್ಟರ್ ಮಾಡಿಸಿ ಎರಡು ವರ್ಷಗಳೇ ಆಗಿದ್ದರೂ ಈವರೆಗೂ ಯಾವೊಂದು ಉದ್ಯೋಗವೂ ಸಿಕ್ಕಿಲ್ಲ. ಅದಕ್ಕೆ ಮುಖ್ಯವಾದ ಕಾರಣ ಶ್ರೀನಾಥ್‌ಗೆ ಯಾವ ವಿಧವಾದ ರಿಸರ್ವೇಶನ್ ಕೋಟ ಇಲ್ಲದಿರುವುದಷ್ಟೇ ಅಲ್ಲ; ಶ್ರೀನಾಥ್ ಸಾಕಷ್ಟು ದಕ್ಷಿಣೆ ಕೊಡಲು ಅಶಕ್ತನಾಗಿದ್ದ. ಹಾಗಾಗಿ ಎಲ್ಲ ಹುದ್ದೆಗಳು ಇಂಟರ್‌ವ್ಯೂ ಹಂತದವರೆಗೂ ಬಂದು ಕೈಜಾರಿ ಹೋಗುತ್ತಿತ್ತು.


ಎಷ್ಟೇ ನಿರಾಸೆಯಾದರೂ ಹಿಡಿದ ಕೆಲಸ ಬಿಡದೆ ಶ್ರೀನಾಥ್ ಪೇಪರ್‌ನಲ್ಲಿ ಬಂದ ಬಂದ ಅಡ್ವರ್ಟೈಸ್‌ಮೆಂಟ್‌ಗಳಿಗೆಲ್ಲ ಅರ್ಜಿ ಗುಜರಾಯಿಸಿ ಕೆಲಸಕ್ಕಾಗಿ ಬೇಟೆಯಾಡುವ ತನ್ನ ಪ್ರಯತ್ನವನ್ನು ಛಲ ಬಿಡದ ತ್ರಿವಿಕ್ರಮನಂತೆ ಮುಂದುವರೆಸಿದ. ಈ ದೆಸೆಯಲ್ಲಿ ಮುಂಬಯಿ, ಮದರಾಸ್, ನಾಗಪುರ, ಪುಣೆ, ಬೆಳಗಾಂ ಇತ್ಯಾದಿ ದೂರದ ಊರು ಗಳಿಗೆಲ್ಲ ಹೋಗಿ ಕೆಲಸಕ್ಕಾಗಿ ಪರದಾಡಿ ವಾಪಾಸು ಬಂದ.

ಹೀಗಿರುವಾಗ ಒಂದು ಕಂಪೆನಿಯಲ್ಲಿ ಕ್ಲರ್ಕ್ ಹುದ್ದೆಗೆ ಇಂಟರ್‌ವ್ಯೂ ಬಂತು. ಶ್ರೀನಾಥ್‌ಗೆ ಬತ್ತಿಹೋದ ಆಶೆ ಮತ್ತೆ ಚಿಗುರಿತು. ಆಸಕ್ತಿಯಿಂದ ಇಂಟರ್‌ವ್ಯೂ ಅಟೆಂಡ್ ಮಾಡಿದ. ಆದರೆ ಇಲ್ಲೂ ಅದೃಷ್ಟ ಕೈ ಕೊಟ್ಟಿತು. ಕೆಲಸ ಸಿಕ್ಕುವುದು ಭ್ರಮೆ ಎಂದು ಶ್ರೀನಾಥ್ ಖಿನ್ನ ಮನಸ್ಕನಾದ.

'ಇನ್ನು ಈ ಜನ್ಮದಲ್ಲಿ ನನಗೆ ಕೆಲ್ಸ ಸಿಗೋದಿಲ್ಲ.' ಅಂತ ಶ್ರೀನಾಥ್‌ಗೆ ಖಾತ್ರಿಯಾಯಿತು. 'ಆದ್ದರಿಂದ ಆತ್ಮಹತ್ಯೆಯೊಂದೇ ಇದಕ್ಕೆ ಪರಿಹಾರ' ಅಂತ ಮನದಲ್ಲೇ ನಿರ್ಣಯಿಸಿಕೊಂಡು, ಹತ್ತಿರದಲ್ಲೇ ಇದ್ದ ಒಂದು ಬಹುಮಹಡಿ ಕಟ್ಟಡದಿಂದ ಹಾರಿ ಪ್ರಾಣ ಬಿಡಬೇಕೆಂದು ದೃಢಸಂಕಲ್ಪ ಮಾಡಿದ.


ಸರಿ, ಆತನೇ ಬಹುಮಹಡಿ ಕಟ್ಟಡ ಏರಿ ಅಲ್ಲಿಂದ ಹಾರಿ ಕೆಳಕ್ಕೆ ಬಿದ್ದ ಶ್ರೀನಾಥ್. ವಿಪರ್ಯಾಸವೆಂದರೆ ಶ್ರೀನಾಥ್‌ಗೆ ಇಲ್ಲೂ ವಿಧಿ ಕೈ ಕೊಟ್ಟುಬಿಡೋದೇ. ಒಂದು ಕಾಲು ಮುರಿದು ಹೋಯಿತು. ಜೀವ ಹೋಗಲಿಲ್ಲ.

ಆದರೆ ಈಗ ಶ್ರೀನಾಥ್‌ಗೆ ತಾನು ಒಂದು



ಕಾಲಿಲ್ಲದ ಕುಂಟನೆಂದು ಎಳ್ಳಷ್ಟೂ ಯೋಚನೆ ಇಲ್ಲ. ಕಾರಣ ಈಗ ಶ್ರೀನಾಥ್‌ಗೆ ವಿಧಾನ ಸೌಧದಲ್ಲಿ ಹೈಕ್ಲಾಸ್ ಸರ್ಕಾರಿ ಕೆಲಸ ಇದೆ. ಆ ಕೆಲ್ಸ 'ವಿಕಲಾಂಗರಿಗೆ ಮೀಸಲಾತಿ' ಕೋಟಾದಲ್ಲಿ ಶ್ರೀನಾಥ್‌ಗೆ ಸಿಕ್ಕಿದ್ದು, ಆತ ಈಗ ಸಂತೋಷದಿಂದ ಜೀವನ ನಡೆಸುತ್ತಿದ್ದಾನೆ.

ಪ್ರಶ್ನೆಗಳು



ಅಕ್ಕಿ ಚೀಲದ ತುಂಬ
ಕಲ್ಮಣ್ಣೇ ತುಂಬಿರಲು
ಆರಿಸಿಕೊಳ್ಳಲಿ ಏನನ್ನು?
ಎಲ್ಲಿ ಹೋದರೂ ಕೂಡ
ಲಂಚವೇ ಪ್ರಪಂಚ
ನಿಷ್ಟರ ಹುಡುಕಲಿ ನಾನೆಲ್ಲಿ?
ಸತ್ಯಸಂಧರಿಗಿಂದು
ನಿತ್ಯ ಕಷ್ಟವು ನೋಡು
ಸುಳ್ಳು ತಟವಟವೇ ಇರಲೇನು?
ಜಾತಿ ಜಾತಿಯ ಮಧ್ಯೆ
ಕಚ್ಚಾಟ ನಡೆದಿರಲು
ಮನುಷ್ಯರ ಹುಡುಕಲಿ ನಾನೆಲ್ಲಿ?
ರಾಜಕೀಯವೆಂಬ
ರಂಗಮಂಚದ ಮೇಲೆ
ಗುದ್ದಾಡುತಿಹರು ಈ ನಟರು
ಬಣ್ಣ ಕಳಚಿದ ಮೇಲೆ
ಎಲ್ಲ ಬಣ್ಣವೂ ಒಂದೆ
ಆರಿಸಿಕೊಳ್ಳಲಿ ಯಾರನ್ನು?

ಜಿ. ಎನ್. ಚಂದ್ರಶೇಖರ ಹೇರ್ಳೆ

ಧಾರಾವಾಹಿ-೨೨

ಚೈತ್ರ



ಚಂದನ

ಯು. ವಿ. ತಾರಿಣಿ ರಾವ್

ಮೌತಿಲ್ಲದ ಕಾಫಿ ಲೋಟ ಮುಂದು ಬಂದಾಗ ಅವನಿಗೆ ರೇಗುವಂತಾಯ್ತು. ಬಿಸಿ ಬಿಸಿ ಕಾಫಿ ಎಷ್ಟೋ ಹಿತವೆನಿಸಿತು. ಹಿಂದೆಯೇ ಬಿಸ್ಕೇಟು, ಬಿಸಿ ಬೋಂಡ ಮುಗಿಸಿದ. ಜೊತೆಯಲ್ಲಿ ಬಂದ ಪ್ರಕಾಶ ಅಮ್ಮನ ಮಡಿಲು ಸೇರಿರಬೇಕು.

"ಮಧುಕರ ಯಾಕೆ ಬರಲಿಲ್ಲ ಶ್ರೀ?'' ಶಾಂತಜ್ಜಿ ಬಂದು ಎದುರು ಕುಳಿತರು.

"ನಿನ್ನ ಮೊಮ್ಮಗನನ್ನು ಕೇಳಿಕೋ, ನಿನ್ನ ಮಗನ ಕಲ್ಯಾಣ ಗುಣಗಳನ್ನು.''

"ಯಾಕೆ ಹಾಗೆಲ್ಲ ಮಾತಾಡ್ತೀಯ, ಮಧುಕರ ಒಳ್ಳೆಯವನೇ, ಸಹವಾಸದೋಷ ಕಣಪ್ಪ.''

"ಹೌದಜ್ಜಿ, ನಿನ್ನ ಮಗು ಇನ್ನೂ ಚಿಕ್ಕದು, ಹೋಗಿ ನೋಡು ಮುಂಬಯಿಯ ಪೋಲೀಸರಲ್ಲಿ ಅವನ ಹೆಸರು ಹಳೆಯ ದಾಖಲು. ಕೋಟಿ ಕೋಟಿ ಸಂಪಾದಿಸಿದ್ದ ಕುಳ. ಮಧುಮಾಮಂಗೆ ಇಂಥ ಬುದ್ಧಿ ಯಾಕೆ ಅಂತೀನಿ. ಕೈಗೆ ಬಂದ ಮಗ, ಮಗಳಿದ್ದಾರೆ.''

"ಅನ್ನಪ್ಪ ಅನ್ನು, ಇದೂ ಒಂದು ಅವಮಾನ ಈ ವಯಸ್ಸಿನಲ್ಲಿ ಆಗಬೇಕಿತ್ತೇನು.'' ಬುಳಬುಳನೆ ಅಜ್ಜಿ ಕಣ್ಣೀರು ಸುರಿಸತೊಡಗಿದರು.

"ಅಜ್ಜಿ, ಅವರ ಮಾತು ಇಲ್ಲಿ ಬೇಡ. ಪ್ರಕಾಶ ಸದ್ಯ ಅವರ ದಾರಿಗೆ ಹೋಗದೇ ಇದ್ದದ್ದು ನಿನ್ನ ಪುಣ್ಯ.'' ಅವನು ಸಿಡುಕಿದ.

"ಚೈತ್ರ ಎಲ್ಲಿ ಹೋಗಿದ್ದಾಳೆ. ಸಂಜೆ ಆಗ್ತಾ ಇದ, ಫಾರ್ಮ್‌ಗೆ ಹೋಗಿದ್ದಾಳೇನು?''

ಅಜ್ಜಿ ಮೂಗೊರೆಸಿಕೊಂಡು ಇನ್ನಷ್ಟು ಕಣ್ಣೀರು ಹಾಕಿತು.

• "ನೀ ಏನೇ ಹೇಳು ಶ್ರೇಯಸ್, ಅವಳ ನಡತೆಯೇ ಹಿಡಿಸಲ್ಲಪ್ಪ.''

"ಏನಾಯ್ತು ಅಜ್ಜಿ ಅಂತಾದ್ದು.''

"ಎದೆ ಗಟ್ಟಿ ಮಾಡಿಕೋ ಮಗು. ಅವಳು ತಾಯಿ ಮನೆಗೆ ಹೇಳದೆ ಕೇಳದೆ ಹೊರಟು ಹೋಗಿದ್ದಾಳೆ.''

"ಏನು, ಸಾಧ್ಯವಿಲ್ಲ, ಚೈತ್ರಳ ಸ್ವಭಾವ ನಂಗೆ ಚೆನ್ನಾಗಿ ಗೊತ್ತಿದೆ. ಏನು ನಡೆಯಿತು ಪೂರ್ತಿ ಹೇಳು.''

"ನೀನಿಲ್ಲದೆ ಇಲ್ಲಿ ಅವಳಿಗೆ ರೆಕ್ಕೆ ಬಂದಂತೆ, ಎಸ್ಟೇಟಿಗೆ ಹೋಗಿ ಬರ್ತಾ ಇದ್ದಳು. ಹೊತ್ತು ಗೊತ್ತು ಇಲ್ಲದೆ ಎಂಥ ದುರ್ಬುದ್ಧಿ ಅವಳಿಗೆ. ಮನೆಯ ವಜ್ರದ ಒಡವೆಗಳನ್ನು ನಂಜುಂಡಯ್ಯ ನವರಿಗೆ ಕೊಟ್ಟಿದ್ದಳಪ್ಪ. ಇನ್ನು ಏನೇನು ಕೊಟ್ಟಿದ್ದಾಳೋ ಏನೋ, ಅವರತ್ರ ಅವಳಿಗೇನು ಕೆಲಸ. ಇವಳ ಚೆಲ್ಲಾಟ ನೋಡಿ ಪ್ರದೀಪ್ ಎಚ್ಚರಿಸಿದರೆ ಅವನಿಗೇ ಬಾಯಿಗೆ ಬಂದಂತೆ ಬಯ್ದಳು. ಅಯ್ಯೋ ಆ ಮುದುಕ ಒಳ್ಳೆಯವನಲ್ಲ ಶ್ರೇಯಸ್, ಈ ವಯಸ್ಸಿನಲ್ಲಿ ಅವನಿಗೇನು ಇಂಥ ದುರ್ಬುದ್ಧಿ ಬಂತೋ ಕಾಣೆ.'' ಪಟಪಟನೆ ಮಾತು ಹೊರಬಂದವು.

ಶಾಂತಜ್ಜಿಯ ಮಾತುಗಳು ವಿಷಬಾಣದಂತೆ ಅವನೆದೆಗೆ ತಾಕಿದವು. "ಏನಾಯ್ತು, ಅವಳು ಯಾಕೆ ಮೈಸೂರಿಗೆ ಹೋದ್ಲು ಹೇಳಬಾರದೆ?''

"ತಾಳಪ್ಪ ಹೇಳ್ತೀನಿ. ಅವಳಮ್ಮ ಒಳ್ಳೆ

ಯುವಳಲ್ಲವಂತೆ ಶ್ರೀಕಂಠ ಶಾಸ್ತ್ರಿಗಳ ಸೂಳೆಯಂತೆ. ಅದಕ್ಕೂ ಮುಂಚಿನಿಂದ ಸೂಳೆ ಮನೆತನದವಳಂತಪ್ಪ. ಯಾವನೋ ಬಂದು ದುಡ್ಡು ಕೇಳ್ತಾ ಇದ್ದನಂತೆ. ಇವಳೂ ಕೊಡ್ತಿದ್ಲಂತೆ. ಕೊನೆಗೆ ಊರಿಗೆಲ್ಲ ಗುಲ್ಲಾಗಿ ಕಾವೇರಿಯಲ್ಲಿ ಹಾರ್ಕೊಂಡು ಸತ್ಲಂತೆ. ಅದಕ್ಕೇ ಹೇಳೋದು ಕುಲ ಗೋತ್ರ ನೋಡಿ ಹೆಣ್ಣು ತರ್ಬೇಕು ಅಂತ. ನೋಡಿದ್ಯಾ ಏನೇನಾಗಿ ಹೋಯ್ತು. ತಾಯಿ ಸತ್ಲು ಅಂತ ತಿಳೀತಿದ್ದಂತೆ ಇಲ್ಲಿಂದ ಯಾರಿಗೂ ಹೇಳದೆ ಕೇಳದೆ ಪೇರಿ ಕಿತ್ತಳು. ಇಷ್ಟೇ ಇವರ ಜೀವನ.'' ಸುತ್ತಿಗೆಯಿಂದ ನೆತ್ತಿಯ ಮೇಲೆ ಮಾತಿನ ಪ್ರಹಾರ ಬಿದ್ದವನಂತೆ ಚಡಪಡಿಸಿದ.

"ಅಯ್ಯೋ ಶ್ರೇಯಸ್. ಹೋದ್ರೆ ಹೋಗ್ಲಿ ಬಿಡು ಪೀಡೆ ಕಳೀತು. ಮರ್ಯಾದೆ ಮಾನವಂತರ ಮಗಳಾಗಿದ್ರೆ ಹೇಳದೆ ಕೇಳದೆ ಹೋಗ್ತಿದ್ಲೇನು. ನಮ್ಮ ಶ್ವೇತ ಏನಾಗಿದ್ದಾಳೆ. ಕೈಲಿ ಬೆಣ್ಣೆ ಇಟ್ಕೊಂಡು ತುಪ್ಪಕ್ಕೆ ಅಲೆದಂತಾಯ್ತು.''

ದಿಗ್ಮೂಢನಂತೆ ಕುಳಿತೇ ಇದ್ದ ಶ್ರೇಯಸ್.

"ಎಲ್ಲ ಬಿಟ್ಟು ಎಂತಹವಳನ್ನು ಮದುವೆಯಾದೆ. ಜನರ ಮಧ್ಯೆ ಮನೆತನದ ಮರ್ಯಾದೆ ಬೀದಿ ಪಾಲಾಯ್ತು.''

"ಅಜ್ಜಿ ಸ್ವಲ್ಪ ಸುಮ್ಮನಿರು.''

"ನಿನ್ನನ್ನು ನಂಬಿಸಿ ಕತ್ತು ಕೊಯ್ದು ಬಿಟ್ಟಳು. ನಿನ್ನ ಸಂಕಟ ನನ್ನಿಂದ ನೋಡಲಿಕ್ಕೆ ಆಗಲ್ಲಪ್ಪ.''

ಶಾಂತಜ್ಜಿಯ ಅಳು ಮುಂದುವರೆದೇ ಇತ್ತು.

"ದಯವಿಟ್ಟು ಇಲ್ಲಿಂದ ಹೊರಟು ಹೋಗಿಬಿಡು. ನಾನೊಬ್ಬನೇ ಇರ್ಬೇಕು.''

ದುಡುದುಡು ಮಹಡಿಯ ತನ್ನ ಕೋಣೆಯೊಳಗೆ ಹೊರಟು ಹೋಗಿ, ಬಾಗಿಲು ಮುಚ್ಚಿಕೊಂಡ. ತನ್ನ ಹಿಂದೆ ಎಷ್ಟೆಲ್ಲ ಘಟನೆ ನಡೆದು ಹೋಗಿವೆ. ಚೈತ್ರಳಿಗೆ ಫೋನ್ ಮಾಡಿದಾಗ ಶಾಂತಜ್ಜಿ ಫೋನ್ ಎತ್ತಿ ಕೊಳ್ಳುತ್ತಿದ್ದಳು. ಚೈತ್ರಳಿಗೆ ಸಿಟ್ಟು ಬಂದಿದೆ ಎಂದು ತಿಳಿದುಕೊಂಡಿದ್ದೆನಲ್ಲ. ಚೈತ್ರ ಯಾಕೆ ಹಾಗೆ ಮಾಡಿದಳು. ಅವಳ ತಾಯಿ ಚರಿತ್ರಹೀನಳೇನು. ಆದರೆ ಚೈತ್ರ ಯಾಕೆ ಓಡಿ ಹೋಗಬೇಕಿತ್ತು. ನಂಜುಂಡಯ್ಯನವರಿಗೂ, ಇವಳಿಗೂ ಏನು ಸಂಬಂಧ, ಅವಳೇಕೆ ಅವರಿಗೆ ಒಡವೆ ಕೊಟ್ಟಳು. ತಮ್ಮಿಬ್ಬರ ಅಕೌಂಟಿನಲ್ಲಿ ಹಣವಿರಲಿಲ್ಲವೆ. ಅವಳ ತಾಯಿಯನ್ನು ಶ್ರೀಕಂಠಶಾಸ್ತ್ರಿಗಳು ಇಟ್ಟುಕೊಂಡಿದ್ದರೆ! ಎಂಥ ಮಾತು, ಆಕೆ ಅವರ ಮುಂದೆ ನಿಂತು ಮಾತಾಡುತ್ತಲೇ ಇರಲಿಲ್ಲ.

ಚೈತ್ರ ವೇಶ್ಯಾ ಪುತ್ರಿ ಏನು. ಶೂನ್ಯದತ್ತ ದಿಟ್ಟಿಸುತ್ತ ಕುಳಿತಿದ್ದ ಶ್ರೇಯಸ್. ಕೋಣೆಯೊಳಗೆ ದಿಟ್ಟಿಸಿದಾಗ ಪ್ರತಿಯೊಂದೂ ವಸ್ತುವೂ ಇಟ್ಟ ಜಾಗದಲ್ಲೇ ಇತ್ತು. ಚೈತ್ರ ಏನೂ ತೆಗೆದುಕೊಂಡು ಹೋಗಿರಲಿಲ್ಲ. ಎಲ್ಲವೂ ಅಲ್ಲಲ್ಲೇ ಇದ್ದವು.

ರಾತ್ರಿಯೆಲ್ಲ ಚಿಂತಿಸುತ್ತಿದ್ದಂತೆ ಅವನಲ್ಲಿ ಚೈತ್ರ ಹೊರಟು ಹೋಗಲು ಕಾರಣವೇನು ತಿಳಿದುಕೊಳ್ಳಲೇ ಬೇಕೆನಿಸಿತು. ಅನಿಸಿಕೆ ದೃಢವಾಗತೊಡಗಿತು.

ಬೆಳಗ್ಗೆ ಎಂದಿನಂತೆ ಹೊರಬಂದ ಶ್ರೇಯಸ್‌ನನ್ನು ನೋಡಿ ಶಾಂತಜ್ಜಿಗೆ ಆಶ್ಚರ್ಯವಾಯಿತು. ಅವರನ್ನು ಗಮನಿಸದವನಂತೆ ಜೀಪು ಹತ್ತಿ ಸ್ಟಾರ್ಟ್ ಮಾಡಿದ.

ಫಾರ್ಮ್ ಹೌಸಿನತ್ತ ಹೊರಟ. ಕೋಳಿ ಪೌಲ್ಟ್ರಿ ಸರಿಯಾಗಿ ಸ್ವಚ್ಛಗೊಳಿಸಿಲ್ಲವೆಂದು ಹರಡಿದ್ದ

ಇಲ್ಲಿಯವರೆಗೆ...

ಅನಾಥಳಾದ ಸುಂದರ ಹುಡುಗಿ ಚೈತ್ರಳನ್ನು ಶ್ರೇಯಸ್ ಮದುವೆಯಾಗಿ ತನ್ನ ಎಸ್ಟೇಟಿಗೆ ಕರೆತರುತ್ತಾನೆ. ಅಲ್ಲಿ ಅವಳಿಗೆ ಏನೋ ಅವ್ಯಕ್ತ ಭಯ, ಏನೋ ಸಂಚಿನ ವಾಸನೆ. ಬೆದರಿಕೆಯ ಪತ್ರಗಳು ಅವಳನ್ನು ಕಂಗಾಲಾಗಿಸುತ್ತವೆ. ಆಕೆ ಮನೆ ಬಿಟ್ಟು ಹೋಗುತ್ತಾಳೆ. ....ಮುಂದೆ ಓದಿ

ದುರ್ಗಂಧ ಸಾರಿತು. ಜೀಪು ಕಂಡೊಡನೆ ಕೆಲಸಗಾರರು ಅವನ ಕೆಂಗಣ್ಣಿಗೆ ನಡುಗುತ್ತ ಕೆಲಸಕ್ಕೆ ಹಾಜರಾದರು.

ಹಸುಗಳ ಫಾರ್ಮ್ ಕೂಡ ಹಾಗೇ ಅಸ್ತವ್ಯಸ್ತವಾಗಿತ್ತು. ಎಲ್ಲೆಲ್ಲೂ ಒಮ್ಮೆಲೇ ಮುಂಚಿನಂತೆ ಚಟುವಟಿಕೆ ಮೂಡಿತು. ಆಫೀಸು ರೂಮಿಗೆ ಬೀಗ ಹಾಕಿತ್ತು. ಬೀಗದ ಕೈ ಅವನ ಬಳಿಯಲ್ಲೊಂದಿತ್ತು. ಲೆಕ್ಕಗಳು ಎಂಟು ದಿನದಿಂದ ದಾಖಲಾಗಿರಲಿಲ್ಲ.

ಜೀಪಿನ ಕರಿಯಣ್ಣ ಹತ್ತಿರ ಕಂಡ. "ಕರಿಯಣ್ಣ, ಮಿ. ಪ್ರಮೋದ್‌ರನ್ನು ಹುಡುಕಿ ಕರ್ಕೊಂಡು ಬಾ ಇಲ್ಲಿ." ಹತ್ತು ನಿಮಿಷದಲ್ಲಿ ಪ್ರಮೋದ್ ಒಳಗೆ ಬಂದ.

"ಯಾಕೆ ಮಿ. ಪ್ರಮೋದ್, ಎಂಟು ದಿನದ ಲೆಕ್ಕ ಹಚ್ಚಿಲ್ಲ."

"ಅದೂ... ಅದೂ... ನಂಜುಂಡಯ್ಯನವರಿಗೆ ಶುಕ್ರವಾರ ಸೀರಿಯಸ್ಸಾಗಿತ್ತು." ಕೈ ಹೊಸೆಯುತ್ತ ನುಡಿದನಾತ.

"ಏನಾದ್ರೇನು, ಲೆಕ್ಕ ಹಚ್ಚಕ್ಕೇನು ದಾಡಿ?"

ಎಷ್ಟೋ ಬಾರಿ ಚೈತ್ರ ಎಚ್ಚರಿಸುತ್ತಲೇ ಇದ್ದಳು ಇವನ ಬಗ್ಗೆ. ನಂಬಿಕೆ ಇಟ್ಟಿದ್ದೇ ತಪ್ಪಾಗಿ ಹೋಯ್ತು. ಇವನ ಜೊತೆಗಾರರ ನೆನಪಾಯ್ತು. "ಎಲ್ಲಿ ನಿಮ್ಮ ಕಸಿನ್‌ರು?"

"ಯಾರು ಸಾಹೇಬ್ರೆ?"

"ಅದೇ ಇಲ್ಲಿ ನಿಮ್ಜೊತೆಗೆ ಇರ್ತಿದ್ರಲ್ಲ."

"ಎಲ್ಲ ನಿನ್ನೆ ರಾತ್ರೆ ಹೊರಟ್ಹೋದ್ರು ಸಾಹೇಬ್ರೆ."

"ನಾನು ಬಂದಿದ್ದು ತಿಳಿದಿದ್ದೇ ಹೋಗಿರ ಬಹುದು. ನಿಮ್ಮ ಅಣ್ಣ ಹಮೀದ್ ಉರ್ಫ್ ರಜಾಕ್, ಯಾಸ್ಮಿನ್ ಉರ್ಫ್ ಜಾಕ್ಸನ್ ಚೆನ್ನಾಗಿರಬೇಕಲ್ವೆ."

ಮಿ. ಪ್ರಮೋದ್‌ನ ಮುಖ ಬಿಳುಚಿಕೊಂಡಿತು.

"ಇದು ಮುಂಬಯಿಯಲ್ಲ, ನೆನಪಿರಲಿ. ಇವತ್ತು ಕೂತುಕೊಂಡು ಲೆಕ್ಕಾಚಾರ ಎಲ್ಲ ಸರಿ ಮಾಡಿ. ಮಧುಕರ್ ಉರ್ಫ್ ಕುಪ್ಪಣ್ಣನವ[...] ಮೇಲಿನ ನಂಬಿಕೆಯಿಂದ ನಿಮ್ಮನ್ನಿಲ್ಲಿ ಇಟ್ಕೊಂಡ[...] ಮೋಸ ಹೋಗ್ಬಿಟ್ಟೆ ಒಂದು ಪೈಸೆ ಗೋಲ್‌ಮಾಲ[...] ಆದ್ರೂ ಸುಮ್ಮನಿರಲ್ಲ ಎಚ್ಚರಿಕೆ."

"ಲೋ ಕರಿಯಣ್ಣ ಇವರು ಹೊರ[...] ಹೋಗದಂತೆ ನಿಗಾ ಇಡು. ಇವನ ಮನೆ[...] ಆಗಾಗ ಬರ್ತಿರ್ತಾರಲ್ಲ. ಅವರು ಕಂಡ್ರೆ ನಾಲ್ಕ[...] ಬಿಗಿದು ಕೂಡಿ ಹಾಕು." ಅವನಿಗರಿಯದಂ[...] ಸಿಟ್ಟು ಉಕ್ಕತೊಡಗಿತ್ತು. ಫಾರ್ಮ್ ಜೀವಕ್ಕಿಂ[...] ಹೆಚ್ಚು ಪೋಷಿಸಿದ್ದ, ಕಣ್ಣು ರೆಪ್ಪೆಗಳಲ್ಲಿ ಕಾಪಾಡಿದ್ದ[...]

"ನಂಜುಂಡಯ್ಯ ಎಲ್ಲಿದ್ದಾರೆ?" ಅವ[...] ಗರ್ಜನೆಗೆ ಎಲ್ಲ ನಡುಗಿದರು.

"ಹಾಸ್ಪಿಟಲ್‌ನಲ್ಲಿ ಸಾಹೇಬ್ರೇ?"

"ಯಾವ ಹಾಸ್ಪಿಟಲ್?"

"ಆಶಾ ನರ್ಸಿಂಗ್ ಹೋಂನಲ್ಲಿ ಇದ್ದಾರೆ."

ಆಶಾ ನರ್ಸಿಂಗ್ ಹೋಂಗೆ ಫೋನ್ ಮಾಡಿದಾಗ, ಸತೀಶ್ ಫೋನ್ ಎತ್ತಿದ.

"ಸಾಹೇಬ್ರೆ ಯಾವಾಗ ಬಂದ್ರಿ, ಮೇಡ[...] ಚೆನ್ನಾಗಿದ್ದಾರೇನು, ತಾತ ಅವತ್ನಿಂದ ಕೇಳ್ತಾ ಇದ್ದಾರೆ." ಹುಡುಗನ ಸ್ವರದಲ್ಲಿನ ಕಳಕ[...] ಮಾರ್ದವತೆಗೆ ಹೃದಯದ ಮೂಲೆಯಲ್ಲಿ[...] ಒಂದಿಷ್ಟು ಕಠೋರತೆ ಕರಗಿತು.

"ತಾತಂಗೆ ಹೇಗಿದೆ?"

"ಪರವಾಗಿಲ್ಲ ಸಾಹೇಬ್ರೆ, ಈಗ ನ[...] ಚಿಂತೆ ಕಳೀತು. ತಾತ ಹಾಸಿಗೆ ಬಿಟ[...] ಅಲ್ಲಾಡುವಂತಿಲ್ಲ. ತಲೆಗೆ ಪೆಟ್ಟು ಬಿದ್ದಿದ್ದರಿಂ[...] ಬಲಗಾಲು ಬಲಗೈ ಸ್ವಾಧೀನದಲ್ಲಿಲ್ಲ."

ಶ್ರೇಯಸ್ ಸ್ತಬ್ಧನಂತೆ ಕ್ಷಣಕಾಲ ನಿಂತಿದ್ದ[...]

"ಮಾತಾಡ್ತಾರೆ ತಾನೆ?"

"ಸ್ವಲ್ಪ ಸ್ವಲ್ಪವಾಗಿ."

"ಸರಿ ಈಗ ಬಂದೆ."

ಜೀಪು ಬಿಟ್ಟ ಬಾಣದಂತೆ ಆಶಾ ನರ್ಸಿಂಗ್ ಹೋಂಗೆ ಹೊರಟಿತು. ಶ್ರೇಯಸ್‌ನನ್ನು ಕಂಡ[...] ನಂಜುಂಡಯ್ಯನವರ ಕಣ್ಣು ತುಂಬಿ, ಹನಿಗ[...]



ಉರುಳಿದವು. ಎರಡೂ ಕೈ ಜೋಡಿಸಿ ನಮಸ್ಕರಿಸಿ ತೊದಲಿದರು.

"ಹೇಗಿದ್ದೀರಿ, ಅಮ್ಮಾ ಎಲ್ಲಿ?"

"ಚಿಕ್ಕಮ್ಮ ಎಲ್ಲಿ ಅಂತಿದ್ದಾರೆ ಸಾಹೇಬ್ರೇ?" ನಂಜುಂಡಯ್ಯ ತೊದಲುತ್ತಲೇ ಮಾತಾಡ ತೊಡಗಿದರು. ತಿಳಿಯದ್ದನ್ನು ಸತೀಶ್ ಬಿಡಿಸಿ ಹೇಳಿದ.

"ವಜ್ರದ ಒಡವೆಗಳನ್ನು ಚೈತ್ರ ಯಾಕೆ ಕೊಟ್ಟಳು?"

ತಾತನ ಕೈ ಸನ್ನೆಯಂತೆ ಹಿತೈಷಿಯ ಪತ್ರ ಕೊಟ್ಟ. ಓದಿ ಚೈತ್ರಳ ಕಳವಳ ಈಗ ಸ್ವಲ್ಪ ಮಟ್ಟಿಗೆ ಅರಿವಾಯಿತು. ಅಂದಿನ ಘಟನೆಗಳನ್ನೆಲ್ಲ ವಿವರಿಸಿದ. ತಾತ ಒಬ್ಬರೇ ಎಸ್ಟೇಟಿಗೆ ರಾತ್ರ ಹೊರಟಿದ್ದನ್ನು ಹೇಳಿದ. ತೊದಲು ನುಡಿ ಹೊರಟವು.

"ಎಸ್ಟೇಟಿಗೆ ಬಂದೆ. ಸುತ್ತಲೂ ಕತ್ತಲಿತ್ತು. ಮಂಟಪಕ್ಕೆ ಬಂದೆ. ಹಣವನ್ನು ಮುಂದಿದ್ದ ಕೆಳಗಿನ ಮರಡಿ ಹಳ್ಳದ ಸಮಾಧಿಯ ಕಲ್ಲಿನ ಮೇಲೆ ಇಟ್ಟು ಹಾರಿಹೋಗದಂತೆ ಕಲ್ಲಿಟ್ಟು ಮಂಟಪಕ್ಕೆ ಬಂದಾಗ ಹಿಂದೆ ಸದ್ದಾಯಿತು. ಇಬ್ಬರು ವ್ಯಕ್ತಿಗಳು ಕತ್ತಲಿಂದ ಹೊರಗೆ ಬಂದರು. ಅವರ್ಯಾರು ನೋಡುವ ಕುತೂಹದಿಂದ ಹತ್ತಿರ ಬಂದೆ. ಇಬ್ಬರೂ ಹಣವನ್ನು ಹಂಚಿಕೊಳ್ಳುತ್ತಿದ್ದರು. ಮುಂದಿನ ವಾರ ಇನ್ನೂ ಐವತ್ತು ಸಾವಿರ ಕೇಳಬೇಕೆಂದು ಅವರಿಬ್ಬರೂ ಮಾತಾಡಿಕೊಳ್ಳುವುದು ಕೇಳಿಸಿತು. ಏನಾದರಾಗಲಿ ಯಾರೆಂದು ನೋಡುವ ಕೆಚ್ಚು ಮೂಡಿತು. ಅವರಿಬ್ಬರೂ ಮಿ. ಪ್ರದೀಪ್‌ರ ಸಂಬಂಧಿಗಳು. ಅವರ ಗುರ್ತು ನನಗೆ ಹತ್ತಿತೆಂದು ಅವರಿಗೂ ಅರ್ಥವಾಗಿ ಬಿಟ್ಟಿತು.

"ಸಾಹೇಬ್ರು ಊರಿಂದ ಬರ್‍ಲಿ, ನಿಮಗೆ ಮುಂದೇನು ಕಾದಿದೆ ನೋಡ್ತಾ ಇರಿ."

"ನೀನು ಬದುಕಿದ್ರೆ ತಾನೆ." ತಲೆಗೊಂದು ಪೆಟ್ಟು ಬಿದ್ದು ರಕ್ತ ಹರಿಯಿತು. ಮುಂದಿನದು ನೆನಪಿಲ್ಲ." ತೊದಲು ಮಾತಿನಿಂದ ವಿವರಿಸಿದರು ನಂಜುಂಡಯ್ಯನವರು.

"ಪೋಲೀಸರಿಗೆ ಏನು ಹೇಳಿಕೆ ಕೊಟ್ರಿ?"

"ಮಂಟಪದಿಂದ ರಾತ್ರೆ ಕತ್ತಲಲ್ಲಿ ಜಾರಿಬಿದ್ದೆ."

"ಇದ್ದ ವಿಷಯ ಯಾಕೆ ಹೇಳಲಿಲ್ಲ ನಂಜುಂಡಯ್ಯನವರೆ?" ಅವನ ಸ್ವರ ಗದ್ಗದಿಸಿತು.

"ಹೇಳಿದ್ರೆ ಪೋಲೀಸರಿಗೆ ಅಮ್ಮನ ಬಗ್ಗೆ ಗೊತ್ತಾಗಿಬಿಡ್ತಿತ್ತು. ನೀವೂ ಊರಲ್ಲಿ ಇರಲಿಲ್ಲವಲ್ಲ. ಪಾಪ ಮಗು, ಬಹಳ ಸಂಕಟಪಟ್ಟರು." ನಂಜುಂಡಯ್ಯನವರ ವಾತ್ಸಲ್ಯಕ್ಕೆ ಅವನ ಕಣ್ಣುಗಳು ತುಂಬಿದವು. ಇಂಥ ನಿಷ್ಕಾಮ ಪ್ರೀತಿ ವಾತ್ಸಲ್ಯಕ್ಕೆ ಶಾಂತಜ್ಜಿ ಕಟ್ಟಿದ ಬೆಲೆ ಎಂತಾದ್ದು. ಅವನಿಗೆ ಸಂಕಟವಾಯಿತು.

"ನಂಜುಂಡಯ್ಯನವರೇ ದಯವಿಟ್ಟು ನನ್ನ ಕ್ಷಮಿಸಿಬಿಡಿ. ನಿಮ್ಮನ್ನು ಅರ್ಥ ಮಾಡಿಕೊಳ್ಳದೆ ಹೋದೆ."

"ಚಿಕ್ಕಮ್ಮಾ ಒಳ್ಳೆ ಹುಡುಗಿ ಶ್ರೇಯಸ್. ದಯವಿಟ್ಟು ಅವರನ್ನು ಮನೆಗೆ ಕರ್‍ಕೊಂಡು ಬನ್ನಿ. ತಾಯಿ ಮಾಡಿದ ತಪ್ಪಿಗೆ ಮಗಳಿಗೇಕೆ ಶಿಕ್ಷೆ." ಅವರ ತುಟಿಗಳು ಒಣಗಿದವು. ಹಣ್ಣಿನ ರಸ ಕುಡಿಸಿದ ಶ್ರೇಯಸ್.

"ತಾತನಿಗೆ ಮೇಡಂ ಒಡವೆ ಕೊಟ್ಟಿದ್ದರು. ತಾತ ಕದ್ದಿದ್ದ ಒಡವೆ ಮಾರ್‍ತಿದ್ರು ಅಂತ ಪೋಲೀಸ್‌ನವರು ಕೇಸ್ ಹಾಕಲು ನೋಡಿದ್ರು. ಆದರೆ ಮೇಡಂ, ಒಡವೆ ನನ್ನದೆ ಮಾರಲು ನಾನೇ ಕೊಟ್ಟಿದ್ದೆ ಅಂತ ಹೇಳಿದ್ರಿಂದ ಪೋಲೀಸರು ಬಿಟ್ಟರು. ತಾತನನ್ನು ತುಂಬ ಕಾಡಿಸಿದ್ರು. ಪ್ರಜ್ಞೆ ಬಂದನಂತರ ಪ್ರಮೋದ್‌ನ ಕಸೀನ್‌ಗಳು ಬಂದು ಬಂದು ತಾತನ್ನ ಹೆದರಿಸಿ ಹೋಗಿದ್ರಿಂದ, ಈ ನರ್ಸಿಂಗ್ ಹೋಂಗೆ ಶಿಫ್ಟ್ ಮಾಡ್ಬೇಕಾಯ್ತು." ಶ್ರೇಯಸ್‌ಗೆ ಕೋಪ ಹೊತ್ತಿಕೊಂಡಿತು. 'ರ್‍ಯಾಸ್ಕಲ್ ಇವ್ರನ್ನು ಪೋಲೀಸರಿಗೆ ಹಿಡಿದುಕೊಡಲೇಬೇಕು.'

"ಸತೀಶ್ ತಾತನ್ನ ಹುಶಾರಾಗಿ ನೋಡ್ಕೋ. ಎಷ್ಟೇ ಹಣ ಖರ್ಚಾಗಲಿ ಪರವಾಗಿಲ್ಲ. ಆದರೆ ಈ ಬ್ಲಾಕ್‌ಮೇಲರ್ಸನ್ನು ಹಾಗೇ ಬಿಡ್ಬಾರ್‍ದು. ಇವರ ಕೊಬ್ಬು ಇಳಿಸಬೇಕು."

(ಸಶೇಷ)

'ರಾಗಸಂಗಮ' ಲಾಟರಿ ಡ್ರಾ–೧೪೨

ಬಹುಮಾನ ರೂ. 200 ಇದ್ದ ಈ ಲಾಟರಿ ಡ್ರಾನಲ್ಲಿ ಒಟ್ಟು 1219 ಜನ ಭಾಗವಹಿಸಿದ್ದು ಈ ಕೆಳಕಂಡ ನಾಲ್ಕು ಜನ ಡ್ರಾನಲ್ಲಿ ವಿಜೇತರಾಗಿದ್ದಾರೆ. ವಿಜೇತರುಗಳಿಗೆ ಬಹುಮಾನದ ಹಣ ತಲಾ ರೂ. 50ರಂತೆ 3 ದಿನಗಳೊಳಗಾಗಿ ಕಳುಹಿಸಿ ಕೊಡಲಾಗುವುದು. ವಿಜೇತರಿಗೆ ಶುಭಾಶಯುಗಳು.

ವಿಜೇತರ ಹೆಸರು ಮತ್ತು ವಿಳಾಸ :

1. **ಎಸ್. ಎಲ್. ಸಂತೋಷಿಣಿ,** C/o ಶ್ರೀ ಬಾಲಾಜಿ ಸ್ಟೋರ್ಸ್, 105, ಮುಖ್ಯರಸ್ತೆ, **ಕಾಮಸಮುದ್ರಂ – 563 129,** ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.
2. **ಪದ್ಮಾ,** D/o ನರಸಿಂಹ, 'ಯಶಸ್ವಿನಿ', ಗೋಪಾಡಿ, **ಕೋಟೇಶ್ವರ – 576 222,** ಕುಂದಾಪುರ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.
3. **ಬಿ. ಎಸ್. ರಾಜೇಶ್ವರಿ,** W/o ಆರ್. ಆನಂದ, 116/3, ಕಂದವಾರ ಪೇಟೆ, **ಚಿಕ್ಕಬಳ್ಳಾಪುರ – 562 101,** ಕೋಲಾರ ಜಿಲ್ಲೆ.
4. **ಬಿ. ಎಸ್. ನಾಗಪ್ಪ,** ನೀರುಗುಂದ, **ಬಸವಾಗಟ್ಟ ಅಂಚೆ,** ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

ವಿ.ಸೂ. : 'ರಾಗಸಂಗಮ'ದ ಮುಂಬರುವ ಸಂಚಿಕೆಯಲ್ಲಿ ವಿಜೇತರುಗಳ ಭಾವಚಿತ್ರವನ್ನು ಪ್ರಕಟಿಸಲಿರುವುದರಿಂದ ವಿಜೇತರುಗಳು ತಮ್ಮ ಕಪ್ಪುಬಿಳುಪು ಪಾಸ್‌ಪೋರ್ಟ್ ಆಕಾರದ ಭಾವಚಿತ್ರವನ್ನು ಈ ಕೂಡಲೇ (ಎಂದರೆ ಒಂದು ವಾರದೊಳಗಾಗಿ) ನಮ್ಮ ಕೈ ಸೇರುವಂತೆ ಕಳುಹಿಸಿ ಕೊಡಬೇಕಾಗಿ ಕೋರುತ್ತೇವೆ.

ಮುಂದಿನ ಸಂಚಿಕೆ

ಶುಕ್ರವಾರ 2–10–92ರಂದು ಎಲ್ಲೆಡೆ ಲಭ್ಯ

ಈ ಸಂಚಿಕೆಯಲ್ಲಿ

ಚಕ್ಕಿಲಂ ವಿಜಯಲಕ್ಷ್ಮಿ / ಎಸ್. ಡಿ. ಕುಮಾರ್ ಅವರ

ಬೆಳಕು ಮೂಡದ ಹಾದಿ

ಸಂಪೂರ್ಣ ಕಾದಂಬರಿ ಪ್ರಕಟವಾಗುತ್ತದೆ

'ಕೆಎಸ್ನಾರ್'ರವರಿಂದ ಉತ್ತರಕ್ಕೆ ಅರ್ಹವೆನಿಸಿಕೊಂಡ ಈ ಕೆಳಗಿನ ಎಲ

ಪ್ರಶ್ನೋತ್ತರ

'ಕೆಎಸ್ನಾರ್'

* ಪಿ. ಎನ್. ಶ್ರೀವತ್ಸ,
ಬೆಂಗಳೂರು

ಪ್ರತಿಯೊಬ್ಬರಲ್ಲೂ ದೇವರು ಏನಾದರೂ ಒಂದು ಕೊರತೆ ಇಟ್ಟೇ ಇರುತ್ತಾನಲ್ಲವೇ?

— ಕೊರತೆ ಇಲ್ಲದೆ ಹೋದರೆ ಮಾನವನಾಗಿ ಉಳಿಯಲು ಸಾಧ್ಯವಿಲ್ಲ.

* ಕಣತೂರು ಕೆಂಪರಾಜ್, ಚಿಕ್ಕಬಳ್ಳಾಪುರ

ಸರ್ಕಾರಿ ನೌಕರರಿಗಿರುವಂತೆ ರಾಜಕಾರಣಿಗಳಿಗೆ ನಿವೃತ್ತಿಯನ್ನು ನಿಗದಿಪಡಿಸಿದರೆ ಹೇಗಿರುತ್ತಿತ್ತು?

— ನಿವೃತ್ತಿಯ ವೇಳೆಯಲ್ಲಿ ಹಕ್ಕಿನೊಂದಿಗೆ ಮಗನಿಗೆ ಕೆಲಸ ಕೇಳುವಂತೆ ಇಲ್ಲಿಯೂ ಕೇಳುತ್ತಿದ್ದರು.

* ಮಂಗಳ, ಮೈಸೂರು

ಹಣವಂತರೇ ಹೆಚ್ಚು ಹೆಚ್ಚು ಹಣ ಸಂಪಾದಿಸುತ್ತಾರಲ್ಲ, ಹೀಗಾದ್ರೆ ಕಷ್ಟಪಟ್ಟು ದುಡಿಯುವ ಬಡವರ ಗತಿ?

— ಹಳ್ಳ ಇರುವ ಕಡೆ ನೀರು ಸೇರುವುದು ಸಹಜ. ದಿಣ್ಣೆಯನ್ನು ಹಳ್ಳವಾಗಿ ಮಾಡುವ ಸತತ ಯತ್ನ ಕೈಗೊಳ್ಳಬೇಕು.

* ಜಿ. ಎಸ್. ಹೆಗಡೆ, ಬೆಂಗ್ರೆ

ಸಿನಿಮಾ ಇಂದಿನ ಸಮಾಜಕ್ಕೆ ಮಾರಕವೋ, ಮಾರ್ಗದರ್ಶಕವೋ?

— ಮಾರ್ಗದರ್ಶಕವಾಗಿರಬೇಕಾದುದನ್ನು ಮಾರಕವಾಗಿ ಮಾಡಿಟ್ಟಿದ್ದಾರೆ.

* ಸನ್ನಿ ಮೆಂಡೋನ್ಸ್,
ಕುಶಾಲನಗರ

ವೀರಪ್ಪನ್‌ನನ್ನು ಹಿಡಿಯಲು ಚಿತ್ರ ನ ಮಾಲಾಶ್ರೀಯನ್ನು ಬಿಟ್ಟರೆ ಹೇಗಿರುತ್ತ ಕೆಎಸ್ನಾರ್‌ರವರೇ?

— ಚಿತ್ರದಲ್ಲಿ ಹಿಡಿದೇ ತೀರುತ್ತಾರೆ.

* ಶ್ವೇತಾಶ್ವ, ಅಜ್ಜೀಪುರ

ನಿಮ್ಮ ಅನುಭವ, ತಿಳುವಳಿಕೆ, ಜ್ಞಾನದ ಪ್ರಕಾರ ಜೀವನ ಎಂದರೆ ಏನು?

— ಪರರಿಗೆ ದ್ರೋಹ, ವಂಚನೆ, ಮೋ ಮಾಡದೆ ಹಿತವನ್ನು ಆಶಿಸಿ ಬಾಳುವ ಗುಣ.

* ವೆಂಕಟೇಶ್ ಕೆ. ಜನಾದ್ರಿ, ಕನಕಗಿರಿ

ಭಾರತೀಯ ಸಂಸ್ಕೃತಿಯಲ್ಲಿ ಅವಿವಾಹಿ ತಾಯಿಯ ಸ್ಥಾನಮಾನವೇನು?

— ಕುಂತಿಗೆ ಸಿಕ್ಕಿದ ಗೌರವ ಸಿಗದಿದ್ದರೂ ಕನಿಷ್ಠ ಮಾನವನಿಗೆ ಸಿಗುವ ಗೌರವವಾದರೂ ಸಿಗಬೇಕು. ಆದರೆ ಸೂಳೆಯ ದೃಷ್ಟಿಯ ನೋಡುತ್ತಿರುವುದು ವ್ಯಥೆಯ ವಿಷಯ.

* ಪಿ. ಮಹೇಶ್, ಚೋಳೂರುಪಾಳ್ಯ

ಗಂಡು ಮಗು ಹುಟ್ಟಿದರೆ ಸಿಹಿ ಹಂಚ ವಂತೆ ಹೆಣ್ಣು ಮಗು ಹುಟ್ಟಿದೊಡನೆ ವ್ಯ ಪಡಲು ಕಾರಣವೇನು?

— ಹಿಂದಿನಂತೆ ಈಗ ಅಷ್ಟು ವ್ಯ ಪಡುವಂತೆ ಕಾಣುತ್ತಿಲ್ಲ. ಮುಂದೆ ವ್ಯಥೆ ಇಲ್ಲದ ಹೋಗುವುದರಲ್ಲಿ ಸಂಶಯವಿಲ್ಲ.

* ಸ್ವರ್ಣ,
ಶ್ರೀರಂಗಪಟ್ಟಣ

ಬಹಳ ಕಷ್ಟಪಟ್ಟು ಸೀತೆಯನ್ನು ಮದು ಯಾದ ಶ್ರೀರಾಮ ಅವಳನ್ನು ಕಾಡಿಗಟ್ಟಿದ್ದೇ ಅಂಕಲ್?

— ರಾಮಾಯಣ ಬರೆಯಲು.

ಎಸ್. ಜೆ. ಬಿ. ಕೋಯ, ನಾವುಂದ

ದೇವರು ಅಷ್ಟು ದೊಡ್ಡವನಿದ್ದರೂ ಅವನನ್ನು ಏಕವಚನದಲ್ಲಿ ಕರೆಯುವುದೇಕೆ?

— ಕಾರಣ, ಹಾಗೆ ಕರೆಯುವವರೊಂದಿಗೆ ಜಗಳಕ್ಕೆ ಬರಲಾರನು ಆತ.

* ಕುಮಾರಿ ಪುಷ್ಪಾ, ಮಣ್ಣಿಗೆ

ಸಮಯಪ್ರಜ್ಞೆ ಇಲ್ಲದ ಜನ ಕೈಗೆ ವಾಚ್ ಕಟ್ಟಿಕೊಳ್ಳಲು ಕಾರಣ?

— ರಾಜಕಾರಣಿ ಹಾಗೂ ಚಿತ್ರನಟಿಯರನ್ನು ಮನಸ್ಸಿನಲ್ಲಿಟ್ಟುಕೊಂಡು ಎಲ್ಲರಿಗೂ ಸಮಯಪ್ರಜ್ಞೆ ಇಲ್ಲವೆಂದು ಹೇಳುವುದು ತಪ್ಪು.

* ನಾಗೇಶ್ ಪಿ. ಕೋಟ್ಯಾನ್, ಕೊಪ್ಪಲಕಾಡು

ಪತ್ನಿಯೇ ದೇವರು ಎಂದು ಬೆಳಿಗ್ಗೆ ಎದ್ದು ಅವಳ ಪಾದಗಳಿಗೆ ನಮಸ್ಕಾರ ಮಾಡುವ ಗಂಡಸರು ಇದ್ದಾರಾ?



— ಇರಬಹುದು, ಪತ್ನಿಯ ದುಡಿಮೆಯಲ್ಲಿ ಜೀವನ ಸಾಗಿಸುತ್ತಿರುವವರು.

* ವೈ. ಎನ್. ಸುಂದರೇಶನ್, ಮೈಸೂರು

ರೇಸಿನಲ್ಲಿ ಗೆಲ್ಲುವ ಕುದುರೆಗೆ ಸಂಭಾವನೆ ಏನು?



— ಇಂದೂ, ಮುಂದೂ ಭರ್ಜರಿ ಆಹಾರ.

* ಕಲಬಿ ಶ್ರೀನಿವಾಸ್, ಮಾರ್ತಾಂಡಪುರ

ಹಿಂದೆ ಗುಣ ನೋಡಿ ಹೆಣ್ಣು ಕೊಡುತ್ತಿದ್ದರು. ಈಗ ಹಣ ನೋಡಿ ಹೆಣ್ಣು ಕೊಡುತ್ತಿದ್ದಾರೆ. ಮುಂದೆ ಏನು ನೋಡುತ್ತಾರೆ?

— ಕಾಲಚಕ್ರ ಬದಲಾದಂತೆ ಮತ್ತೆ ಗುಣ ನೋಡುವ ಅಗತ್ಯ ಬಂದೇ ಬರುತ್ತದೆ.

* ಎನ್. ಶಿವಶಂಕರಯ್ಯ, ಬೆಂಗಳೂರು

ಆಫೀಸುಗಳಲ್ಲಿ ಲಂಚ್ ಬ್ರೇಕ್ ಸಮಯ ಇದ್ದ ಹಾಗೆ ಲಂಚ ಬ್ರೇಕ್ ಸಮಯ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಅಲ್ಲವೇ?

— ಬಹಳ ದಿನಗಳ ಹಿಂದೆಯೇ ಲಂಚ್ ಬ್ರೇಕನ್ನು ಲಂಚದ ಬ್ರೇಕನ್ನಾಗಿ ಬದಲಾಯಿಸಿದ್ದಾಗಿದೆ.

* ಮಕ್ಕಳ ಕಥೆ *

ಜಲ ದೇವತೆ

ಎಂ. ಶಿವಾಜಿರಾವ್

ಒಂದು ನದಿಯ ದಂಡೆಯ ಬಳಿ ಮಣಿ ಎಂಬ ಹೆಸರಿನ ಒಬ್ಬ ಬೆಸ್ತನಿದ್ದನು. ನದಿಯಲ್ಲಿ ಮೀನನ್ನು ಹಿಡಿದು, ಪೇಟೆಯಲ್ಲಿ ಮಾರಿ ಬಂದ ಹಣದಿಂದ ಅವನು ಜೀವನ ನಡೆಸುತ್ತಿದ್ದನು.

ಒಂದು ದಿನ ಮಣಿ ಬೆಳಗ್ಗಿನಿಂದಲೇ ಬಲೆ ಹಾಕಿ ಕುಳಿತನು. ಮಧ್ಯಾಹ್ನವಾದರೂ ಒಂದೂ ಮೀನು ಸಿಗಲಿಲ್ಲ. ಅವನಿಗೆ ಬಹಳ ಯೋಚನೆಯಾಯಿತು. ಮೀನು ಸಿಗದಿದ್ದರೆ ಅಂದಿನ ಗತಿ ಏನು, ಊಟಕ್ಕೇನು ಮಾಡುವುದು ಎಂದು ಯೋಚಿಸುತ್ತ ಕುಳಿತನು. ಸಂಜೆಯಾಗುತ್ತ ಬಂದಿತು. ಬಿಸಿಲು ಕಡಿಮೆ ಆಗುತ್ತ ಕತ್ತಲೆಯು ನಿಧಾನವಾಗಿ ಆವರಿಸಲು ಪ್ರಾರಂಭವಾಯಿತು.

ಇದ್ದಕ್ಕಿದ್ದಂತೆಯೇ ಅವನ ಬಲೆಯಲ್ಲಿ ಏನೋ ಸಿಕ್ಕಿಕೊಂಡಂತೆ ಬಲೆಯು ಅತ್ತಿತ್ತ ಸುತ್ತಾಡತೊಡಗಿತು. ಮಣಿಯು ಬಲೆಗೆ ಏನೋ ಬಿತ್ತು ಎಂದು ಸಂತೋಷಪಟ್ಟು ಅದನ್ನು ಹಿಡಿದೆಳೆದನು. ಆದರೆ ಅದು ಭಾರವಾಗಿತ್ತು. ಮಣಿಗೆ ಎಳೆಯಲಾಗಲಿಲ್ಲ. ಬಲವಾಗಿ ಎಳೆಯಲು ಯತ್ನಿಸಿದ ಬೆಸ್ತನು ತಾನೇ ನೀರಿಗೆ ಬಿದ್ದನು.

ಕಣ್ಣು ತೆರೆದಾಗ ಮಣಿಯು ಯಾವುದೋ ನೆಲದ ಮೇಲೆ ಮಲಗಿದ್ದನು. ಸುತ್ತಲೂ ಕತ್ತಲೆ ಆವರಿಸಿತ್ತು. ನೀರು ಮೇಲ್ಭಾಗದಲ್ಲಿ ಹರಿಯುತ್ತಿರುವಂತೆ ಜುಳು ಜುಳು ಶಬ್ದ ಬರುತ್ತಿತ್ತು.

"ನಾನು ಎಲ್ಲಿದ್ದೇನೆ'' ಎಂದು ಬೆಸ್ತನು ತನ್ನನ್ನು ತಾನೇ ಪ್ರಶ್ನಿಸಿದನು. "ನೀನು ಜಲ ಲೋಕದಲ್ಲಿದ್ದೀಯೆ'' ಎಂದು ಯಾರೋ ಹೇಳಿದರು.

ಅದನ್ನು ಕೇಳಿ ಮಣಿಯು ಬೆಚ್ಚಿಬಿದ್ದು ಪಕ್ಕದಲ್ಲಿ ನೋಡಿದನು. ಅಲ್ಲಿ ಒಬ್ಬ ಮಹಿಳೆ ನಿಂತಿದ್ದಳು.

"ನೀನು ಯಾರು?'' ಬೆಸ್ತನು ಕೇಳಿದನು.

"ನಾನು ಜಲದೇವತೆ. ನೀನು ನನ್ನನ್ನು ಕೊಲ್ಲಲು ಯತ್ನಿಸಿದೆ ಯಾಕೆ?'' ಜಲದೇವತೆ ಪ್ರಶ್ನಿಸಿದಳು.

"ಜೀವನಕ್ಕಾಗಿ ಮೀನು ಹಿಡಿದು ಮಾರುವುದೇ ನನ್ನ ಕಸುಬು, ಅದಿಲ್ಲದಿದ್ದರೆ ನನ್ನ ಜೀವನ ಸಾಗುವುದಿಲ್ಲ.''

"ಹಾಗಾದರೆ ನಾನು ನಿನಗೆ ಸಹಾಯ ಮಾಡುತ್ತೇನೆ. ನೀನು ಮೀನು ಹಿಡಿಯುವುದನ್ನು ಬಿಟ್ಟು ಬಿಡಬೇಕು.''

"ಆಗಲಿ. ನನ್ನ ಜೀವನಕ್ಕೆ ಸಾಕಾಗುವಷ್ಟು ಹಣ ಸಿಕ್ಕರೆ ನಾನು ಮೀನು ಹಿಡಿಯುವುದನ್ನು ಬಿಟ್ಟು ಬಿಡುತ್ತೇನೆ.'' ಬೆಸ್ತನು ಹೇಳಿದನು.

"ಒಂದು ಶರತ್ತಿನ ಮೇಲೆ ನಿನ್ನನ್ನು ಶ್ರೀಮಂತನನ್ನಾಗಿ ಮಾಡುತ್ತೇನೆ.'' ಜಲದೇವತೆ ಹೇಳಿದರು.

"ಏನು?''

"ನಿತ್ಯವೂ ನೀನು ಈ ನದಿಯಲ್ಲಿ ವಾಸಿಸುವ ಜಲಜೀವಿಗಳಿಗೆ ಆಹಾರ ನೀಡಬೇಕು. ಅವುಗಳನ್ನು ಹಿಂಸಿಸಬಾರದು.''

"ಆಗಲಿ.''

"ಸರಿ, ನೀನು ಹೋಗು."

ಬೆಸ್ತ ಮಣಿ ತನ್ನ ಗುಡಿಸಲಿಗೆ ಹಿಂದಿರುಗಿ ಬಂದನು ಆದರೆ ಅಲ್ಲಿ ಗುಡಿಸಿರಲಿಲ್ಲ. ಒಳ್ಳೆಯ ಇಟ್ಟಿಗೆ, ಗಾರೆಗಳ ಮನೆಯಿತ್ತು. ಅವನ ಹೆಂಡತಿ, ಮಕ್ಕಳು ಒಳ್ಳೆಯ ಉಡುಪನ್ನು ಧರಿಸಿಕೊಂಡು ನಿಂತಿದ್ದರು.

ಅಂದಿನಿಂದ ಬೆಸ್ತನ ಬಡತನ ಹೋಯಿತು. ಮನೆಯಲ್ಲಿ ಶ್ರೀಮಂತಿಕೆ ತುಂಬುತ್ತಲೇ ಬಂದಿತು.

ಆದರೆ ಅವನು ಜಲದೇವತೆಗೆ ಕೊಟ್ಟ ಮಾತನ್ನು ಮರೆಯಲಿಲ್ಲ. ಪ್ರತಿನಿತ್ಯವೂ ಬೇಕಾದಷ್ಟು ಆಹಾರನ್ನು ಬಂಡಿಗಳಲ್ಲಿ



ಆಶ್ಚರ್ಯಗೊಂಡ ಬೆಸ್ತನು ಮನೆಯೊಳಕ್ಕೆ ಬಂದನು. ಮನೆಯಲ್ಲಿ ಮೂಟೆಗಳ ತುಂಬ ದವಸ, ಧಾನ್ಯಗಳಿದ್ದವು. ಕೊಟ್ಟಿಗೆಯಲ್ಲಿ ಹತ್ತಾರು ಹಸುಗಳಿದ್ದವು. ಎಲ್ಲೆಲ್ಲಿಯೂ ಶ್ರೀಮಂತಿಕೆ ತುಂಬಿತ್ತು. ಇದನ್ನು ಕಂಡು ಬೆಸ್ತನು ಆಶ್ಚರ್ಯಗೊಂಡನು.

ತುಂಬಿಕೊಂಡು ನದಿಯಲ್ಲಿನ ಜಲಚರಗಳಿಗೆ ಉಣಿಸುತ್ತಿದ್ದನು.

ಇದರಿಂದ ಅವನ ಐಶ್ವರ್ಯ ವೃದ್ಧಿಯಾಗುತ್ತಲೇ ಹೋಯಿತು. ಅವನು ಬಹಳ ಕಾಲ ಸುಖವಾಗಿ ಬಾಳಿದನು.

'ರಾಗಸಂಗಮ' ಚಿತ್ರ ವಿಮರ್ಶೆ

ಪ್ರಣಯದ ಪಕ್ಷಿಗಳು

ಪ್ಲಸ್ ಅಂಶಗಳು :

1) ಚಿತ್ರದ ಪ್ರಥಮಾರ್ಧದ ಲವಲವಿಕೆಯ ಕ್ಷಣಗಳು.

2) ರಮೇಶ್ ಹಾಗೂ ಕಾವ್ಯ ಅವರ ಅತ್ಯುತ್ತಮ ಅಭಿನಯ.

3) ರಮ್ಯ ಛಾಯಾಗ್ರಹಣ.

ಮೈನಸ್ ಅಂಶಗಳು :

1) ಚಿತ್ರದ ಪರಾಕಾಷ್ಠೆಯ ದೃಶ್ಯ.

2) ಅಂಜಲಿಯ ಅನವಶ್ಯಕ ಹಾಡು.

ವಿಮರ್ಶೆ :

ಯುವ ನಿರ್ದೇಶಕ ಮಹೇಂದರ್ ನಿರ್ದೇಶಿಸಿರುವ 'ಪ್ರಣಯದ ಪಕ್ಷಿಗಳು' ಚಿತ್ರ ನಿರೂಪಣೆಯ ಹೊಸತನಕ್ಕಾಗಿಯೇ ಆರಂಭದಲ್ಲಿಯೇ ಗಮನ ಸೆಳೆಯುವ ಚಿತ್ರ. ಚಿತ್ರದ ಆರಂಭದ ದೃಶ್ಯಗಳಲ್ಲಿಯೇ ನಿರ್ದೇಶಕರು ತಮ್ಮ ಮೊದಲ ಚಿತ್ರದಲ್ಲಿಯೇ ಮೆಚ್ಯೂರಿಟಿ ತೋರಿಸಿದ ಸೂಚನೆ ಕೊಡುತ್ತಾರೆ. ಈ ಚಿತ್ರದಲ್ಲಿ ಹಾಸ್ಯವನ್ನು ಪ್ರೇಕ್ಷಕರ ಮೇಲೆ ಹೇರದೆ ಸನ್ನಿವೇಶಗಳಲ್ಲಿಯೇ ಸರಳವಾಗಿ ಹಾಸು ಹೊಕ್ಕಾಗಿ ಹರಿಸಿರುವ ರೀತಿ ಮೆಚ್ಚುಗೆ ಪಡೆಯುತ್ತದೆ. ಹೀಗಾಗಿ ಚಿತ್ರದ ಪ್ರಥಮಾರ್ಧ ನೋಡಿದನಂತರ ಲವಲವಿಕೆಯ ದೃಶ್ಯಗಳಿರುವ ಒಳ್ಳೆಯ ಭಾಗ ನೋಡಿದ ತೃಪ್ತಿ ಇರುತ್ತದೆ. ಆದರೆ ದ್ವಿತೀಯಾರ್ಧದಲ್ಲಿ ಚಿತ್ರಕಥೆ ಬೆಳೆಸಿರುವ ರೀತಿ ಸರಿಯಾಗಿಲ್ಲ. ಒಟ್ಟಾರೆಯಾಗಿ ನೋಡಿದಾಗಲೂ ದ್ವಿತೀಯಾರ್ಧದ ಕೆಲವು

ಲಾಂಛನ : ಮಂಜುಪ್ರಸಾದ್ ಫಿಲಂಸ್
ನಿರ್ಮಾಪಕ : ಆರ್. ಶ್ರೀನಿವಾಸ್, ಕೆ. ರಂಗಸ್ವಾಮಿ (ಮೋಹನ್), ಡೈಮಂಡ್ ರಾಜ, ಆರ್. ಬಸವರಾಜ
ಚಿತ್ರಕಥೆ, ನಿರ್ದೇಶನ : ಮಹೇಂದರ್
ಛಾಯಾಗ್ರಹಣ : ಮುತ್ತುರಾಜ್
ಸಂಗೀತ : ಮನೋರಂಜನ್ ಪ್ರಭಾಕರ್
ತಾರಾಗಣ : ರಮೇಶ್, ಕಾವ್ಯ, ಅಂಜಲಿ, ವೆಂಕಿ, ಉದಯ್ ಹುತ್ತಿನಗದ್ದೆ, ಮಾನಸ ಮತ್ತು ಇತರರು.

ಸನ್ನಿವೇಶಗಳನ್ನು ಅನಗತ್ಯವಾಗಿ ಹಿಗ್ಗಿಸಿದಂತೆ ತೋರುತ್ತದೆ. ಈ ಚಿತ್ರ ನಿರ್ದೇಶಕ ಮಹೇಂದರ್ ಅವರ ಮೊದಲ ಪ್ರಯತ್ನವಾಗಿರುವುದರಿಂದ ಈ ಸಣ್ಣ ಪುಟ್ಟ ದೋಷಗಳನ್ನು ಅಲಕ್ಷಿಸಿ ಈ ಚಿತ್ರವನ್ನು ಕನ್ನಡ ಚಿತ್ರ ಪ್ರೇಕ್ಷಕರು ನೋಡಲೇ ಬೇಕಾದ ಚಿತ್ರ ಎನ್ನಬಹುದು. ಏಕೆಂದರೆ ಫ್ರೆಶ್‌ನೆಸ್‌ಗಾಗಿಯೇ ಈ ಚಿತ್ರ ಪ್ರೇಕ್ಷಕರ ಗಮನ ಸೆಳೆಯುವಂತಿದೆ.

ಮಹೇಂದರ್ ಅವರ ಬಗ್ಗೆ ಭರವಸೆ ಹುಟ್ಟುವಂತಹ ಎರಡು ಮೂರು ದೃಶ್ಯಗಳ ನಿರೂಪಣೆಯಲ್ಲಿ ಹೊಸತನ ಕಾಣಬಹುದು. ಉದಾಹರಣೆಗೆ ಚಲನಚಿತ್ರ ನಿರ್ಮಾಪಕನ ಬಳಿ ನಾಯಕ ರಾವಣನ ಪಾತ್ರದ ಸಂಭಾಷಣೆ ಹೇಳಿದಾಗ ನಗೆಯ ಅಲೆ ಉಕ್ಕುತ್ತದೆ. ಆದೇ ರೀತಿ ಹುಡುಗನಿಗೆ ಚಾಕಲೇಟ್ ಆಸೆ ಹುಟ್ಟಿಸಿದಾಗಿನ ದೃಶ್ಯದಲ್ಲೂ ಇದೇ ರೀತಿಯ ಹಾಸ್ಯ ಬೆರೆತ ನಿರೂಪಣೆ ಕಾಣಬಹುದು. ಪ್ರಥಮಾರ್ಧದಲ್ಲಿ ಸಣ್ಣ ಪುಟ್ಟ ದೃಶ್ಯಗಳ ನಿರ್ದೇಶನದಲ್ಲೂ ಈ ರೀತಿಯ ಎಚ್ಚರ ತೆಗೆದುಕೊಂಡಿದ್ದನ್ನು ಕಾಣಬಹುದು. ಒಟ್ಟಿನಲ್ಲಿ ಈ ನಿರ್ದೇಶಕರಿಗೆ ಉದ್ಯಮದ ಬೆಂಬಲದ ಅಗತ್ಯವಿದೆ.

ಚಿತ್ರದ ದ್ವಿತೀಯಾರ್ಧದ

ನಿರೂಪಣೆಯಲ್ಲಿ ನಿರ್ದೇಶಕರು ಎಡವಿದ್ದಾರೆ ಎನಿಸುತ್ತದೆ. ಮದುವೆ ತಪ್ಪಿ ಹೋದನಂತರ ನಾಯಕಿ ಮರಳಿ ಬರುವುದು, ಅವಳನ್ನು ನಾಯಕ ಹುಡುಕುವುದು ಇದೆಲ್ಲ ಹೆಚ್ಚು ಕಾಲ ಪುನರಾವರ್ತನೆಯಾದಂತಿದೆ. ಮತ್ತು ಹೃದಯರೋಗವಿರುವ ನಾಯಕ ತನ್ನ ಪ್ರೇಮಿಯ ಎದುರಿಗೆ ಕುಡಿದು ಬುದ್ಧಿವಾದ

ಯಾರಾದರೂ ನನ್ನಲ್ಲಿ ಕನ್ನಡ ಮೂಲದ ನಟಿಯರು ಗ್ಲಾಮರಸ್ ಆಗಿ ಕಾಣುವುದಿಲ್ಲ ಎಂದು ದೂರಿದರೆ ಅಂತಹವರನ್ನು 'ಪ್ರಣಯದ ಪಕ್ಷಿಗಳು' ಚಿತ್ರವನ್ನು ನೋಡುವುದಕ್ಕೆ ಹೇಳುತ್ತೇನೆ. ಕಾವ್ಯ 'ಕ್ಯೂಟ್' ಆಗಿರುವುದು ಮಾತ್ರವಲ್ಲ, ಅಭಿನಯದಲ್ಲೂ ತಾನು ಕಡಿಮೆ ಇಲ್ಲ ಎನ್ನುವುದನ್ನು ತೋರಿಸಿಕೊಂಡಿದ್ದಾರೆ.



ಹೇಳುವುದು ಅವಾಸ್ತವಿಕ. ದ್ವಿತೀಯಾರ್ಧದಲ್ಲಿ ಅಂಜಲಿಯ ಪಾತ್ರ ಪೋಷಣೆ ಹಾಗೂ ಆಕೆಯ 'ಗುಂಡಿನ' ಹಾಡು ಅನವಶ್ಯಕ ಎನಿಸುತ್ತದೆ. ಇಷ್ಟೆಲ್ಲ ದೋಷಗಳಿದ್ದರೂ ಚಿತ್ರವನ್ನು ಬೋರು ಹೊಡೆಸದಂತೆ ನಿರೂಪಿಸಿರುವುದರಲ್ಲಿ ಯಶಸ್ವಿಯಾಗಿರುವ ಮಹೇಂದರ್ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಅಭಿನಯದಲ್ಲಿ ಮುಖ್ಯ ಪಾತ್ರಗಳಲ್ಲಿರುವ ರಮೇಶ್ ಹಾಗೂ ಕಾವ್ಯ ಇಬ್ಬರೂ ಅತ್ಯುತ್ತಮವಾಗಿಯೇ ತಮ್ಮ ಪಾತ್ರ ನಿರ್ವಹಿಸಿದ್ದಾರೆ. ಇನ್ನು ಮುಂದೆ ವೆಂಕಿ ಹಾಗೂ ಉದಯ್ ಸಮರ್ಪಕವಾಗಿ ಅಭಿನಯಿಸಿದ್ದಾರೆ.

'ಪ್ರಣಯದ ಪಕ್ಷಿಗಳು' ನೋಡಬೇಕಾದ ಮತ್ತೊಂದು ಅಪ್ಪಟ ಕನ್ನಡ ಚಿತ್ರ.

○ಆರ್. ಜಿ. ವಿಜಯಸಾರಥಿ

46/100

ಅತಿ ಸಾಧಾರಣ: 40ರ ಕೆಳಗೆ ಸಾಧಾರಣ: 41–50
ಉತ್ತಮ : 51–60 ಅತ್ಯುತ್ತಮ : 61ರ ಮೇಲೆ

ಸಿನಿ ಬಿಟ್ಸ್

ಉಮಾಶ್ರೀ : ಉತ್ತಮ ಪಾತ್ರಗಳ ಬಗ್ಗೆಯೇ ಹೆಚ್ಚಿನ ಆಸಕ್ತಿ

ಒಂದೆರಡು ವರ್ಷಗಳ ಹಿಂದೆ ಉಮಾಶ್ರೀ ಬಹುತೇಕ ಚಿತ್ರಗಳಲ್ಲಿ ಅಭಿನಯಿಸುತ್ತಿದ್ದ 'ಬಿಜಿ' ನಟಿ ಎನಿಸಿದ್ದರು. ಆದರೆ ಕ್ರಮೇಣ ಆಕೆ ಅಭಿನಯಿಸುತ್ತಿರುವ ಚಿತ್ರಗಳ ಸಂಖ್ಯೆ ಗಮನಾರ್ಹ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ. ಆದರೆ ಉಮಾಶ್ರೀ ಈ ಅವಧಿಯಲ್ಲಿ ಕೈ ಕಟ್ಟಿಕೊಂಡು ಮನೆಯಲ್ಲೇನೂ ಕುಳಿತಿಲ್ಲ. ಆಕೆ ಉತ್ತರ ಕರ್ನಾಟಕದ ನಾಟಕಗಳಲ್ಲಿ ಅತಿ ಹೆಚ್ಚಿನ ಸಂಭಾವನೆ ಪಡೆಯುವ ನಟಿ ಎನಿಸಿದ್ದಾರೆ. ಕನ್ನಡ ರಂಗಭೂಮಿಯಲ್ಲಿ ದೊಡ್ಡ ಹೆಸರಾಗಿರುವ ಉಮಾಶ್ರೀ ಅಮೆಚೂರ್ ಹಾಗೂ ವೃತ್ತಿಪರ ನಾಟಕಗಳಲ್ಲಿ ಅಭಿನಯಿಸುತ್ತಿರುವ ಪಾತ್ರಗಳಲ್ಲೇ ಭಾರಿ ವ್ಯತ್ಯಾಸವಿದೆ. ಅದೇ ರೀತಿ ಆಕೆಯ ನಾಟಕಗಳಲ್ಲಿ ಹಾಗೂ ಸಿನಿಮಾಗಳಲ್ಲಿ ಸಿಗುತ್ತಿರುವ ಪಾತ್ರಗಳಲ್ಲೂ ಇದೇ ಮಾದರಿಯ ವೈವಿಧ್ಯವನ್ನು ಕಾಣಬಹುದು. ಈಗ ಆಕೆ ಚಲನಚಿತ್ರಗಳಲ್ಲಿ ಗಮನಾರ್ಹವಾದ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ನಟ ಸುಂದರಕೃಷ್ಣ ಅರಸ್ ನಿರ್ದೇಶನದ 'ಸಂಗ್ಯಾ ಬಾಳ್ಯ' ಹಾಗೂ ಮುರುಳಿ ಮೋಹನ್ ತಯಾರಿಕೆಯ ರೇಲಂಗಿ ನರಸಿಂಹ ರಾಯರ ನಿರ್ದೇಶನದ 'ಹೆಂಡ್ತಿ ಹೇಳಿದರೆ ಕೇಳ್ಬೇಕು' ಚಿತ್ರಗಳಲ್ಲಿ ಉಮಾಶ್ರೀಗೆ ಒಳ್ಳೆಯ ಪಾತ್ರಗಳಿವೆಯಂತೆ. 'ಈ ರೀತಿಯ ಉತ್ತಮ ಪಾತ್ರಗಳ ಬಗ್ಗೆಯೇ ಇನ್ನು ಮುಂದೆ ಚಿತ್ರರಂಗದಲ್ಲಿ ಹೆಚ್ಚಿನ ಆಸಕ್ತಿ ತೆಗೆದುಕೊಳ್ಳುತ್ತೇನೆ' ಎನ್ನುತ್ತಾರೆ ಉಮಾಶ್ರೀ.



○ ಸ್ವರ್ಣ

ಕ್ರೀಡಾಂಗಣ

ಜಿಮ್ಮಿ ಕಾನರ್ಸ್ : ಟೆನಿಸ್‌ನ ಶ್ರೇಷ್ಠ ಚಾಂಪಿಯನ್

22 ವರ್ಷಗಳ ಕಾಲ ಯಾವುದೇ ಕ್ರೀಡಾಪಟು ಒಂದು ಕ್ರೀಡೆಯಲ್ಲಿ ಮುಂದುವರೆದು ಶ್ರೇಷ್ಠ ಪ್ರದರ್ಶನವನ್ನು ನೀಡುವ ಸಾಮರ್ಥ್ಯ ಪಡೆದಿದ್ದಾನೆ ಎಂದರೆ ಅಂತಹ ಕ್ರೀಡಾಪಟು ಅಭಿನಂದನೆಗೆ ಅರ್ಹ ಎನ್ನಬೇಕು. ಲಾನ್ ಟೆನಿಸ್‌ನಲ್ಲಿ, ಈಗ 41 ವರ್ಷವಾಗಿರುವ ಜೇಮ್ಸ್ ಸ್ಕಾಟ್ ಕಾನರ್ಸ್ (ಜನಪ್ರಿಯ ಹೆಸರು ಜಿಮ್ಮಿ ಕಾನರ್ಸ್) ಇಂತಹ ಅಭಿನಂದನೆಗೆ ಪಾತ್ರರಾಗಿರುವ ಕ್ರೀಡಾಪಟು. ಈ ವರ್ಷದ ಮುಕ್ತ ಅಮೆರಿಕನ್ ಟೆನಿಸ್ ಸ್ಪರ್ಧೆಯಲ್ಲಿ ಆಡಿ ಒಂದು ಮಹತ್ವದ ಗೆಲುವು ಪಡೆದು ಅನಂತರ ಸೋತುಹೋದ ಕಾನರ್ಸ್ ದಿಟ್ಟ ಹೋರಾಟದ ಆಟ ನೀಡುವ ಕ್ರೀಡಾಪಟು ತಾವೆಂದು ತೋರಿಸಿ ಕೊಟ್ಟಿದ್ದಾರೆ. ಮಾನಸಿಕವಾಗಿ ಕ್ರೀಡೆಯಲ್ಲಿ ಮೇಲುಗೈ ಪಡೆದಿರುವಂತಹ ಕಾನರ್ಸ್ ಅವರಂತಹ ಆಟಗಾರ ಇನ್ನೊಬ್ಬರಿಲ್ಲ. ಕಾನರ್ಸ್ ಅವರ ಡಿಕ್ಷನರಿಯಲ್ಲಿ ನಿವೃತ್ತಿ ಎನ್ನುವುದೇ ಇಲ್ಲ. ಆಡಿದಷ್ಟು ಕಾಲವೂ ಚೆನ್ನಾಗಿ ಆಡಬೇಕು ಎನ್ನುವುದೇ ಅವರ ಪರಮ ಗುರಿಯಾಗಿದೆ. ಆತ ಗೆಲ್ಲಲಿ ಅಥವ ಸೋಲಲಿ, ಟೆನಿಸ್ ಅಂಗಣಕ್ಕೆ ಬಂದಾಗ 20ರ ಹರೆಯದ ಚಾಂಪಿಯನ್‌ನಂತೆ ಆಡುತ್ತಾರೆ ಕಾನರ್ಸ್. ಇದೇ ಕಾನರ್ಸ್ ಪುರುಷರ ಟೆನಿಸ್‌ನ ನಂಬರ್ ಒನ್ ಸ್ಥಾನವನ್ನು 159 ವಾರಗಳ ಕಾಲ ಆಕ್ರಮಿಸಿದ್ದರು. ವಿಂಬಲ್ಡನ್ ಹಾಗೂ ಅಮೆರಿಕಾ ಓಪನ್ ಚಾಂಪಿಯನ್‌ಶಿಪ್‌ನಲ್ಲಿ ಜಯಶಾಲಿಯಾಗಿದ್ದರು.

○ ಕ್ರೀಡಾಪ್ರಿಯ



ನಿಮ್ಮ ಭವಿಷ್ಯ

ಸ್ವಾಮಿ ನಿತ್ಯಾನಂದ

(ಭಾನುವಾರ 27–9–92ರಿಂದ
ಶನಿವಾರ 3–10–92ರವರೆಗೆ)

ರಾಶಿ	ಹೆಸರಿನ ಪ್ರಥಮ ಅಕ್ಷರ
ಮೇಷ	ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ
ವೃಷಭ	ಇ, ಉ, ಎ, ಒ, ವ, ವಿ, ವು, ವೆ, ವೊ
ಮಿಥುನ	ಕ, ಕಿ, ಕು, ಘ, ಙ, ಛ, ಕೆ, ಕೊ, ಹ
ಕಟಕ	ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ
ಸಿಂಹ	ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ
ಕನ್ಯಾ	ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ
ತುಲಾ	ರ, ರಿ, ರು, ರೆ, ರೊ, ತ, ತಿ, ತು, ತೆ
ವೃಶ್ಚಿಕ	ತೊ, ನ, ನಿ, ನು, ನೆ, ನೊ, ಯ, ಯಿ, ಯು
ಧನುಸ್ಸು	ಯೆ, ಯೊ, ಬ, ಬಿ, ಬು, ಧಿ, ಭ, ಢ, ಬೆ
ಮಕರ	ಬೊ, ಜ, ಜಿ, ಖಿ, ಖು, ಖೆ, ಖೊ, ಗ, ಗಿ
ಕುಂಭ	ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ
ಮೀನ	ದಿ, ದು, ಖ, ಝ, ಥ, ದೆ, ದೊ, ಚ, ಚಿ

ಮೇಷ

ಹಣಕಾಸಿನ ಪರಿಸ್ಥಿತಿ ಧಾರಾಳವೆನ್ನುವಂತಿರುತ್ತದೆ. ಉದ್ಯಮವು ವಿಶೇಷ ಹಂತ ಮುಟ್ಟುತ್ತದೆ. ಕುಟುಂಬದಲ್ಲಿ ಎಲ್ಲ ರೀತಿಯ ಶಾಂತಿ ನೆಮ್ಮದಿ ನೆಲೆಸುತ್ತದೆ. ಬಂಧು ಬಾಂಧವರು ಬಂದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ ಭಂಗವಾಗುವ ಸಾಧ್ಯತೆಯುಂಟು. ಸ್ನೇಹಿತರ ವಿಷಯದಲ್ಲಿ ಎಚ್ಚರಿಕೆ ಅತ್ಯಗತ್ಯ. ಕಿರಿಯರ ಸಹಕಾರ ಸಿಗುವುದರಿಂದ ಮುನ್ನಡೆ ವೇಗಗೊಳ್ಳುತ್ತದೆ. ಹೊರ ವ್ಯವಹಾರ ಉತ್ತಮ.

ವೃಷಭ

ಕುಟುಂಬದಲ್ಲಿ ಸಂತೋಷ ನೆಲೆಸುತ್ತದೆ. ಬಂಧು ಬಾಂಧವರಿಂದ ಮನಸ್ಸಂತೋಷವೂ, ಆದಾಯವೂ ಇದೆ. ಉದ್ಯಮ ಚೆನ್ನಾಗಿ ನಡೆಯುತ್ತದೆ. ಹೊಸ ಪ್ರಯತ್ನಗಳಲ್ಲಿ ನಿಮ್ಮ ಮನಸ್ಸು ನೆಟ್ಟಲ್ಲಿ ಯಶಸ್ಸು ಕಾಣಲವಕಾಶವುಂಟು. ಹಣಕಾಸಿನ ಪರಿಸ್ಥಿತಿ ಉತ್ಸಾಹ ತುಂಬುವಂತಿರುತ್ತದೆ. ಎದುರು ನೋಡಿರದ ಲಾಭವನ್ನು ಕಾಣುವಿರಿ.

ಮಿಥುನ

ಹಣಕಾಸು ದಿಢೀರ್ ವರಮಾನಗಳಿಂದಾಗಿ ಉಬ್ಬಿಕೊಳ್ಳುತ್ತದೆ. ಆದರೆ ವೆಚ್ಚದ ವಿಷಯದಲ್ಲಿ ಎಚ್ಚರಿಕೆ ಇರಬೇಕು. ಇಲ್ಲದಿದ್ದರೆ ಬಂದದ್ದೆಲ್ಲ ಹೋಗುತ್ತದೆ. ಉದ್ಯೋಗದಲ್ಲಿ ಘನತೆ, ಪದವಿ ಹೆಚ್ಚುತ್ತದೆಯಾದರೂ ಧನಾದಾಯವುದಿಲ್ಲ. ಕುಟುಂಬ ಜೀವನದಲ್ಲಿ ಒಂದು ರೀತಿಯ ಗಲಿಬಿಲಿ, ಭಯ ಎದ್ದು ಕಾಣುತ್ತದೆ. ಮಕ್ಕಳ ನಡೆ ಮನಸ್ಸಿಗೆ ನೋವಾಗಬಹುದು.

ಕಟಕ

ಹಣಕಾಸಿನ ಪರಿಸ್ಥಿತಿ ಈ ವಾರ ಬಹಳ ಚೆನ್ನಾಗಿಯೇ ಇರುತ್ತದೆ. ಉದ್ಯಮವು ಹಲವು ಸಮಸ್ಯೆಗಳ ನಡುವೆ ಮುನ್ನಡೆಯುತ್ತಲೇ ಇರುತ್ತದೆ. ವ್ಯಾಪಾರ ಮಾಮೂಲು. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಮಾತು ಕೇಳುವುದು ತಪ್ಪದು. ಆದರೆ ಕೊನೆಗೆ ಎಲ್ಲವೂ ಸರಿಹೋಗುತ್ತದೆ. ಸಾಲದ ತೊಂದರೆ ಇರುತ್ತದೆ. ಹೊಸ ವಿಷಯಗಳತ್ತ ಮನಸ್ಸು ಹರಿಯಲಾರದು.

ಸಿಂಹ

ಉದ್ಯೋಗ ಪರಿಸ್ಥಿತಿ ಮುಳ್ಳಿನ ಹಾಸಿಗೆಯಾಗಿರುತ್ತದೆ. ಹಣಕಾಸಿನ ಪರಿಸ್ಥಿತಿ ಸಾಧಾರಣವಾಗಿರುತ್ತದೆ. ವಸ್ತು ಇತ್ಯಾದಿ ಸೇರಿಕೆ ತುಂಬ ಶ್ರಮದ ಕೆಲಸವಾಗಿರುತ್ತದೆ. ಕುಟುಂಬದಲ್ಲಿ ಸಣ್ಣ

ಸಣ್ಣ ತೊಂದರೆಗಳು, ತಕರಾರುಗಳು ಇದ್ದರೂ ಅಂತಿಮವಾಗಿ ಎಲ್ಲವೂ ಒಳಿತಾಗುತ್ತದೆ. ನಾಲಿಗೆಯನ್ನು ಹದ್ದುಬಸ್ತಿನಲ್ಲಿಡುವುದು ಅತ್ಯವಶ್ಯಕ. ಈ ವಾರವನ್ನು ಕೆಟ್ಟ ವಾರವೆಂದು ಹೇಳಲಾಗ ದಿದ್ದರೂ ಒಳ್ಳೆಯ ವಾರವೆಂದೂ ಹೇಳಲಾಗದು.

ಕನ್ಯಾ

ಹಣಕಾಸಿನ ಪರಿಸ್ಥಿತಿಯಲ್ಲಿ ಭಾರೀ ಬದಲಾವಣೆ ಕಾಣಬಹುದು. ಉದ್ಯಮವು ಸುಮಾರಾಗಿ ನಡೆಯುತ್ತದೆ. ಉದ್ಯೋಗದಲ್ಲಿ ಏನೋ ಒಂದು ಉದಾಸೀನತೆಯನ್ನು ಗುರುತಿಸ ಬಹುದು. ಒಟ್ಟಿನಲ್ಲಿ ಸಾಧಾರಣವಾದ ವಾರವಿದು. ಆಸ್ಪತ್ರೆಗೆ ಒಂದಷ್ಟು ವೆಚ್ಚ ಮಾಡಬೇಕಾದ ಸಂಭವವಿದೆ. ಕೆಲವು ಕುಟುಂಬಗಳಲ್ಲಿ ಮಂಗಳ ಕೆಲಸವೊಂದು ಜೋರಾಗಿ ನಡೆಯುತ್ತದೆ.

ತುಲಾ

ಈಗಿನ ಉದ್ಯಮವನ್ನು ಬಿಟ್ಟು ಬೇರೆ ಉದ್ಯಮಕ್ಕೆ ಹೋಗುವ ಸಂಭವವಿದೆ. ಗಟ್ಟಿ ನಿರ್ಧಾರ ಮಾಡಿದರೆ ಜಯವೂ ಇದೆ. ಕುಟುಂಬ ದಲ್ಲಿ ಮೇಲ್ನೋಟಕ್ಕೆ ಸುಮುಖವಾದ ನೆಲೆ ಇದೆ ಎಂದರೂ ಬೂದಿ ಮುಚ್ಚಿದ ಕೆಂಡದಂತೆ ಕೆಲವು ವಿಷಯಗಳು ಕಾಡುತ್ತಿರುತ್ತವೆ. ಹಣಕಾಸಿನ ವಿಷಯದಲ್ಲಿ ಒಂದು ರೀತಿಯ ಚುರುಕು ಕಂಡು ಬರುತ್ತದೆ. ಬರಬೇಕಾಗಿದ್ದ ಸಾಲ ಬರುತ್ತದೆ.

ವೃಶ್ಚಿಕ

ಹಣಕಾಸಿನ ವಿಷಯದಲ್ಲಿ ಹೇಳಬೇಕೆಂದರೆ ಸಾಧಾರಣವಾದ ವಾರವಿದು. ಆದರೆ ಹಣ ಇಲ್ಲ ಎಂಬ ಪರಿಸ್ಥಿತಿಯೇನೂ ಇಲ್ಲ. ಉದ್ಯೋಗದಲ್ಲಿ ರುವವರಿಗೆ ತುಂಬ ನೆಮ್ಮದಿಯಾದ ವಾರವಿದು. ಬಡ್ತಿ, ಮೆಚ್ಚಿನ ಕೆಲಸ ಸಿಗಲವಕಾಶವಿದೆ. ಮಕ್ಕಳ ಮುನ್ನಡೆ ಮನಸ್ಸಿಗೆ ಆನಂದ ತರುತ್ತದೆ. ಕೊಡು ಕೊಳ್ಳುವುದರಲ್ಲಿ ತುಂಬ ಎಚ್ಚರಿಕೆ ತೋರಿದರೆ ಎಲ್ಲವೂ ಲಾಭ.

ಧನುಸ್ಸು

ಉದ್ಯಮ ಒಳ್ಳೆಯ ರೀತಿಯಲ್ಲಿ ಲಾಭಕರವಾಗಿ ನಡೆಯುತ್ತದೆ. ಹೊಸ ಯುಕ್ತಿ, ನಡೆಗಳಿಂದ ಎದುರು ನೋಡಿರದ ಲಾಭ ಕಾಣಲವಕಾಶವುಂಟು. ಉದ್ಯೋಗದಲ್ಲಿರುವವರು ಬಡ್ತಿ ಕಾಣುವರು. ಸಂಬಳವೂ ಹೆಚ್ಚುತ್ತದೆ. ವಿವಾಹವಾಗದವರಿಗೆ ಮದುವೆಯ ಯೋಗ ಕೂಡಿ ಬರುತ್ತದೆ. ದೇಹಾರೋಗ್ಯ ನಾವು ಎಣಿಸಿದಷ್ಟು ಸುಗಮವಿಲ್ಲ. ನೋವು ಇರುತ್ತದೆ. ಹಣಕಾಸಿನ ವಿಚಾರದಲ್ಲಿ ಮುನ್ನೆಚ್ಚರಿಕೆ ಅತ್ಯಗತ್ಯ.

ಮಕರ

ಹಣಕಾಸಿನ ಪರಿಸ್ಥಿತಿ ಸಮಸ್ಯೆ ತುಂಬಿ ದ್ದಾಗಿ ಕಂಡುಬಂದರೂ ಅದನ್ನು ನಿಭಾಯಿಸು ವಲ್ಲಿ ನೀವು ಜಾಣ್ಮೆ ತೋರುವಿರಿ. ಕೆಲವರು ಸಾಲಗಳ ಶೂಲದಿಂದ ನರಳುವರು. ಉದ್ಯೋಗ ದಲ್ಲಿ ಸಹೋದ್ಯೋಗಿಗಳ ಅಸಹಕಾರದಿಂದಾಗಿ ನೆಮ್ಮದಿ ಕೆಡುತ್ತದೆ. ಸ್ನೇಹಿತರಲ್ಲಿ ಹಣ ಸಂಬಂಧ ವಾದ ತಕರಾರುಗಳು ಬಲಿಯಲವಕಾಶವುಂಟು.

ಕುಂಭ

ಹಣಕಾಸಿನ ವಿಷಯ ಹೇಳಬೇಕೆಂದರೆ ಅಷ್ಟು ಚೆನ್ನಾಗಿ ಏನೂ ಇಲ್ಲ. ಅಗತ್ಯದ ಸಾಲವೂ ಸಿಗುವುದಿಲ್ಲ. ಮಾಮೂಲಿ ಆದಾಯವೂ ತಗ್ಗುತ್ತದೆ. ಉದ್ಯಮವು ಇಕ್ಕಟ್ಟು ಬಿಕ್ಕಟ್ಟಿನೊಡನೆ ನಡೆಯು ತ್ತದೆ. ಉದ್ಯೋಗದಲ್ಲಿರುವವರು ನೆಮ್ಮದಿ ಕಾಣು ವುದು ಕಷ್ಟ. ಮನೆಯಲ್ಲಿ ಯಾರಾದರೊಬ್ಬರ ದೇಹಾರೋಗ್ಯ ಕೆಟ್ಟು ಚಿಂತೆ ತರುತ್ತದೆ. ಕುಟುಂಬ ಜೀವನ ಮಾಮೂಲು.

ಮೀನ

ಉದ್ಯೋಗದಲ್ಲಿ ಮೇಲಧಿಕಾರಿಯ ಕಿರಿಕಿರಿ ಹೆಚ್ಚಿ ನೆಮ್ಮದಿಯನ್ನು ತಿಂದುಬಿಡುತ್ತದೆ. ಮಾನಸಿಕ ಪರಿಸ್ಥಿತಿ ಗಲಿಬಿಲಿಗೊಂಡಿರುತ್ತದೆ. ಹಣಕಾಸಿನ ವಿಷಯ ಯಾವಾಗ ಹೇಗೆ ಎಂದು ಹೇಳಲಾಗದು. ಹಿಗ್ಗಿ ಕುಗ್ಗುತ್ತಿರುತ್ತದೆ. ಕೆಲವರು ಅನಗತ್ಯದ ದೂರ ಪ್ರಯಾಣವೊಂದನ್ನು ಮಾಡಬೇಕಾಗಿ ಬರುತ್ತದೆ. ಕುಟುಂಬದಲ್ಲಿನ ಅತೃಪ್ತಿ ಮನೋ ಚಂಚಲತೆಗೆ ದಾರಿಯಾಗುತ್ತದೆ.

ನಿಮ್ಮ ಪತ್ರಗಳು

ಡಿ. ಎಸ್. ರಾಘವೇಂದ್ರ,
ಕಾಡಮನೆ

13–9–92ರ ಸಂಚಿಕೆಯಲ್ಲಿ ಪ್ರಕಟವಾದ ಅನಸೂಯ ರಾವ್‌ರವರ ಸಂಪೂರ್ಣ ಕಾದಂಬರಿ **'ಜೀವನ ಚದುರಂಗ'** ಓದಿ ಸಂತೋಷವಾಯ್ತು. ಇದೊಂದು ಪತ್ತೇದಾರಿ ಕತೆಯಂತೆಯೇ ಮೂಡಿ ಬಂದಿದೆ.

ಕರೇಗೌಡ್ರ ಹಾಲಪ್ಪ,
ನರಸಾಪುರ

ಅನಸೂಯ ರಾವ್‌ರವರ **'ಜೀವನ ಚದುರಂಗ'** ಸಂಪೂರ್ಣ ಕಾದಂಬರಿ ಉತ್ತಮವಾಗಿ ಓದಿಸಿಕೊಂಡು ಹೋಯಿತು. ಸಣ್ಣ ಕಥೆ 'ತಾಯಿಯ ಬಲಿದಾನ' ಚೆನ್ನಾಗಿತ್ತು. ರಂಗಸ್ವಾಮಿ ನಾಗವಾರ ಅವರ 'ಬದುಕು ಭಿನ್ನತೆ' ಕವನ ಚೆನ್ನಾಗಿತ್ತು. 'ಸ್ವಚ್ಛಂದ ಸ್ವಪ್ನಗಳು' ಧಾರಾವಾಹಿ ಚೆನ್ನಾಗಿ ಕೊನೆಗೊಂಡಿತು.

ಬಿ. ಸನಾವುಲ್ಲಾ ಖಾನ್,
ಗೌರಿಬಿದನೂರು

ಅನಸೂಯ ರಾವ್‌ರವರ 'ಜೀವನ ಚದುರಂಗ' ಬಹಳ ಚೆನ್ನಾಗಿದ್ದು, ಬೇಸರವಿಲ್ಲದೆ ಓದಿಸಿಕೊಂಡು ಹೋಯಿತು. 'ಸ್ವಚ್ಛಂದ ಸ್ವಪ್ನಗಳು' ಧಾರಾವಾಹಿ 33 ವಾರಗಳ ಕಾಲ ನಮ್ಮನ್ನು ಬಹಳ ಚೆನ್ನಾಗಿ ರಂಜಿಸಿತು. 'ಜೀವನ ಗಂಗೋತ್ರಿ' ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. 'ಹಾಸ್ಯ ಸಂಗಮ' ಹಿಡಿಸಿತು.

ಶಂಕರನಾಗ್,
ಕಟ್ಟೆಬೆಳಗುಲಿ

ಅನಸೂಯ ರಾವ್‌ರವರ 'ಜೀವನ ಚದುರಂಗ' ಕಾದಂಬರಿ ತುಂಬ ಚೆನ್ನಾಗಿತ್ತು. ಹಾಗೂ ಎಸ್. ಸಚ್ಚಿದಾನಂದ್‌ರವರ ಸಣ್ಣ ಕಥೆ 'ತಾಯಿಯ ಬಲಿದಾನ' ತುಂಬ ಸ್ವಾರಸ್ಯಕರವಾಗಿತ್ತು.

ಪಿ. ದಿನೇಶ್ ಶೆಟ್ಟಿ ನೆಲ್ಲಿಕುಂಜೆ,
ಕಾಸರಗೋಡು

ಸತ್ಯಪ್ರಿಯರವರ ಮುಖಪುಟ ತುಂಬ ಚೆನ್ನಾಗಿ ಮೂಡಿ ಬಂದಿದೆ. ಸಣ್ಣ ಕಥೆ 'ತಾಯಿಯ ಬಲಿದಾನ' ತುಂಬ ಚೆನ್ನಾಗಿತ್ತು.

ಶೇಖರ್ ಸಾಲ್ಯಾನ್,
ಹಳೆಯಂಗಡಿ

ಒಂದು ಪುಟದ ಮಿನಿಕಥೆ 'ವ್ಯೂಹ' (ಎಸ್. ಪದ್ಮನಾಭ ಕರ್ಕೇರ) ರಸವತ್ತಾಗಿ ಮೂಡಿ ಬಂದಿದೆ. ಗಂಡು ಬೀರಿ ಹೆಣ್ಣಿನ ಆಹಂಭಾವಕ್ಕೆ ತಕ್ಕ ಶಾಸ್ತಿಯಾದುದು ಓದಿ ಸಂತೋಷವಾಯ್ತು. ನೈಜವಾಗಿ ಇಂತಹ ಘಟನೆ ನಮ್ಮ ಮಂಗಳೂರಲ್ಲಿ ನಡೆದಿದೆ. ಇಂತಹ ನೈಜತೆಯ ಕಥಾವಸ್ತುವಿಗೆ ಸದಾ ಸ್ವಾಗತ.

ಬಿ. ಎ. ಮೋಹನ್,
ಸೋಮವಾರಪೇಟೆ

ಮಿನಕಥೆ 'ವ್ಯೂಹ' ಇಂದಿನ ಹಲವು ಹುಡುಗಿಯರು ಒಮ್ಮೆ ಓದಲೇಬೇಕು.

ಸಂಜೀವ್‌ಕುಮಾರ್ ಜೋಶಿ,
ದಂಬಳ

ಒಂದು ಪುಟದ ಮಿನಿಕಥೆ 'ವ್ಯೂಹ' ತುಂಬ ಚೆನ್ನಾಗಿತ್ತು.

ಬಿಲ್ಲಾಡಿ ಸತೀಶ್‌ಕುಮಾರ್
ವಿ. ಹೇಮಾವತಿ,
ಹೊಸಪೇಟೆ

ಮುಖಪುಟ ಚೆನ್ನಾಗಿತ್ತು. ನಗೆಹನಿಗಳು ಇತ್ತೀಚೆಗೆ ಕಡಿಮೆಯಾಗ್ತಿವೆಯಲ್ಲ! ಈ ಬಾರಿಯ ರಂಗೋಲಿಗಳು ಚೆನ್ನಾಗಿದ್ದವು.

ಸಂಪಾದಕಿ ಮತ್ತು ಪ್ರಕಾಶಕಿ : ಕಮಲಾ ಸುಂದರ್ ರಾಜನ್, ಸಂಗಮ ಪ್ರಕಾಶನ, ಅಂಚೆ ಪೆಟ್ಟಿಗೆ 6646, 41, ಕೋಟೆ 'ಬಿ' ಬೀದಿ, ಬೆಂಗಳೂರು–2; ದೂರವಾಣಿ : 625004; ಮುದ್ರಕರು : ವಿ. ರಾಮಯ್ಯ, ಶ್ರೀ ಸತ್ಯನಾರಾಯಣ ಪ್ರೆಸ್, 31, ಜೆ.ಬಿ.ಲೇನ್, ಕಾಟನ್‌ಪೇಟೆ, ಬೆಂಗಳೂರು–53

How are you Mr. X



"ಏ ಸಂಪಾದಕಪ್ಪ, ಯಾರಾದ್ರೂ ನನ್ನ ಕುರಿತು ವ್ಯಂಗ್ಯ ಚಿತ್ರ ಬರೆದು ಕಳುಹಿಸಿದರೆ ಪ್ರಕಟಿಸಬೇಡ, ಹುಷಾರ್."



"ಮೈಮ್ಯಾಲ ಇಷ್ಟು ಒಡವಿ ಹಾಕ್ಕೊಂಡದ್ದು ನೋಡಿದ್ರ, ನೀನೂ ಶೇರು ಹಗರಣದಾಗ ಭಾಗಿ ಆಗಿರಲೇಬೇಕು, ನಡಿ ಠಾಣೆಗೆ."

ಹಾಸ್ಯ ಸಂಗಮ



"ಯಮಧರ್ಮಪ್ಪನೋರು ಆ ಉಗ್ರಗಾಮಿ ಮುಖಂಡನ ಪ್ರಾಣ ತಂದಿದ್ದಕ್ಕೆ, ಅದನ್ನು ಮರಳಿಸೋವರ್ಗೂ ಗಣೇಶಪ್ಪನ್ನ ಅಪಹರಿಸಿ ಒತ್ತೆ ಇಸಿಕೊಂಡಿದ್ದಾರೆ ಪ್ರಭು."



"ಇವ್ನೇ ನೋಡಪ್ಪಾ, ನನ್ನ ಬಗ್ಗೆ ಸಿಕ್ಕಾಪಟ್ಟೆ ವ್ಯಂಗ್ಯ ಚಿತ್ರ ಬರೆದ ಭಡವ."

ಎಲ್ಲೆಡೆ ಮಾರಾಟವಾಗುತ್ತಿದೆ

ಅಕ್ಟೋಬರ್ 4, 1992ರ ಸಂಚಿಕೆ

ಚುಟುಕ

ಸಮಗ್ರ ಸುದ್ದಿ ಸಾರಭರಿತ ಸಾಪ್ತಾಹಿಕ

- ನೀರಿಗೆ ಬೆಂಕಿ ಇಡಿ
- ಪ್ರತಿ ಊರಲ್ಲೂ ಟೆಲಿಫೋನಿರುವ ರಾಜ್ಯ
- ವಿದೇಶದ ಹಿಂದೂ ಆಲಯ
- ರಸ್ತೆಗಳ ಮುತ್ತಾತ್ತಾತ್ತಾತ
- ಭಾರತದ ಅತಿ ದೊಡ್ಡ ಗೋಣಿ
- ಮಗುವಿನ ಪಕ್ಕ ನೀವೇಕೆ?
- ನಾವು ಕತ್ತೆಗಳಲ್ಲ ಸ್ವಾಮಿ
- 3 ಕಾಲಿನ 40 ಅಡಿಯ ರಕ್ಕಸ
- ಪೆಯಿಂಟ್ ಮಾಡುವ ಹಕ್ಕಿ
- ಉಪ್ಪು ತಿಳಿದಷ್ಟು ಸಾಚಾ ಅಲ್ಲ
- ಫೋನು ಊರೊಳಗಿಂದ ಆಚೆಗೆ

ಇವುಗಳ ಬಗ್ಗೆ ಹೆಚ್ಚಿನ
ವಿವರಗಳು ಈ ಸಂಚಿಕೆಯಲ್ಲಿದೆ

ಬೆಲೆ ರೂ. 2–50 ಮಾತ್ರ

ಇದು 'ರಾಗಸಂಗಮ'ದ ಸೋದರ ಪತ್ರಿಕೆ